# ಕನ್ನಡ ನುಡಿ

ಸ್ಥಾಪನೆ: ೧೯೧೫

## ಜುಲೈ-ಸೆಪ್ಟೆಂಬರ್ ೨೦೨೪



೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆ



ಕ.ಸಾ.ಪ. ಮಹಾಪೋಷಕರಿಗೆ ಗೌರವ ಸಮರ್ಪಣೆ



೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಥಳ ಪರಿಶೀಲನೆ



೮೭ನೇ ಅಖಿಲ ಭಾರತ
ಕನ್ನಡ ಸಾಹಿತ್ಯ ಸಮ್ಮೇಳನದ
ಕನ್ನಡ ರಥಕ್ಕೆ ಚಾಲನೆ

**೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವಿಶೇಷ ಸಂಚಿಕೆ-೧**



'ಜನಸಾಮಾನ್ಯರಿಗೆ ಸಾಹಿತ್ಯ ಮಾಲೆ' ವಿಷಯಗಳ ಆಯ್ಕೆ ಸಮಿತಿ



ಕಸಾಪ ದಲ್ಲಿ ವಿವಿಧ ಅಕಾಡೆಮಿಗಳ ಸಮನ್ವಯತೆ ಸಭೆಯ ಉದ್ಘಾಟನೆ



ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಧ್ವಜಾರೋಹಣ

ಸ್ಥಾಪನೆ: ೧೯೧೫

# ಕನ್ನಡ ನುಡಿ

ಜುಲೈ ೨೦೨೪ – ಸೆಪ್ಟೆಂಬರ್ ೨೦೨೪

ಸಂಪುಟ : ೯೧


ಅಧ್ಯಕ್ಷರು
ನಾಡೋಜ ಡಾ. ಮಹೇಶ ಜೋಶಿ

ಗೌರವ ಕಾರ್ಯದರ್ಶಿ
ನೇ.ಭ. ರಾಮಲಿಂಗಶೆಟ್ಟಿ

ಗೌರವ ಕಾರ್ಯದರ್ಶಿ
ಡಾ. ಪದ್ಮಿನಿ ನಾಗರಾಜು

ಗೌರವ ಕೋಶಾಧ್ಯಕ್ಷರು
ಬಿ.ಎಂ. ಪಟೇಲ್‌ಪಾಂಡು

ಸಂಪಾದಕ
ಡಾ. ಡಿ.ಕೆ. ನಟರಾಜ

ಸಂಪಾದಕ ಮಂಡಳಿ
ಪ್ರೊ. ಎನ್.ಎಸ್. ಶ್ರೀಧರಮೂರ್ತಿ
ಡಾ. ರಹಮತ್ ಕಂಬುಗಾರ
ಶ್ರೀ ಟಿ.ಎ.ಎಂ. ಕೊಟ್ರೇಶ್
ಡಾ. ಮೇಘನಾ ಕೆ.
ಶ್ರೀಮತಿ ಬ್ರಾಹ್ಮಿಲಾ ಮದನ್
ಶ್ರೀ ಎನ್ನೇಬಿ ಮೊಗ್ರಾಲ್‌ಪುತ್ತೂರು
ಶ್ರೀ ಪ್ರಶಾಂತ್ ಹೆಬ್ಬಾರ್

ಮುಖಪುಟ ಮತ್ತು ಒಳಪುಟ ವಿನ್ಯಾಸ
ಉದಯ ಕುಮಾರ್ ಹೆಚ್.



ವಿಳಾಸ

ಕನ್ನಡ ನುಡಿ
ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦-೨೬೬೧೨೯೯೧
೨೬೬೨೩೫೮೪ / ೨೨೪೨೩೫೮೭
ಜಾಲತಾಣ : http://www.kasapa.in
ಮಿಂಚಂಚೆ : kannadaparishattu@gmail.com
ಯೂಟ್ಯೂಬ್: http://www.youtube.com/c/KannadaParishattu
ಫೇಸ್‌ಬುಕ್ : ಕ.ಸಾ.ಪ. ಬೆಂಗಳೂರು


## ಅಧ್ಯಕ್ಷರ ನುಡಿ



ಈ **'ಕನ್ನಡ ನುಡಿ'** ಸಂಚಿಕೆಯು **'೮೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ವಿಶೇಷ ಸಂಚಿಕೆ-೧'** ಆಗಿದ್ದು, ಪರಿಷತ್ತು ಮತ್ತು ಸಮ್ಮೇಳನಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿಗಳನ್ನು ಒಳಗೊಂಡಿವೆ. **'ಕನ್ನಡ ನುಡಿ'**ಯ ಆನ್‌ಲೈನ್ ಸಂಚಿಕೆಗೆ ಉತ್ತಮ ಸ್ಪಂದನೆ ದೊರೆತಿರುವುದು ಸಂತಸದ ವಿಷಯವಾಗಿದೆ.

೧೯೫೬ರ ನವೆಂಬರ್ ೧ರಲ್ಲಿ **'ಕರ್ನಾಟಕ'** ಹೆಸರು ನಾಮಕರಣಗೊಂಡ ನಂತರದ ಮೊದಲ ಸಮ್ಮೇಳನವು ೧೯೭೪ರ ಮೇ ೩೧, ಜೂನ್ ೧, ೨ರಂದು ಮಂಡ್ಯದಲ್ಲಿ ನಡೆಯಿತಲ್ಲದೆ, ಜಯದೇವಿ ತಾಯಿ ಲಿಗಾಡೆಯವರು ಸಮ್ಮೇಳನಾಧ್ಯಕ್ಷರಾಗುವುದರ ಮೂಲಕ, ಮೊದಲ ಬಾರಿಗೆ ಮಹಿಳೆ ಯೊಬ್ಬರಿಗೆ ಅವಕಾಶ ದೊರೆತಿದ್ದದನ್ನು ಸ್ಮರಿಸುತ್ತೇನೆ. **'ಸುವರ್ಣ ಕರ್ನಾಟಕ'**ದ ಸಂದರ್ಭದಲ್ಲಿಯೂ **'ಸಕ್ಕರೆಯ ನಾಡು – ಅಕ್ಕರೆಯ ಬೀಡು'** ಮಂಡ್ಯದಲ್ಲಿಯೇ ಸಮ್ಮೇಳನವು ವಿಶೇಷವಾಗಿದ್ದು, ಅರ್ಥಪೂರ್ಣವಾಗಿ ನಡೆಯಬೇಕೆಂಬ ಮಹದಾಸೆಯನ್ನು ಪರಿಷತ್ತು ಹೊಂದಿದೆ. ಕನ್ನಡಿಗರ ಸಂಭ್ರಮದ ಹಬ್ಬವಾಗಿರುವ **'೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ'ವು ೨೦೨೪ರ ಡಿಸೆಂಬರ್ ೨೦, ೨೧ ಮತ್ತು ೨೨ರ ಶುಕ್ರವಾರ, ಶನಿವಾರ ಮತ್ತು ಭಾನುವಾರಗಳಂದು ಮಂಡ್ಯದಲ್ಲಿ** ನಡೆಯುತ್ತಿದ್ದು, ಈಗಾಗಲೇ ಕನ್ನಡಿಗರನ್ನು ಸಮ್ಮೇಳನಕ್ಕೆ ಆಹ್ವಾನಿಸುವಂತಹ **'ಕನ್ನಡ ರಥ'**ವು ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಸಂಚರಿಸಿ, ಸದ್ಯದಲ್ಲಿಯೇ ಮಂಡ್ಯ ಜಿಲ್ಲೆಯನ್ನು ಪ್ರವೇಶಿಸಲಿದೆ.

ಮಂಡ್ಯದಲ್ಲಿ ನಡೆಯುವ ೮೭ನೇ ಸಮ್ಮೇಳನದಲ್ಲಿ, **೮೭ ಪುಸ್ತಕಗಳು ಹಾಗೂ 'ಜನಸಾಮಾನ್ಯರಿಗೆ ಸಾಹಿತ್ಯ ಮಾಲೆ ಯೋಜನೆ' ಅಡಿಯಲ್ಲಿ ೫೦ ಸಣ್ಣ ಪುಸ್ತಕಗಳ ಬಿಡುಗಡೆಯ ಜೊತೆಗೆ, ೮೭ ಕರ್ನಾಟಕದ ಸಾಧಕರಿಗೆ ಹಾಗೂ ಕನ್ನಡದ ಕಂಪು ಸಾರಿರುವ ೫೦ ವಿದೇಶಿ ಗಣ್ಯರಿಗೆ ಗೌರವ ಸನ್ಮಾನ ಮಾಡಲಾಗುವುದು. ನಾಡು-ನುಡಿ, ಕನ್ನಡ ಶಾಲೆಗಳ ಸಬಲೀಕರಣ, ಸುವರ್ಣ ಕರ್ನಾಟಕ, ಕೃಷಿಕರ ಸಂಕಷ್ಟಗಳು, ಮಹಿಳಾ ಸಬಲೀಕರಣ, ವಿದ್ಯುನ್ಮಾನ ಮಾಧ್ಯಮ, ಜನಪದ ಮೌಖಿಕ ಪರಂಪರೆಗಳು ಮುಂತಾದ ವಿಷಯಗಳ ವಿಚಾರ ಗೋಷ್ಠಿಗಳು, ಹಾಗೂ ಕವಿಗೋಷ್ಠಿ**ಗಳನ್ನು ನಡೆಸುವುದರ ಜೊತೆಗೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ. ಪರಿಷತ್ತು ಹಮ್ಮಿಕೊಂಡಿರುವ ಮಹತ್ವದ ಯೋಜನೆಗಳನ್ನು ಯಶಸ್ವಿಗೊಳಿಸಲು ಕರ್ನಾಟಕ ಸರ್ಕಾರ ಮತ್ತು ಮಂಡ್ಯ ಜಿಲ್ಲಾಡಳಿತವು ಸಹಕಾರ ನೀಡುತ್ತಿರುವುದನ್ನು ಸ್ಮರಿಸಿಕೊಳ್ಳುತ್ತೇನೆ.

೮೭ನೇ ಸಮ್ಮೇಳನಕ್ಕೆ ಆಗಮಿಸುವ ಪ್ರತಿನಿಧಿಗಳ ಸಂಖ್ಯೆಯಲ್ಲಿಯೂ ಭಾರೀ ಪ್ರಮಾಣದಲ್ಲಿ ಏರಿಕೆಯಾಗಲಿದ್ದು, ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಶ್ರಮಿಸಲಾಗುತ್ತಿದೆ. ಈ ಸಂಭ್ರಮೋತ್ಸವದಲ್ಲಿ ಕನ್ನಡಿಗರಾದ ತಾವುಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, **'೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ"**ವನ್ನು ಅದ್ದೂರಿಯಾಗಿ ಮತ್ತು ಅರ್ಥಪೂರ್ಣವಾಗಿ ಯಶಸ್ವಿಗೊಳಿಸಲು ತಾವೆಲ್ಲರೂ ಜೊತೆಗೂಡಬೇಕೆಂದು ಈ ಮೂಲಕ ವಿನಂತಿಸುತ್ತೇನೆ.

ಕನ್ನಡ-ಕನ್ನಡಿಗ-ಕರ್ನಾಟಕವನ್ನು ಪ್ರತಿನಿಧಿಸುವ, ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ 'ಕನ್ನಡ ಸಾಹಿತ್ಯ ಪರಿಷತ್ತು' ಸದಾ ಕನ್ನಡಪರ ಚಿಂತನೆ ಮತ್ತು ಅವುಗಳ ಅನುಷ್ಠಾನ ಮಾಡುವುದರ ಮೂಲಕ, ಬಹುಸಂಖ್ಯಾತ ಕನ್ನಡಿಗರ ಮನೋಭಿಲಾಷೆಯನ್ನು ಪ್ರತಿನಿಧಿಸುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಜಗತ್ತಿನೆಲ್ಲೆಡೆ ಕನ್ನಡಿಗರು ತಮ್ಮ ಪ್ರಭಾವಳಿಯನ್ನು ಬೀರಿರುವಂತೆ, **'ಕನ್ನಡ ಸಾಹಿತ್ಯ ಪರಿಷತ್ತು'** ಸಹ ನಾಡಿನಾಚೆ, ದೇಶದಾಚೆ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಭಾವಿಸಲಾಗಿದೆ. ವಿದೇಶಗಳಲ್ಲಿರುವ ಸಂಘ-ಸಂಸ್ಥೆಗಳು, ಆಜೀವ ಸದಸ್ಯರುಗಳು ಕ್ರಿಯಾಶೀಲವಾಗಿ ಪರಿಷತ್ತಿನೊಂದಿಗೆ ನಿಕಟ ಸಂಪರ್ಕದಲ್ಲಿದ್ದು, **'೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ"**ಕ್ಕೆ ಅತ್ಯುತ್ಸಾಹದಿಂದ ಭಾಗವಹಿಸಲು ಧಾವಿಸುತ್ತಿದ್ದಾರೆ.

**"ನನ್ನ ಕನ್ನಡ ನುಡಿಯೆ ನೀನೆಷ್ಟು ಚಂದ, ಏನು ಗೀಚಿದರೂ ಆಗುವುದು ಶ್ರೀಗಂಧ**
**ಸಿಂಗರದ ಗಣಿ ನಿನ್ನ ಶಬ್ದ ಸಂಪತ್ತು, ಬಂಗಾರಕ್ಕಿಂತಲೂ ಶ್ರೇಷ್ಠ ನುಡಿಮುತ್ತು" – ದಿನಕರ ದೇಸಾಯಿ**

ದಿನಕರ ದೇಸಾಯಿಯವರ ಈ ಚುಟುಕವನ್ನು ಸ್ಮರಿಸಿಕೊಳ್ಳುತ್ತಾ, ಸಮಸ್ತ ಕನ್ನಡಿಗರಿಗೂ ೬೯ನೆಯ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. **'ಕನ್ನಡ ಸಾಹಿತ್ಯ ಪರಿಷತ್ತಿ'**ನ ಚಟುವಟಿಕೆಗಳಿಗೂ ಸಹಕಾರ ನೀಡುತ್ತಾ, ಕನ್ನಡ ಕಟ್ಟುವ ಕಾಯಕದಲ್ಲಿ ನಮ್ಮೊಡನೆ ಕೈಜೋಡಿಸುತ್ತೀರೆಂಬ ಆಶಯ ನಮ್ಮದು.

**ಗೌರವಪೂರ್ವಕವಾಗಿ,**

**ನಾಡೋಜ ಡಾ. ಮಹೇಶ ಜೋಶಿ**
ಅಧ್ಯಕ್ಷರು

## ನುಡಿ ಹೂರಣ


೧ ಅಧ್ಯಕ್ಷರ ನುಡಿ ೦೧

೨ ಸಂಪಾದಕೀಯ ೦೨

೩ ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆ ೦೩

೪ ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 'ಮಹಾಪೋಷಕ'ರಾಗಿ ಆದಿಚುಂಚನಗಿರಿ ಜಗದ್ಗುರುಗಳಾದ ಡಾ. ನಿರ್ಮಲಾನಂದನಾಥ ಮಹಾಸ್ವಾಮಿಗಳು ೦೪

೫ ನಾಡೋಜ ಡಾ. ಮಹೇಶ ಜೋಶಿ ಮತ್ತು ಪದಾಧಿಕಾರಿಗಳಿಂದ ೮೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಥಳ ಪರಿಶೀಲನೆ ೦೫

೬ ಕನ್ನಡ ರಥಕ್ಕೆ ಅದ್ಧೂರಿ ಸ್ವಾಗತ ನೀಡಿ ಸಮ್ಮೇಳನದ ಯಶಸ್ಸಿಗೆ ಸಹಕರಿಸಿ ೦೬

೭. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಜನಸಾಮಾನ್ಯರಿಗೆ ಸಾಹಿತ್ಯ ಮಾಲೆ ಯೋಜನೆ ೦೭

೮. ವಚನ ಸಾಹಿತ್ಯದ ವಿರಾಟ್ ಸ್ವರೂಪವನ್ನು ತೋರಿಸಿಕೊಟ್ಟ ಫ.ಗು. ಹಳಕಟ್ಟಿ ೦೮

೯ ಕನ್ನಡ ಕಥಾ ಸಾಹಿತ್ಯ (೧೯೧೫–೧೯೭೦ ರವರೆಗೆ) ೦೯

೧೦ ಕನ್ನಡ ಸಾಹಿತ್ಯ ಪರಿಷತ್ತಿಗೆ ಭೇಟಿ ನೀಡಿದ ಬ್ರಿಟನ್ ಸಾಹಸಿಗರು ೧೪

೧೧ ಅನೇಕತೆಯಲ್ಲಿ 'ಏಕತೆ'ಯನ್ನು ಸಾರಿದ ಶ್ರೇಷ್ಠ ಸಂತ ಶಿಶುನಾಳ ಶರೀಫರು ೧೫

೧೨ ಕಮಲಾ ಹಂಪನಾ ಅವರ ಅಗಲಿಕೆಯಿಂದ ಕನ್ನಡ ಸಾಹಿತ್ಯದ ಒಂದು ಯುಗ ಮುಕ್ತಾಯವಾಗಿದೆ ೧೭

೧೩ ಕನ್ನಡವನ್ನು ಬಹುಮುಖಿಯಾಗಿ ಬೆಳೆಸಿದ ಎಂ.ಆರ್.ಶ್ರೀ ೧೯

೧೪ ಕನ್ನಡ ಸಾಹಿತ್ಯ ಪರಿಷತ್ತಿಗೆ ಮಾಸ್ತಿ ಅವರ ಕೊಡುಗೆ ೨೦

೧೫ ಸಮಷ್ಟಿ ವಿಮರ್ಶೆ ೨೧

೧೬ ಶಿಕ್ಷಣ ಮಾಧ್ಯಮದ ಅವಶ್ಯಕತೆ ... ೨೬

೧೭ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್..೨೭

೧೮ ಕನ್ನಡ ಸಾಹಿತ್ಯ ಪರಿಷತ್ತಿನ ಅಡಿಪಾಯ ಭದ್ರಪಡಿಸಿದ ಪ್ರೊ. ಜಿ. ವೆಂಕಟಸುಬ್ಬಯ್ಯ ೨೮

೧೯ ಕನ್ನಡ ಸಾಹಿತ್ಯಕ್ಕೆ ಪೂರ್ಣಚಂದ್ರ ತೇಜಸ್ವಿ ಮತ್ತು ಎಂ.ವಿ.ಸೀ. ಅವರ ಕೊಡುಗೆ ಅಪಾರ ೨೯

೨೦ ಕನ್ನಡ ನಾಡು ಕಂಡ ದಾರ್ಶನಿಕ ಸರ್.ಎಂ.ವಿ. ೩೦

೨೧ ಕನ್ನಡ ಸಾಹಿತ್ಯಕ್ಕೆ ಸಾಮಾಜಿಕ ಕಳಕಳಿ ನೀಡಿದ ದಿನಕರ ದೇಸಾಯಿ ೩೧


* * *

## ಸಂಪಾದಕೀಯ

**ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು।**
**ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ॥**
**ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ।**
**ಜಸವು ಜೀವನಕೆ ಮಂಕುತಿಮ್ಮ॥ – ಡಿ.ವಿ. ಗುಂಡಪ್ಪ**

(ಯಾವುದೇ ಮರವು ಚಿಗುರುಗಳಿಂದ ಕೂಡಿದ್ದು, ಸುಂದರವಾಗಿದ್ದಲ್ಲಿ, ಕಾಂಡಕ್ಕೆ ಹೊಂದಿಕೊಂಡಿರುವ ಹಳೆಯ ಬೇರು ಕಾರಣವಾಗಿರುತ್ತದೆ. ಹಾಗೆಯೇ, ಪೂರ್ವಜರ ತತ್ತ್ವೋಪದೇಶ, ಶಾಸ್ತ್ರ ವಿಚಾರಗಳ ಮೇಲೆ ಹೊಸ ಆಲೋಚನೆಗಳು ಸೇರಿದರೆ ಜೀವನವು ಯಶಸ್ಸು ಕಾಣುತ್ತದೆ)

ಡಿ.ವಿ.ಜಿ.ಯವರ ಈ ಪದ್ಯವು, ಎಲ್ಲರ ಜೀವನಕ್ಕೂ ಅನ್ವಯವಾಗುವಂತಹದ್ದು ವ್ಯಕ್ತಿಯಲ್ಲಿರುವ ಜ್ಞಾನವು ಮತ್ತೊಬ್ಬರಿಗೆ ಹಿತವಾಗಿ ಪ್ರವಹಿಸುವ ಹೊನಲು ಆಗಬೇಕೇ ಹೊರತು, ಅಪ್ಪಳಿಸುವ ಪ್ರವಾಹವಾಗಬಾರದು. ಬೇರು ಕಾಂಡಕ್ಕೆ ಜೀವಂತಿಕೆ ನೀಡುವಂತೆ, ಜ್ಞಾನಿಗಳ ಅರಿವು ಅವಶ್ಯವಿದ್ದವರಿಗೆ ಪ್ರವಹಿಸುವಂತಿರಬೇಕು. ಇದನ್ನೇ ವಚನಕಾರರು, ಕೀರ್ತನಕಾರರು ಮತ್ತು ಸರ್ವಜ್ಞ ಮುಂತಾದವರು ಹೇಳಿರುವುದು.

'ಕಾಲಾಯ ತಸ್ಮೈ ನಮಃ' (ಕಾಲದೇವನೇ ನಿನಗೆ ನಮಸ್ಕಾರಗಳು) ಕಾಲಕ್ಕೆ ತಕ್ಕಂತೆ ಬದಲಾಗಬೇಕಾದ್ದು ಅನಿವಾರ್ಯತೆಯೂ ಹೌದು; ಅವಶ್ಯಕತೆಯೂ ಹೌದು. ಬದಲಾದ ಮನೋಸ್ಥಿತಿ ಮತ್ತು ಭೌತಿಕ ಸ್ಥಿತಿ–ಗತಿಗಳಿಗೆ ನಮ್ಮನ್ನು ಒಡ್ಡಿಕೊಳ್ಳುವುದು ಸೃಜನಶೀಲತೆಯ ಒಂದು ಭಾಗವಾಗಿದೆ. ಹಳೆಯದ್ದೆಲ್ಲವೂ ಚೆಂದವಾಗಿದ್ದರೂ, ಅದರ ಜೊತೆಯಲ್ಲಿಯೇ ಹೊಸತು ಮತ್ತಷ್ಟು ಸುಂದರವಾಗಿರುತ್ತದೆ ಎಂಬ ಮನೋಭಾವ ರೂಪಿಸಿಕೊಂಡಲ್ಲಿ, ಬದುಕು ಸೃಜನಶೀಲವೂ, ಸುಂದರವೂ ಆಗುತ್ತದೆ.

ಕನ್ನಡ ಭಾಷೆ ಮತ್ತು ಸಾಹಿತ್ಯ ಮತ್ತು ಸಂಸ್ಕೃತಿ ಉನ್ನತೀಕರಣವಾಗುತ್ತಿದ್ದು, ತನ್ನ ಅಸ್ಮಿತೆಯನ್ನು ಮುಂದುವರೆಸಿ, ಜೀವಂತಿಕೆಯನ್ನು ಉಳಿಸಿಕೊಂಡಿದೆ. ಕನ್ನಡದಲ್ಲಿ, ಪ್ರತಿ ವರ್ಷವೂ ಸಾವಿರಾರು ಕೃತಿಗಳು ಪ್ರಕಟವಾಗುತ್ತಿದ್ದು, ಅನಿವಾರ್ಯ ಕಾರಣಗಳಿಂದಾಗಿ ಅನೇಕ ಪುಸ್ತಕಗಳು ಅಪ್ರಕಟಿತವಾಗಿಯೇ ಉಳಿಯುತ್ತಿದೆ. ಸೃಜನಶೀಲತೆಯು ಮನುಷ್ಯನನ್ನು ಸದಾ ಜೀವಂತಿಕೆಯಾಗಿ ಉಳಿಸುವುದರ ಜೊತೆಗೆ, ಭಾಷೆ ಮತ್ತು ಸಂಸ್ಕೃತಿಯುನ್ನೂ ಜೀವಂತವಾಗಿಟ್ಟಿರುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನುಡಿ' ಪತ್ರಿಕೆಯು ಪರಿಷತ್ತಿನ ಚಟುವಟಿಕೆಗಳನ್ನು ದಾಖಲಿಸುವುದರ ಮೂಲಕ, ಮುಂದಿನ ದಿನಗಳಲ್ಲಿ ಪರಿಷತ್ತಿನ ಇತಿಹಾಸವನ್ನು ರಚಿಸಿಕೊಳ್ಳಲು ಸಹಾಯಕವಾಗುತ್ತಿದೆ. ಈ ಹಿನ್ನೆಲೆಯಲ್ಲಿಯೇ, ಪರಿಷತ್ತಿನ ಎಲ್ಲಾ ಚಟುವಟಿಕೆಗಳನ್ನು 'ಕನ್ನಡ ನುಡಿ' ದಾಖಲಿಸುವುದರ ಜೊತೆಗೆ, ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನಡೆಯುವ ಕನ್ನಡಪರ ಚಟುವಟಿಕೆಗಳ ವರದಿಗಳನ್ನು ಸೇರಿಸುವುದು ಅವಶ್ಯವಾಗಿದೆ.

"ಏನನ್ನಾದರೂ ಅರ್ಥ ಮಾಡಿಕೊಳ್ಳಬೇಕೆಂದಿದ್ದರೆ, ಅದನ್ನು ಕಲಿಯಲು ಪ್ರಯತ್ನಿಸುವುದು; ಅದನ್ನು ಅರ್ಥ ಮಾಡಿಕೊಳ್ಳುವ ಅತ್ಯುತ್ತಮ ಮಾರ್ಗ ಎಂದು ನನಗೆನಿಸುತ್ತದೆ" ಎಂದು ಪೂರ್ಣಚಂದ್ರ ತೇಜಸ್ವಿಯವರು 'ಅಣ್ಣನ ನೆನಪು' ಕೃತಿಯಲ್ಲಿ ಉಲ್ಲೇಖಿಸಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದೇನೆ. ನನ್ನ ಮೇಲೆ ನಂಬಿಕೆ ಇಟ್ಟು, ವಿವಿಧ ಚಟುವಟಿಕೆಗಳಲ್ಲಿ ನನ್ನನ್ನು ತೊಡಗಿಸಿಕೊಳ್ಳುವಂತೆ ಜವಾಬ್ಧಾರಿ ನೀಡಿರುವುದರ, ಮಾರ್ಗದರ್ಶನ ಮಾಡುತ್ತಿರುವ, ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರಾದ ನಾಡೋಜ ಡಾ. ಮಹೇಶ್ ಜೋಶಿ ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಪರಿಷತ್ತಿನ ಕೆಲಸ ಕಾರ್ಯಗಳಲ್ಲಿ ನನ್ನೊಂದಿಗೆ ಸಹಭಾಗಿಗಳಾಗಿ ಸಲಹೆಗಳನ್ನು ನೀಡುತ್ತಿರುವ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ನೇ.ಭ.ರಾಮಲಿಂಗಶೆಟ್ಟಿ, ಡಾ.ಪದ್ಮಿನಿ ನಾಗರಾಜು ಹಾಗೂ ಗೌರವ ಕೋಶಾಧ್ಯಕ್ಷರಾದ ಡಾ.ಬಿ.ಎಂ.ಪಟೇಲ್ ಪಾಂಡು ಅವರುಗಳಿಗೂ ಧನ್ಯವಾದಗಳು. 'ಕನ್ನಡ ನುಡಿ' ಪತ್ರಿಕೆಯ ಮುಖಪುಟ ಮತ್ತು ಒಳಪುಟ ವಿನ್ಯಾಸ ಮಾಡಿರುವ ಹೆಚ್.ಉದಯ ಕುಮಾರ್ ಅವರಿಗೆ ಹಾಗೂ ಸಹಕಾರ ನೀಡಿದ ಕಛೇರಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳು

**– ಡಾ. ಡಿ.ಕೆ. ನಟರಾಜ**
ಸಂಪಾದಕರು

# ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆ



ಮಂಡ್ಯದಲ್ಲಿ ನಡೆಯುತ್ತಿರುವ ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನವನ್ನು ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ವಿಧಾನಸೌಧದದಲ್ಲಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ, ಕರ್ನಾಟಕ ಸರ್ಕಾರದ ಮಾನ್ಯ ಸಚಿವರುಗಳಾದ ಶ್ರೀ ಶಿವರಾಜ ತಂಗಡಗಿ, ಉಸ್ತುವಾರಿ ಸಚಿವರಾದ ಶ್ರೀ ಚಲುವರಾಯಸ್ವಾಮಿ, ಶಾಸಕರಾದ ಬಂಡಿಸಿದ್ಧೇಗೌಡ, ಶ್ರೀ ನರೇಂದ್ರಸ್ವಾಮಿ, ಶ್ರೀ ದಿನೇಶ್ ಗೂಳಿಗೌಡ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ, ಶ್ರೀ ನೇ.ಭ.ರಾಮಲಿಂಗಶೆಟ್ಟಿ, ಡಾ.ಪದ್ಮಿನಿ ನಾಗರಾಜು ಮತ್ತು ಕೋಶಾಧ್ಯಕ್ಷರಾದ ಡಾ.ಬಿ.ಎಂ.ಪಟೇಲ್ ಪಾಂಡು ಅವರುಗಳು 'ಲಾಂಛನ' ಬಿಡುಗಡೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಂಡ್ಯದಲ್ಲಿ ೨೦೨೪ರ ಡಿಸೆಂಬರ್ ೨೦, ೨೧ ಮತ್ತು ೨೨ ಕ್ರಮವಾಗಿ ಶುಕ್ರವಾರ, ಶನಿವಾರ ಮತ್ತು ಭಾನುವಾರಗಳಂದು ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದು, ಸಮ್ಮೇಳನಕ್ಕೆ ಸಂಬಂಧಿಸಿದಂತೆ 'ಲಾಂಛನ'ದ ಬಿಡುಗಡೆಯ ನಂತರ, ಪರಿಷತ್ತಿನ ಮಾನ್ಯ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿ ಅವರು ಮಾತನಾಡುತ್ತಾ, 'ಅಕ್ಕರೆಯ ನಾಡು, ಸಕ್ಕರೆಯಬೀಡು' ಎಂಬ ಧ್ಯೇಯವಾಕ್ಯದೊಂದಿಗೆ ರೂಪುಗೊಂಡಿರುವ 'ಲಾಂಛನ'ದಲ್ಲಿ ಸಮ್ಮೇಳನದ ದಿನಾಂಕದೊಂದಿಗೆ, ಮಂಡ್ಯದ ಅಸ್ಮಿತೆ ಮತ್ತು ಸಂಸ್ಕೃತಿಯ ವೈಶಿಷ್ಟ್ಯತೆಯನ್ನು ಕಾಣಬಹುದು. ಜೀವನದಿ ಕಾವೇರಿ, ಕಬ್ಬು, ಬಿಸಿ ಬೆಲ್ಲ, ಹಸಿ ಭತ್ತದ ಹಾಗೂ ನೇಗಿಲಯೋಗಿ ರೈತ, ಶಿವನಸಮುದ್ರ–ಶಿಂಷಾ ಜಲವಿದ್ಯುತ್ ಯೋಜನೆ, ಗಗನಚುಕ್ಕಿ ಜಲಪಾತ, ಶಿವಪುರ ಧ್ವಜ, ಸತ್ಯಾಗ್ರಹ ಸೌಧ, ಸಕ್ಕರೆ ಕಾರ್ಖಾನೆ, ಕನ್ನಡ ಸಾಹಿತ್ಯ ಪರಿಷತ್ತಿನ ಲಾಂಛನ, ಮಂಡ್ಯ ಜಿಲ್ಲೆಯ ಸಂಸ್ಥಾಪಕರಾದ ನಾಲ್ವಡಿಯವರ ಭಾವಚಿತ್ರವನ್ನು ಒಳಗೊಂಡಿದೆ ಎಂದು ಹೇಳಿದರು.

**ಲಾಂಛನದ ವಿಶೇಷತೆ:**

೧. ಶಿವನಸಮುದ್ರ–ಶಿಂಷಾ ಜಲವಿದ್ಯುತ್ ಯೋಜನೆ: ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರದಲ್ಲಿ ೧೯೦೨ರಲ್ಲಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ, ಏಷ್ಯಾ ಖಂಡದಲ್ಲಿಯೇ ಸ್ಥಾಪನೆಯಾದ ಮೊಟ್ಟ ಮೊದಲ ಜಲವಿದ್ಯುತ್ ಕೇಂದ್ರವಾಗಿದೆ.

೨. ಗಗನಚುಕ್ಕಿ ಜಲಪಾತ: ಕಾವೇರಿ ನದಿಯಿಂದ ರೂಪಗೊಂಡ ಈ ಜಲಪಾತವು ೭೫ ಮೀಟರ್‌ಗಳಷ್ಟು ಗಗನದಿಂದ ಚುಕ್ಕಿ ಕೆಳಗೆ ಬೀಳುವಂತೆ, ಭಾಸವಾಗುವುದರಿಂದ ಇದಕ್ಕೆ "ಗಗನಚುಕ್ಕಿ ಜಲಪಾತ" ಎಂಬ ಹೆಸರು ಬಂದಿದೆ.

೩. ನೇಗಿಲಯೋಗಿ: ಮಂಡ್ಯ ಜಿಲ್ಲೆಯ ಪ್ರಧಾನ ಮೂಲ ಕಸುಬು ವ್ಯವಸಾಯವಾಗಿದ್ದು, 'ನೇಗಿಲಯೋಗಿ' ಚಿತ್ರವು ಉಳುಮೆ ಮಾಡುವ ರೈತನನ್ನು (ಅನ್ನದಾತ) ಬಿಂಬಿಸುತ್ತದೆ.

೪. ಶಿವಪುರದ ಸತ್ಯಾಗ್ರಹ ಸೌಧ: ೧೯೩೮ ಏಪ್ರಿಲ್ ೨೬ರಂದು, ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ, ಶ್ರೀ ಟಿ. ಸಿದ್ಧಲಿಂಗಯ್ಯ ಅವರು, ಭಾರತದ ಸ್ವಾತಂತ್ರ್ಯದ ಕುರುಹಾಗಿ ತ್ರಿವರ್ಣ ಧ್ವಜ ಹಾರಿಸಿ, ದೇಶಾಭಿಮಾನ ಮೆರೆದ ಸ್ಥಳವು ದೇಶಭಕ್ತಿಯ ತಾಣವಾಗಿದೆ.

೫. ಮಂಡ್ಯ ಸಕ್ಕರೆ ಕಾರ್ಖಾನೆ: ೧೯೩೩–೩೪ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಮೈಸೂರು ಕೃಷಿ ಅಧಿಕಾರಿಯಾದ ಕೋಲ್ಮನ್, ಸ್ಥಾಪಿಸಿದ 'ಮೈಸೂರು ಶುಗರ್ ಕಂಪನಿ ಲಿಮಿಟೆಡ್' ಸಂಸ್ಥೆಯಿಂದಾಗಿ ಮಂಡ್ಯ ಜಿಲ್ಲೆಗೆ "ಸಕ್ಕರೆ ಜಿಲ್ಲೆ" ಎಂಬ ಖ್ಯಾತಿ ಬಂದಿರುವುದರ ದ್ಯೋತಕವಾಗಿ ಈ ಚಿತ್ರವನ್ನು ಲಾಂಛನದಲ್ಲಿ ಸೇರಿಸಲಾಗಿದೆ.

೬. ದಿನಾಂಕ : ೨೦, ೨೧, ೨೨ ಡಿಸೆಂಬರ್ ೨೦೨೪ ಸಮ್ಮೇಳನ ನಡೆಯುವ ದಿನಾಂಕವನ್ನು ಸೂಚಿಸುತ್ತದೆ.

೭. ಕನ್ನಡ ಸಾಹಿತ್ಯ ಪರಿಷತ್ತಿನ ಲಾಂಛನ ಹಾಗೂ ಮಂಡ್ಯ ಜಿಲ್ಲೆಯ ಸಂಸ್ಥಾಪಕರಾದ ನಾಲ್ವಡಿಯವರ ಭಾವಚಿತ್ರ: ಕನ್ನಡ ಸಾಹಿತ್ಯ ಪರಿಷತ್ತಿನ ಲಾಂಛನ ಹಾಗೂ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಮಂಡ್ಯ ಜಿಲ್ಲೆಯ ಸಂಸ್ಥಾಪಕರೂ ಆದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರವನ್ನು ಒಳಗೊಂಡಿದೆ.

೮. ಲಾಂಛನದ ಒಳಭಾಗದಲ್ಲಿ: ಕೃಷ್ಣರಾಜಸಾಗರದ ವಿಹಂಗಮ ನೋಟ (ಕನ್ನಂಬಾಡಿ ಅಣೆಕಟ್ಟು), ತಾಯಿ ಕಾವೇರಿ ಮಾತೆ, ರಂಗನತಿಟ್ಟು ಪಕ್ಷಿಧಾಮ, ಭತ್ತ, ಕಬ್ಬಿನ ಹೂಗಳಿಂದ ಅಲಂಕೃತವಾದ ಲಾಂಛನದ ಮೇಲ್ಭ್ರ, ನಾಡದೇವತೆ ತಾಯಿ ಭುವನೇಶ್ವರಿ ಹಾಗೂ ಹಾರಾಡುತ್ತಿರುವ ಕನ್ನಡದ ಬಾವುಟ ಹೀಗೆ ಕನ್ನಡದ ಅಸ್ಮಿತೆ ಮತ್ತು ಮಂಡ್ಯದ ಅನನ್ಯತೆಯ ಹಾಗೂ ಹೆಗ್ಗುರುತುಗಳನ್ನು ಒಳಗೊಂಡ ಲಾಂಛನ, "ಸಕ್ಕರೆಯ ನಾಡು, ಅಕ್ಕರೆಯ ಬೀಡಿಗೆ" ಎಲ್ಲರನ್ನು ಸ್ವಾಗತಿಸುತ್ತದೆ. ★

## ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ‘ಮಹಾಪೋಷ’ಕ’ರಾಗಿ

# ಆದಿಚುಂಚನಗಿರಿ ಜಗದ್ಗುರುಗಳಾದ ಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳು



‘ಸಕ್ಕರೆಯ ನಾಡು ಅಕ್ಕರೆಯ ಬೀಡು’ ಮಂಡ್ಯದಲ್ಲಿ ೮೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿತವಾಗಿದ್ದು ಡಿಸೆಂಬರ್ ೨೦, ೨೧, ೨೨ರಂದು ಶುಕ್ರವಾರ, ಶನಿವಾರ, ಭಾನುವಾರ ನಡೆಯಲಿದೆ. ಮೂವತ್ತು ವರ್ಷಗಳ ನಂತರ ಮಂಡ್ಯದಲ್ಲಿ ಆಯೋಜಿತವಾಗಿರುವ ಈ ಸಮ್ಮೇಳನದ ಕುರಿತು ಕನ್ನಡಿಗರು ಅಪಾರ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಭವ್ಯ ಇತಿಹಾಸವಿರುವ ಚಾರಿತ್ರಿಕ ಮತ್ತು ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವ ಲಕ್ಷಾಂತರ ಭಕ್ತರ ನಂಬಿಕೆಯ ನೆಲವೀಡು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರನ್ನು ಸಮ್ಮೇಳನದ ‘ಮಹಾ ಪೋಷಕ’ರಾಗುವ ಕುರಿತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿ, ಗೌರವ ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ್ ಪಾಂಡು, ಗೌರವ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟಿ, ಸಂಶೋಧನಾ ವಿಭಾಗದ ಗೌರವ ಸಂಚಾಲಕರಾದ ಡಾ.ತಲಕಾಡು ಚಿಕ್ಕರಂಗೇಗೌಡ, ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಕೃಷ್ಣೇಗೌಡ ಹುಸ್ಕೂರು, ವಿ.ಹರ್ಷ ಪಣ್ಣೆದೊಡ್ಡಿ ಮತ್ತು ಕರ್ನಾಟಕ ಸರ್ಕಾರದ ಪರವಾಗಿ ಮಂಡ್ಯದ ಜಿಲ್ಲಾಧಿಕಾರಿಗಳಾದ ಡಾ. ಕುಮಾರ್, ಅಪರ ಜಿಲ್ಲಾಧಿಕಾರಿ ಡಾ. ಎಚ್.ಎಲ್.ನಾಗರಾಜ್, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಷೇಕ್ ತನ್ವೀರ್ ಅಸೀಫ್ ಹಾಗೂ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಯತೀಶ್ ಅವರು ಭೇಟಿ ಮಾಡಿ ವಿನಂತಿಸಿಕೊಂಡಾಗ, ಅವರು ಸಂತೋಷದಿಂದ ಒಪ್ಪಿಕೊಂಡಿದ್ದಾರೆ.

ಈ ವಿಷಯವನ್ನು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ಮಾತನಾಡುತ್ತಾ, “ಇದು ಕನ್ನಡಿರೆಲ್ಲರ ಸಮ್ಮೇಳನ. ತಮ್ಮದು ಕನ್ನಡ ಮಠವಾಗಿದ್ದು ಭವ್ಯ ಇತಿಹಾಸ ಹೊಂದಿರುವ ಕನ್ನಡ ನಾಡು-ನುಡಿ-ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದೆ. ಇಲ್ಲಿ ನಡೆಯುವ ಕಾರ್ಯಕ್ರಮಗಳು ಕನ್ನಡದ ಅಸ್ಮಿತೆಯನ್ನು ಕಾಪಾಡುವ ಉದ್ದೇಶವನ್ನು ಹೊಂದಿರುತ್ತದೆ ಎಂದು ಹೇಳಿ, ಕನ್ನಡದಲ್ಲಿ ಸಹಿಯನ್ನು ಕೂಡ ಮಾಡುವ ತಾವು ಅಪ್ಪಟ ಕನ್ನಡ ಪ್ರೇಮಿಯಾಗಿದ್ದು ‘ಮಹಾ ಪೋಷಕ’ರಾಗಿ ಸಮ್ಮೇಳನಕ್ಕೆ ಬೆನ್ನೆಲುಬಾಗಿ ನಿಲ್ಲುವುದಾಗಿ ಶ್ರೀಗಳು ತಿಳಿಸಿದರು” ಎಂದು ಹೇಳಿದ್ದಾರೆ.

ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಮೂವತ್ತು ವರ್ಷಗಳ ನಂತರ ಆಯೋಜಿತವಾಗಿದೆ. ಮಂಡ್ಯದ ಜನತೆಯು ದೇಶ-ವಿದೇಶಗಳಲ್ಲಿ ನೆಲೆಸಿದ್ದು ಅವರೆಲ್ಲರೂ ಸಮ್ಮೇಳನದಲ್ಲಿ ಭಾಗಿಯಾಗುವ ಉತ್ಸಾಹವನ್ನು ನಮ್ಮ ಜೊತೆಗೆ ಹಂಚಿಕೊಂಡಿದ್ದಾರೆ ಎಂದು ತಿಳಿಸಿರುವ ನಾಡೋಜ ಡಾ.ಮಹೇಶ ಜೋಶಿಯವರು, ಮಂಡ್ಯದಲ್ಲಿ ನಮ್ಮ ರಾಜ್ಯಕ್ಕೆ ‘ಕರ್ನಾಟಕ’ ವೆಂದು ನಾಮಕರಣವಾದ ನಂತರ ೧೯೭೪ರಲ್ಲಿ ನಡೆದ ಮೊದಲ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ನಡೆದಿದ್ದು, ಐವತ್ತು ವರ್ಷಗಳ ನಂತರ ಈ ನಾಮಕರಣ ಸುವರ್ಣ ಸಂಭ್ರಮದಲ್ಲಿ ಮತ್ತೆ ಮಂಡ್ಯದಲ್ಲಿಯೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಅರ್ಥಪೂರ್ಣವಾಗಿದೆ. ಈಗ ಆದಿಚುಂಚನಗಿರಿಯ ಜಗದ್ಗುರುಗಳು ‘ಮಹಾ ಪೋಷಕ’ ರಾಗಲು ಒಪ್ಪಿರುವುದರಿಂದ ಸಮ್ಮೇಳನವು ಐತಿಹಾಸಿಕವಾಗಿ ನಡೆಯುವುದು ಎನ್ನುವ ವಿಶ್ವಾಸ ಮೂಡಿದೆ ಎಂದು ನಾಡೋಜ ಡಾ.ಮಹೇಶ ಜೋಶಿಯವರು ತಿಳಿಸಿದ್ದಾರೆ.

★

# ನಾಡೋಜ ಡಾ. ಮಹೇಶ ಜೋಶಿ ಮತ್ತು ಪದಾಧಿಕಾರಿಗಳಿಂದ ೮೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಥಳ ಪರಿಶೀಲನೆ



**ನಾಡೋಜ ಡಾ. ಮಹೇಶ ಜೋಶಿ ಮತ್ತು ಪದಾಧಿಕಾರಿಗಳಿಂದ ೮೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಥಳ ಪರಿಶೀಲನೆ**

೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು, ಮಂಡ್ಯ ನಗರದ ಸ್ಯಾಂಜೋ ಆಸ್ಪತ್ರೆ ಸಮೀಪ ಸೂಕ್ತ ಸ್ಥಳ ಪರಿಶೀಲನೆ ನಡೆಸಿದ ಮಾನ್ಯ ಅಧ್ಯಕ್ಷರು, ನಂತರ ಪೂರ್ವಭಾವಿ ಸಭೆಯಲ್ಲಿ ಪದಾಧಿಕಾರಿಗಳನ್ನುದ್ದೇಶಿಸಿ ಮಾತನಾಡಿದರು. ಸಮ್ಮೇಳನದ ವೇದಿಕೆ, ಅಹಾರ ಮತ್ತು ವಸತಿ ಸಮಿತಿಗಳ ಕೆಲಸ ಪ್ರಮುಖವಾಗಿದ್ದು, ಪದಾಧಿಕಾರಿಗಳು ಕಾರ್ಯಯೋಜನೆ ಸಿದ್ಧಪಡಿಸಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವಂತೆ ನಾಡೋಜ ಡಾ. ಮಹೇಶ್ ಜೋಶಿ ಅವರು ತಿಳಿಸಿದರು. ಸಮ್ಮೇಳನ ನಡೆಯುವ ಮುಖ್ಯ ವೇದಿಕೆ, ಸಮಾನಾಂತರ ವೇದಿಕೆ, ಆಸನದ ವ್ಯವಸ್ಥೆ, ಆಹಾರದ ವ್ಯವಸ್ಥೆ ಮಾಡಲು ಅನುಕೂಲ ವಾಗುವಂತಹ ಸ್ಥಳವನ್ನು ಆಯ್ಕೆ ಮಾಡಬೇಕಿದೆ. ಸುಮಾರು ೫ ಲಕ್ಷ ಜನರಿಗೆ ಆಹಾರ ಹಂಚಿಕೆ ಮಾಡುವ ಉದ್ದೇಶದಿಂದ ಕನಿಷ್ಠ ೫೦ ಕೌಂಟರ್‌ಗಳನ್ನು ತೆರೆಯಬೇಕಿರುತ್ತದೆ. ಮೂರೂ ದಿನಗಳು ನೀಡುವಂತಹ ಆಹಾರದ ಪಟ್ಟಿಯನ್ನು ಸಿದ್ಧಪಡಿಸಿ ಶಾಸಕರೊಂದಿಗೆ ಚರ್ಚಿಸಿ ತೀರ್ಮಾನಿಸುವುದು. ಸಮ್ಮೇಳನಕ್ಕೆ ಆಗಮಿಸುವ ಗಣ್ಯರಿಗೆ, ಆಹ್ವಾನಿತರಿಗೆ ವಸತಿ ವ್ಯವಸ್ಥೆ ಮಾಡಬೇಕಿದ್ದು, ಮಂಡ್ಯ ನಗರ ಮತ್ತು ಸುತ್ತಮುತ್ತಲಿನ ವಸತಿನಿಲಯಗಳಲ್ಲಿ ಕೊಠಡಿಗಳನ್ನು ಕಾಯ್ದಿರಿಸವುದು. ೮೭ನೇ ಸಮ್ಮೇಳನಕ್ಕೆ ಹೊರರಾಜ್ಯ ಮತ್ತು ಹೊರರಾಷ್ಟ್ರಗಳಿಂದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಆಹ್ವಾನಿತರು ಆಗಮಿಸುತ್ತಿದ್ದು, ಅರ್ಹರಿಗೆ ಸನ್ಮಾನವನ್ನು ಮಾಡಲಾಗುವುದು.

ಸಮ್ಮೇಳನಕ್ಕೆ ಸಂಬಂಧಿಸಿದ ಸ್ಥಳ ಪರಿಶೀಲನೆ ಮತ್ತು ಪೂರ್ವಭಾವಿ ಸಭೆಯಲ್ಲಿ ಶ್ರೀರಂಗ ಪಟ್ಟಣದ ಶಾಸಕರಾದ ಶ್ರೀ ರಮೇಶ್ ಬಂಡಿಸಿದ್ದೇಗೌಡ, ಹೆಚ್ಚುವರಿ ಜಿಲ್ಲಾದಿಕಾರಿ ಶ್ರೀ ಎಚ್.ಎಲ್. ನಾಗರಾಜು, ಉಪ ವಿಭಾಗಾಧಿಕಾರಿ ಶಿವಮೂರ್ತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಡಾ.ಮೋಹನ್, ಕನ್ನಡ ಸಾಹಿತ್ಯ ಸಮ್ಮೇಳನದ ಸಮನ್ವಯ ಸಮಿತಿಯ ಅಧ್ಯಕ್ಷೆ ಶ್ರೀಮತಿ ಮೀರಾ ಶಿವಲಿಂಗಯ್ಯ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಕೃಷ್ಣಕುಮಾರ್ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾದ ಡಾ.ಬಿ.ಎಂ.ಪಟೇಲ್ ಪಾಂಡು ಅವರುಗಳು ಉಪಸ್ಥಿತರಿದ್ದರು. ★

## ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ೮೭ ಪುಸ್ತಕಗಳ ಪ್ರಕಟಣೆ

**- ನಾಡೋಜ ಡಾ. ಮಹೇಶ್ ಜೋಶಿ**

೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಡಿಸೆಂಬರ್ ೨೦, ೨೧ ಮತ್ತು ೨೨ರಂದು ಶುಕ್ರವಾರ, ಶನಿವಾರ ಮತ್ತು ಭಾನುವಾರಗಳಂದು ಮಂಡ್ಯದಲ್ಲಿ ನಡೆಯುತ್ತಿದ್ದು, ಈಗಾಗಲೇ ಪೂರ್ವಸಿದ್ಧತೆಯ ಕಾರ್ಯಗಳು ಭರದಿಂದ ನಡೆಯುತ್ತಿವೆ. ಹಾವೇರಿಯಲ್ಲಿ ನಡೆದ ಸಮ್ಮೇಳನದಲ್ಲಿ ಸುಮಾರು ೧೧ ಲಕ್ಷ ಜನರು ಭಾಗವಹಿಸಿದ್ದರು. ಮಂಡ್ಯದಲ್ಲಿ ನಡೆಯುವ ಸಮ್ಮೇಳನದಲ್ಲಿ ಇದರ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಪರಿಷತ್ತಿನ ಮಾನ್ಯ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರು ಅಭಿಪ್ರಾಪಟ್ಟಿದ್ದಾರೆ.

ಸಮ್ಮೇಳನದ ಸವಿನೆನಪಿಗಾಗಿ ಸಮ್ಮೇಳನದ ಸಂಖ್ಯೆಗೆ ಅನುಗುಣವಾಗಿ ವಿವಿಧ ಪ್ರಕಾರಗಳ ಕೃತಿಗಳನ್ನು ಪ್ರಕಟಿಸಿ, ಸಮ್ಮೇಳನದ ಸಂದರ್ಭದಲ್ಲಿ ಬಿಡುಗಡೆ ಮಾಡುವ ವಾಡಿಕೆ ಇದ್ದು, ಮಂಡ್ಯದಲ್ಲಿ ನಡೆಯುತ್ತಿರುವ ೮೭ನೇ ಸಮ್ಮೇಳನದಲ್ಲಿ ೮೭ ಕೃತಿಗಳನ್ನು ಬಿಡುಗಡೆ ಮಾಡಲು ಪ್ರಕಟಣಾ ಸಮಿತಿಯಲ್ಲಿ ತೀರ್ಮಾನಿಸಲಾಗಿದೆ ಎಂದು ಪರಿಷತ್ತಿನ ಮಾನ್ಯ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರು ಹೇಳಿದರು. ೮೦ ಪುಟಕ್ಕೆ ಮೀರದಂತೆ ಪುಸ್ತಕಗಳಿರಬೇಕೆಂಬುದು ಮಂಡ್ಯದಲ್ಲಿ ನಡೆದ ಪ್ರಕಟಣಾ ಸಮಿತಿಯ ತೀರ್ಮಾನವಾಗಿರುತ್ತದೆ. ಈ ೮೭ ಪುಸ್ತಕಗಳಲ್ಲಿ ೫೨ ಕೃತಿಗಳನ್ನು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಆಯ್ಕೆ ಮಾಡುವ ಹಕ್ಕನ್ನು ಹೊಂದಿದ್ದು, ಉಳಿದ ೩೫ ಪುಸ್ತಕಗಳನ್ನು ಮಂಡ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಹಾಗೂ ಸಮ್ಮೇಳನದ ಪ್ರಕಟಣಾ ಸಮಿತಿಯ ಆಯ್ಕೆಯ ವಿವೇಚನೆಗೆ ಬಿಡಲಾಗಿದೆ. ಈಗಾಗಲೇ ಮಂಡ್ಯ ಸಮ್ಮೇಳನದ ಪ್ರಕಟಣಾ ಸಮಿತಿಯು, ೩೫ ಕೃತಿಗಳ ಶೀರ್ಷಿಕೆಗಳನ್ನು ಅಂತಿಮಗೊಳಿಸಿ ಪಟ್ಟಿಯನ್ನು ಕಳುಹಿಸಿರುತ್ತದೆ. ಆದುದರಿಂದ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟಿಸಬೇಕಾಗಿರುವ ಪುಸ್ತಕಗಳ ಪಟ್ಟಿಯನ್ನು ಆಯ್ಕೆ ಮಾಡಿ, ಕೂಡಲೇ ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕಿದೆ ಎಂದು ಈ ಸಂದರ್ಭದಲ್ಲಿ ನುಡಿದರು. ★

# ಕನ್ನಡ ರಥಕ್ಕೆ ಅದ್ದೂರಿ ಸ್ವಾಗತ ನೀಡಿ ಸಮ್ಮೇಳನದ ಯಶಸ್ಸಿಗೆ ಸಹಕರಿಸಿ -ನಾಡೋಜ ಡಾ. ಮಹೇಶ ಜೋಶಿ



ಆಧ್ಯಾತ್ಮದಲ್ಲಿ ನಂಬಿಕೆ, ವಿಶ್ವಾಸ ಮುಖ್ಯವಾಗಿದ್ದು, ಅದೇ ನಂಬಿಕೆಯಿಂದ ಭುವನಗಿರಿಗೆ ಬಂದಿದ್ದು, ೮೭ನೇ ಸಮ್ಮೇಳನದ ಕನ್ನಡ ರಥಕ್ಕೆ ಚಾಲನೆ ನೀಡುತ್ತಿದ್ದು, ಮಂಡ್ಯದಲ್ಲಿ ನಡೆಯಲಿರುವ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕೆಂದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ್ ಜೋಶಿ ಅವರು ಕರೆ ನೀಡಿದರು. ೮೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸುಮಾರು ೧೧ ಲಕ್ಷ ಜನರು ಭಾಗಿಯಾಗಿದ್ದು ದಾಖಲೆ ಮಾಡಿತು. ಇದು ಕನ್ನಡ ದೇವತೆ ಭುವನೇಶ್ವರಿಯ ಪವಾಡವೇ ಸರಿ. ಬೇರೆ ಮಾತೃಭಾಷೆಗಳನ್ನು ಹೊಂದಿದ್ದರೂ ಸಹ, ಕನ್ನಡ ಕಲಿತು, ಕನ್ನಡ ಭಾಷೆಗೆ ಅಮೂಲ್ಯವಾದ ಸಾಹಿತ್ಯ ಕೊಡುಗೆ ನೀಡಿದ್ದು, ಜ್ಞಾನಪೀಠ ಪ್ರಶಸ್ತಿಯನ್ನು ದೊರಕಿಸಿಕೊಟ್ಟಿರುವುದು ಶ್ಲಾಘನೀಯ. ತಾಯಿಗೆ ಅಗ್ರಸ್ಥಾನ ನೀಡುವಂತೆ, ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಅಗ್ರ ಸ್ಥಾನವನ್ನು ನೀಡಬೇಕು. ಸಿದ್ಧಾಪುರ ತಾಲ್ಲೂಕು ಕನ್ನಡ ನಾಡಿನ ಸಂಸ್ಕೃತಿ ಉಳಿಸಿಕೊಂಡಿರುವುದರ ಜೊತೆಗೆ ಅಚ್ಚ ಕನ್ನಡ ಮಾತನಾಡುವ ಕನ್ನಡಿಗರಿದ್ದಾರೆ. ಈ ಕಾರಣದಿಂದ ಸಿದ್ಧಾಪುರ ತಾಲ್ಲೂಕನ್ನು ಕರ್ನಾಟಕದ ಪ್ರತಿನಿಧಿ ಎಂದರೆ ತಪ್ಪಾಗಲಾರದು ಎಂದು ನುಡಿಯುತ್ತಾ, ೮೭ನೇ ಸಮ್ಮೇಳನಕ್ಕೆ ಕರ್ನಾಟಕ ಸರ್ಕಾರ, ಕನ್ನಡ ಸಂಸ್ಥೆಗಳು, ಕನ್ನಡಿಗರು ತೊಡಗಿಸಿಕೊಂಡಿರುವುದು ಸಂತೋಷದ ವಿಷಯವಾಗಿದ್ದು, ಸಮ್ಮೇಳನವನ್ನು ಯಶಸ್ವಿಗೊಳಿಸುವಲ್ಲಿ ಎಲ್ಲರೂ ಸಹಕಾರವನ್ನು ನೀಡಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ, ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ್ ಜೋಶಿ ಅವರು ಎಲ್ಲರಿಗೂ ಆಹ್ವಾನವನ್ನು ನೀಡಿದರು.

ನಮ್ಮ ನಾಡಿಗೆ 'ಕರ್ನಾಟಕ' ಎಂದು ನಾಮಕರಣ ಆಗಿ ೫೦ ವರ್ಷ ಕಳೆದಿದೆ. ಈ ಸುಸಂದರ್ಭದಲ್ಲಿ ನಡೆಯುತ್ತಿರುವ ಕನ್ನಡ ಸಾಹಿತ್ಯ ಸಮ್ಮೇಳನ ಅದ್ದೂರಿಯಾಗಿ ನಡೆಯಬೇಕು. ನಮ್ಮ ಸರ್ಕಾರಕ್ಕೆ ಕನ್ನಡ ಭಾಷೆ ಮತ್ತು ಸಾಹಿತಿಗಳ ಕುರಿತು ಅಪಾರ ಗೌರವವಿದ್ದು ಮುಖ್ಯಮಂತ್ರಿಗಳು ಯಶಸ್ಸನ್ನು ಕೋರಿದ್ದಾರೆ. ಜಿಲ್ಲೆಯಲ್ಲಿ ಸಂಚರಿಸುವ ಕನ್ನಡ ರಥಕ್ಕೆ ಎಲ್ಲಾ ಕಡೆ ಅದ್ದೂರಿ ಸ್ವಾಗತ ನೀಡಿ ಕಾರ್ಯಕ್ರಮ ಯಶಸ್ವಿಗೊಳಿಸಲು ಎಲ್ಲರೂ ಸಹಕರಿಸಬೇಕು ಎಂದರು. ಸಮಾರಂಭದಲ್ಲಿ ಹಾಜರಿದ್ದ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ಮಂಕಾಳ ವೈದ್ಯ ಅವರು ಮಾತನಾಡುತ್ತಾ, ಕರ್ನಾಟಕದ ನಾಡದೇವಿ ಶ್ರೀ ಭುವನೇಶ್ವರಿ ದೇವಸ್ಥಾನವಿರುವ ಭುವನಗಿರಿಯಿಂದ ಮಂಡ್ಯದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಕನ್ನಡ ಜ್ಯೋತಿಗೆ ಚಾಲನೆ ದೊರೆಯುತ್ತಿರುವುದು ಹೆಮ್ಮೆಯ ಸಂಗತಿ. ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಹೇಳಿದರು. ಭುವನಗಿರಿಯ ಭುವನೇಶ್ವರಿ ದೇವಾಲಯದಲ್ಲಿ ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಭಾನುವಾರ ನಡೆದ ಕನ್ನಡ ಜ್ಯೋತಿ ರಥಯಾತ್ರೆ ಉದ್ಘಾಟನಾ ಸಮಾರಂಭದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಥಚಾಲನೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಾಸಕರಾದ ಭೀಮಣ್ಣ ನಾಯ್ಕ, ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ, ಸಹಾಯಕ ಆಯುಕ್ತೆ ಕಾವ್ಯಾರಾಣಿ, ಕ.ಸಾ.ಪ ಜಿಲ್ಲಾಧ್ಯಕ್ಷರಾದ ಬಿ.ಎನ್.ವಾಸರೆ, ತಹಶೀಲ್ದಾರ್ ಎಂ.ಆರ್. ಕುಲಕರ್ಣಿ, ವಿವಿಧ ಜಿಲ್ಲಾಧ್ಯಕ್ಷರುಗಳು, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ನೇ.ಭ. ರಾಮಲಿಂಗಶೆಟ್ಟಿ, ಡಾ. ಪದ್ಮಿನಿ ನಾಗರಾಜು ಹಾಗೂ ಕೋಶಾಧ್ಯಕ್ಷರಾದ ಡಾ.ಬಿ.ಎಂ. ಪಟೇಲ್ ಪಾಂಡು ಅವರುಗಳು ಉಪಸ್ಥಿತರಿದ್ದರು.

★

# ಕನ್ನಡ ಸಾಹಿತ್ಯ ಪರಿಷತ್ತಿನಿಂದ 'ಜನಸಾಮಾನ್ಯರಿಗೆ ಸಾಹಿತ್ಯ ಮಾಲೆ ಯೋಜನೆ' - ನಾಡೋಜ ಡಾ. ಮಹೇಶ ಜೋಶಿ



ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣಗೊಂಡು ೫೦ ವರ್ಷಗಳು ಸಂದ ಸವಿನೆನಪಿಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ 'ಜನಸಾಮಾನ್ಯರಿಗೆ ಸಾಹಿತ್ಯ ಮಾಲೆ ಯೋಜನೆ'ಯ ಮೂಲಕ ನಾಡಿನ ಗಣ್ಯರ, ಸಾಹಿತಿಗಳು, ಚಿಂತಕರು, ರಾಜಕಾರಣಿಗಳು, ಪತ್ರಕರ್ತರು ಹಾಗೂ ನಾಡಿನ ಪ್ರಮುಖ ಸ್ಥಳ ಮಹಿಮೆಗಳನ್ನು ಕುರಿತು ೫೦ ಸಣ್ಣ ಪುಸ್ತಕಗಳನ್ನು ಹೊರತರುವ ಕುರಿತು, ನಾಡಿನ ಹಿರಿಯ ಸಾಹಿತಿಗಳು, ಪ್ರಕಾಶಕರು ಮತ್ತು ಕನ್ನಡಪರ ಚಿಂತಕರೊಂದಿಗೆ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ್ ಜೋಶಿ ಅವರು ಸಮಾಲೋಚನೆ ಮಾಡಿದರು.

ಜನಸಾಮಾನ್ಯರ ಸಾಹಿತ್ಯ ಮಾಲೆಯ ಕೃತಿಗಳು, ಆಕಾರ ಮತ್ತು ಪುಟದಲ್ಲಿ ಸಣ್ಣದಾಗಿರುವುದರಿಂದ, ಕೆಲವೇ ಸಮಯದಲ್ಲಿ ಇಡೀ ಕೃತಿಯನ್ನು ಓದಿ ಮುಗಿಸಬಹುದು. ಕಡಿಮೆ ಸಮಯದಲ್ಲಿ ನಿರ್ದಿಷ್ಟ ವಿಷಯವನ್ನು ಅರಿಯಲು ಈ ಪುಸ್ತಕಗಳು ಸಹಾಯಕವಾಗಿವೆ. ಶಾಲಾ ಮಕ್ಕಳು, ಭಾಷಣ ಮಾಡುವವರು ಹಾಗೂ ಸಾಮಾನ್ಯ ಓದುಗರು ಇವುಗಳನ್ನು ಕೊಳ್ಳಲು ಅನುಕೂಲವಾಗುವಂತೆ ಬೆಲೆಯನ್ನೂ ಕಡಿಮೆ ನಿಗದಿ ಮಾಡಲಾಗುತ್ತದೆ. ಈ ಯೋಜನೆಯಂತೆ, ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ೫೦ ಕೃತಿಗಳ ಪ್ರಥಮ ಸಂಪುಟವನ್ನು ಬಿಡುಗಡೆ ಮಾಡಲಾಗುತ್ತದೆ. ಪ್ರತಿವರ್ಷವೂ ಮೇ ತಿಂಗಳಿನಲ್ಲಿ ನಡೆಯುವ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರ ದಿನದಂದು ಹಾಗೂ ಕನ್ನಡ ರಾಜ್ಯೋತ್ಸವ ಸಮಾರಂಭದ ಸಂದರ್ಭದಲ್ಲಿ ೫೦ ಕೃತಿಗಳಂತೆ ಹೊರತರುವುದಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ್ ಜೋಶಿ ಅವರು ಸಭೆಯಲ್ಲಿ ತಿಳಿಸಿದರು.

'ಜನ ಸಾಮಾನ್ಯರ ಸಾಹಿತ್ಯ ಮಾಲೆ' ಕುರಿತ ಸಮಾಲೋಚನಾ ಸಭೆಯು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮಹೇಶ್ ಜೋಶಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಪರಿಷತ್ತಿನ ಗೌರವ ಕಾರ್ಯದರ್ಶಿಗಾದ ಶ್ರೀ ನೇ.ಭ. ರಾಮಲಿಂಗಶೆಟ್ಟಿ, ಡಾ. ಪದ್ಮಿನಿ ನಾಗರಾಜು ಹಾಗೂ ಕೋಶಾಧ್ಯಕ್ಷರಾದ ಡಾ.ಬಿ.ಎಂ. ಪಟೇಲ್ ಪಾಂಡು ಅವರುಗಳು ಉಪಸ್ಥಿತರಿದ್ದರು.

ಸಮಾಲೋಚನಾ ಸಭೆಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕರಾದ ಶ್ರೀ ಎನ್.ಎಸ್. ಶ್ರೀಧರಮೂರ್ತಿ, ಪಠ್ಯರಚನಾ ಸಮಿತಿ ಸಂಚಾಲಕರಾದ ಡಾ.ಡಿ.ಕೆ. ನಟರಾಜ್, ಕನ್ನಡ ವಿ.ವಿ. ವಿಶ್ರಾಂತ ಕುಲಪತಿಗಳಾದ ಡಾ.ಸ.ಚಿ.ರಮೇಶ್, ವಿಜ್ಞಾನ ಬರಹಗಾರರಾದ ಟಿ.ಆರ್. ಅನಂತರಾಮು, ವಿಮರ್ಶಕರಾದ ನಾ.ದಾಮೋದರ ಶೆಟ್ಟಿ, ಡಾ.ಕೆ.ಆರ್. ಸಂಧ್ಯಾರೆಡ್ಡಿ, ೮೭ನೇ ಸಮ್ಮೇಳನದ ಮಂಡ್ಯ ಸಂಚಾಲಕರಾದ ಡಾ.ಮೀರಾ ಶಿವಲಿಂಗಯ್ಯ, ಮಕ್ಕಳ ಸಾಹಿತಿಗಳಾದ ಟಿ.ಎಸ್. ನಾಗರಾಜಶೆಟ್ಟಿ, ಶಿಕ್ಷಕರಾದ ಸಿ.ಬಸಪ್ಪ, ಕಸ್ತೂರಿ ಮಾಸಪತ್ರಿಕೆಯ ಸಂಪಾದಕರಾದ ಡಾ.ಶಾಂತಲಾ ಧರ್ಮರಾಜ್, ರಾಯಚೂರಿನ ಓದುಗರ ಚಾವಡಿ ಅಧ್ಯಕ್ಷರಾದ ಶರಣು ಸಬರದ, ಗದಗ ಜಿಲ್ಲಾ ಕ.ಸಾ.ಪ. ಅಧ್ಯಕ್ಷರಾದ ಶ್ರೀ ವಿವೇಕಾನಂದ ಪಾಟೀಲ್, ಚಿಂತಕರಾದ ಮಾದಲಗೆರೆ ರಂಗಪ್ಪ ಅವರುಗಳು ಭಾಗವಹಿಸಿದ್ದರು. ★

## ಸ್ಮರಣ ಸಂಚಿಕೆಯಲ್ಲಿ ನೆನಪಿನಲ್ಲಿ ಉಳಿಯುವಂತಹ ಲೇಖನಗಳಿರಲಿ: -ನಾಡೋಜ ಡಾ. ಮಹೇಶ ಜೋಶಿ

ಮಂಡ್ಯದಲ್ಲಿ ನಡೆಯುತ್ತಿರುವ ೮೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಕಟಿಸಲಾಗುವ ಸ್ಮರಣ ಸಂಚಿಕೆಯಲ್ಲಿರುವ ಲೇಖನಗಳು ಎಲ್ಲರಿಗೂ ಉಪಯುಕ್ತವಾಗಿರುವಂತೆ ಮತ್ತು ನೆನಪಿನಲ್ಲಿ ಉಳಿಯುವಂತೆ ಇರಬೇಕು ಎಂದು, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರು, ಸ್ಮರಣ ಸಂಚಿಕೆಯ ಪದಾಧಿಕಾರಿಗಳ ಸಭೆಯಲ್ಲಿ ತಿಳಿಸಿದರು. ಯಾವುದೇ ರೀತಿಯ ಕಾಗುಣಿತ, ವ್ಯಾಕರಣ ಮತ್ತು ವಾಕ್ಯರಚನಾ ದೋಷಗಳಿರಬಾರದು ಹಾಗೂ ಯಾವುದೇ ರೀತಿಯ ಗೊಂದಲಗಳಿಗೆ ಅವಕಾಶ ಇರದಂತೆ ಸ್ಪಷ್ಟವಾಗಿರಬೇಕೆಂದು ಅಭಿಪ್ರಾಯಪಟ್ಟರು. ಈ ಕುರಿತು ಕೇಂದ್ರ ಪರಿಷತ್ತು ಕೆಲವು ಸಲಹೆಗಳನ್ನು ನೀಡಿದ್ದು, ವಿಷಯಗಳು ಪುನರಾವರ್ತನೆಯಾಗದಂತೆ, ನಿರ್ದಿಷ್ಟ ಮಾನದಂಡವನ್ನು ಅನುಸರಿಸಿ ಆಯ್ಕೆ ಮಾಡಬೇಕು. ಗುಣಮಟ್ಟದ ಮತ್ತು ವಾಸ್ತವತೆಯನ್ನು ಒಳಗೊಂಡಿರುವ ಲೇಖನಗಳಿರಬೇಕು. ಮೌಲ್ಯಗಳನ್ನು ಉಳಿಸುವಂತಹ ಹಾಗೂ ಮುಂದಿನ ಪೀಳಿಗೆಗೆ ಮಾರ್ಗದರ್ಶಕವಾಗುವಂತಹ ಲೇಖನಗಳಿರಬೇಕು. ಈ ಸಂದರ್ಭದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ನೇ.ಭ.ರಾಮಲಿಂಗಶೆಟ್ಟಿ, ಡಾ. ಪದ್ಮಿನಿ ನಾಗರಾಜು ಹಾಗೂ ಪರಿಷತ್ತಿನ ಕೋಶಾಧ್ಯಕ್ಷರಾದ ಡಾ.ಬಿ.ಎಂ. ಪಟೇಲ್ ಪಾಂಡು, ಜಿಲ್ಲಾ ಕ.ಸಾ.ಪ. ಸಂಚಾಲಕಿಯಾದ ಡಾ. ಮೀರಾ ಶಿವಲಿಂಗಯ್ಯ, ಪುಸ್ತಕ ಸಮಿತಿ ಉಪಾಧ್ಯಕ್ಷರಾದ ತೈಲೂರು ವೆಂಕಟಕೃಷ್ಣ, ಗ್ರಂಥಾಲಯಾಧಿಕಾರಿ ಕೃಷ್ಣಮೂರ್ತಿ, ನಂದೀಶ್, ಜಿಲ್ಲಾ ಪದಾಧಿಕಾರಿಗಳಾದ ಡಾ.ಹುಸ್ಕೂರು ಕೃಷ್ಣೇಗೌಡ, ವಿ. ಹರ್ಷ ಪಣ್ಣೆದೊಡ್ಡಿ, ಜಿ. ಧನಂಜಯ ದಸರಗುಪ್ಪೆ, ಹೊಳಲು ಶ್ರೀಧರ್, ಎಲ್. ಕೃಷ್ಣ, ರಂಗಸ್ವಾಮಿ, ಶ್ರೀನಿವಾಸಮೂರ್ತಿ, ಡಾ.ಎಸ್. ಶಿವರಾಮ್, ಚಂದ್ರಶೇಖರ್ ಅವರುಗಳು ಉಪಸ್ಥಿತರಿದ್ದರು. ★

# ವಚನ ಸಾಹಿತ್ಯದ ವಿರಾಟ್ ಸ್ವರೂಪವನ್ನು ತೋರಿಸಿ ಕೊಟ್ಟ ಫ.ಗು. ಹಳಕಟ್ಟಿ

**- ನಾಡೋಜ ಡಾ. ಮಹೇಶ ಜೋಶಿ**



ವಚನ ಸಾಹಿತ್ಯದ ವಿರಾಟ್ ಸ್ವರೂಪವನ್ನು ತೋರಿಸಿಕೊಟ್ಟ ಫ.ಗು.ಹಳಕಟ್ಟಿಯವರು ಸಹಜವಾಗಿಯೇ ವಚನ ಪಿತಾಮಹ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ.ಡಾ.ಮಹೇಶ ಜೋಶಿಯವರು ತಿಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಗಿಸಿದ್ದ ಫ.ಗು. ಹಳಕಟ್ಟಿಯವರ ೧೪೪ನೆಯ ಜನ್ಮದಿನೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. ಹಳಕಟ್ಟಿಯವರು ತಾಳೆಯೋಲೆಗಳನ್ನು ಸಂಗ್ರಹಿಸುವುದಕ್ಕೆ ಮೊದಲು, ಕವಿ ಚರಿತೆಕಾರರು ಗುರುತಿಸಿದ್ದು ಕೇವಲ ೫೦ ವಚನಕಾರರನ್ನು ಮಾತ್ರ. ಫ.ಗು.ಹಳಕಟ್ಟಿಯವರು ತಮ್ಮ ಸಂಶೋಧನೆಯ ಮೂಲಕ ೨೫೦ಕ್ಕೂ ಹೆಚ್ಚು ವಚನಕಾರರನ್ನು ಬೆಳಕಿಗೆ ತಂದರು. ಜೊತೆಗೆ, ಹರಿಹರನ ೪೨ ರಗಳೆಗಳನ್ನು ಸಂಶೋಧಿಸಿ ಪ್ರಕಟಿಸಿದ ಸಾಧನೆ ಹಳಕಟ್ಟಿಯವರಿಗೆ ಸಲ್ಲುತ್ತದೆ. ಹಳಕಟ್ಟಿಯವರು ಬಸವಣ್ಣನವರ ವಚನಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ 'ಇಂಡಿಯನ್ ಆಂಟಿಕ್ವರಿ'ಯಲ್ಲಿ ಪ್ರಕಟಗೊಳಿಸಿದರು. ಅಷ್ಟೇ ಅಲ್ಲದೆ ವಚನಗಳ ಗಾಯನಕ್ಕೂ ವ್ಯವಸ್ಥೆ ಮಾಡಿಸಿದರಲ್ಲದೆ ಶ್ರೇಷ್ಠ ಸಂಗೀತಕಾರರನ್ನು ವಚನ ಗಾಯನ ರೆಕಾರ್ಡಿಂಗ್‌ಗಾಗಿ ಮುಂಬಯಿಯವರೆಗೆ ಕಳುಹಿಸಿದರು. ಹೀಗೆ ವಚನ ಸಾಹಿತ್ಯದ ಪ್ರಸಾರ ಕಾರ್ಯವನ್ನು ಅವರು ಬಹುಮುಖಿಯಾಗಿ ಕೈಗೊಂಡರು ಎಂದು ನಾಡೋಜ ಡಾ.ಮಹೇಶ ಜೋಶಿಯವರು ಗುರುತಿಸಿದರು.

ಮುಂಬಯಿಯಲ್ಲಿ ವಿದ್ಯಾರ್ಥಿಗಳು ಮತ್ತು ಅಲ್ಲಿನ ಜನರಲ್ಲಿದ್ದ ಗುಜರಾತಿ ಮತ್ತು ಮರಾಠಿ ಭಾಷಾಭಿಮಾನ, ಕನ್ನಡದವರಲ್ಲಿ ತಮ್ಮ ಭಾಷೆಯ ಬಗ್ಗೆ ಇದ್ದ ನಿರಭಿಮಾನ ಇವರ ಮನಸ್ಸಿನ ಮೇಲೆ ತುಂಬಾ ಪರಿಣಾಮ ಬೀರಿತು. ಕನ್ನಡ ನಾಡು, ನುಡಿ, ನೆಲ, ಜಲ, ಸಾಹಿತ್ಯ, ಸಂಸ್ಕೃತಿಗಾಗಿ ದುಡಿಯಲು ವಿದ್ಯಾರ್ಥಿ ದಿಸೆಯಲ್ಲೇ ದೃಢಸಂಕಲ್ಪ ಮಾಡಿದರು. ಕರ್ನಾಟಕ ಏಕೀಕರಣಕ್ಕಾಗಿ ಆಗಲೇ ಹೋರಾಟದಲ್ಲಿ ನಿರತರಾಗಿದ್ದ ಆಲೂರು ಇವರಿಗಾಗ ಸ್ಫೂರ್ತಿಯಾಗಿದ್ದರು

ದೂರದೃಷ್ಟಿಯ ಹಳಕಟ್ಟಿಯವರು ಸಾಹಿತ್ಯ ಮತ್ತು ಪತ್ರಿಕೋದ್ಯಮದ ಜೊತೆ ಜೊತೆಗೆ ಸಂಘಟನೆ, ಬ್ಯಾಂಕಿಂಗ್, ಕೃಷಿ, ನೇಕಾರಿಕೆ, ಸಹಕಾರಿ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ೧೯೨೦ರಲ್ಲಿ ಮುಂಬಯಿಯ ವಿಧಾನ ಪರಿಷತ್ತಿನ ಸದಸ್ಯತ್ವ, ೧೯೨೬ರಲ್ಲಿ ಬಳ್ಳಾರಿಯಲ್ಲಿ ನಡೆದ ೧೨ನೇ ಅ. ಭಾ. ಕ. ಸಾ. ಸಮ್ಮೇಳನದ ಅಧ್ಯಕ್ಷತೆ, ೧೯೨೮ರಲ್ಲಿ ಜರುಗಿದ ೩ನೇ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷತೆ, ಹೀಗೆ ಹಲವು ಗೌರವಗಳಿಗೆ ಅವರು ಪಾತ್ರರಾಗಿದ್ದರು ಎಂದು ನಾಡೋಜ ಡಾ.ಮಹೇಶ ಜೋಶಿಯವರು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕರಾದ ಪ್ರೊ.ಎನ್.ಎಸ್.ಶ್ರೀಧರ ಮೂರ್ತಿಯವರು ಮಾತನಾಡಿ ಹಳಕಟ್ಟಿಯವರು ಸಂಪಾದಿಸಿ ಪ್ರಕಟಿಸಿದ "ವಚನ ಸಾಹಿತ್ಯ ಸಾರ"ವಂತೂ ಒಂದು ಅದ್ಭುತ ಕೃತಿ. ಈ ಬೃಹತ್ ಗ್ರಂಥ ಹಲವು ಸಂಪುಟಗಳಲ್ಲಿ ೧೯೨೩ರಿಂದ ೧೯೩೩ರ ಅವಧಿಯಲ್ಲಿ ಪ್ರಕಟಗೊಂಡು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ. ಇವರ ಸ್ವತಂತ್ರ ಕೃತಿಗಳು ಸೇರಿದಂತೆ ಸಂಪಾದಿಸಿದ ವಚನಸಾಹಿತ್ಯ ಕೃತಿಗಳು ೧೬೫ಕ್ಕೂ ಹೆಚ್ಚೆಂದರೆ, ಹಳಕಟ್ಟಿಯವರ ವಚನ ಸಾಹಿತ್ಯದ ದೈತ್ಯಶಕ್ತಿಯನ್ನು ಯಾರು ಬೇಕಾದರೂ ಊಹಿಸಬಹುದು. ಪತ್ರಿಕೋದ್ಯಮದಲ್ಲೂ ಬಹಳ ಆಸಕ್ತಿ ಹೊಂದಿದ್ದ ಹಳಕಟ್ಟಿಯವರು ೧೯೨೬ರಲ್ಲಿ ಸಂಶೋಧನೆಗಾಗಿ ಮೀಸಲಾದ 'ಶಿವಾನುಭವ' ಪತ್ರಿಕೆ ಪ್ರಾರಂಭಿಸಿದರು, ಹಾಗೆಯೇ ೧೯೨೭ರಲ್ಲಿ 'ನವ ಕರ್ನಾಟಕ' ಎಂಬ ವಾರಪತ್ರಿಕೆಯನ್ನೂ ಸಹ ಆರಂಭಿಸಿದ್ದರು ಎಂದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದ ಡಾ. ಪದ್ಮಿನಿನಾಗರಾಜು, ಅವರು ಮಾತನಾಡುತ್ತಾ ತಮ್ಮ ಸ್ವಂತ ಮನೆಯನ್ನೇ ಮಾರಿ ಮುದ್ರಣಾಲಯವನ್ನು ಸ್ಥಾಪಿಸಿದ್ದ ಹಳಕಟ್ಟಿಯವರ ಆರೋಗ್ಯ ಸತತ ಸಂಶೋಧನೆಗಳಿಂದ ಹದಗೆಟ್ಟಿತ್ತು ಆದರೂ ಅವರು ತಮ್ಮ ಶೋಧನೆಯನ್ನು ಬಿಡಲಿಲ್ಲ, ಇವರು ಸಂಸ್ಥಾಪಿಸಿದ ಬಿ.ಎಲ್.ಡಿ.ಇ. ಸಂಸ್ಥೆ ಹಲವು ವರ್ಷಗಳ ಹಿಂದೆ ಮೂವತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಹಳಕಟ್ಟಿಯವರ ಸಮಗ್ರ ಸಾಹಿತ್ಯವನ್ನು ಹದಿನೈದು ಸಂಪುಟಗಳಲ್ಲಿ ಪ್ರಕಟಿಸಿದೆ ಎಂದರೆ ಯಾರಿಗಾದರೂ ಅರ್ಥವಾಗುತ್ತದೆ. ಹಳಕಟ್ಟಿಯವರು ಸಂಸ್ಥಾಪಿಸಿದ್ದ ಸಂಸ್ಥೆಯೊಂದರ ಬೆಳವಣಿಗೆಯನ್ನು ಅರಿಯಬಹುದು. ಕನ್ನಡ ಸಾಹಿತ್ಯ ಪರಿಷತ್ತಿನ ಇನ್ನೊಬ್ಬ ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟರು, ಹಳಕಟ್ಟಿಯವರ ಸರಳತೆಯನ್ನು ಪ್ರಶಂಸಿಸಿದರು. ಕಾರ್ಯಕ್ರಮದಲ್ಲಿ ಫ.ಗು. ಹಳಕಟ್ಟಿಯವರ ಭಾವಚಿತ್ರಕ್ಕೆ ಪುಷ್ಪನಮನವನ್ನು ಸಲ್ಲಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ್ ಪಾಂಡು ಸೇರಿದಂತೆ ಪರಿಷತ್ತಿನ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ★

# ಕನ್ನಡ ಕಥಾ ಸಾಹಿತ್ಯ (೧೯೧೫-೧೯೭೦ ರವರೆಗೆ)

(‘ಚಿನ್ನದ ಬೆಳಸು’ - ಸ್ಮರಣ ಸಂಚಿಕೆಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ) -ಎಲ್.ಎಸ್. ಶೇಷಗಿರಿರಾವ್

**[ಈ ಲೇಖನದಲ್ಲಿ ಕೃತಿಕಾರರ, ಕೃತಿಗಳ ವಿಮರ್ಶೆಗೆ ಪ್ರಯತ್ನಿಸಿಲ್ಲ. ಯುಗದ ಆವರಣವೇ ಕೃತಿಗಳನ್ನು ಸೃಷ್ಟಿಸುತ್ತದೆ ಎಂಬ ಸಿದ್ಧಾಂತದ ನಿರೂಪಣೆಯೂ ಇಲ್ಲಿಲ್ಲ. ಮೂರು ಪೀಳಿಗೆಗಳ ಬರಹಗಾರರಲ್ಲಿ ಶ್ರೇಷ್ಠರಾದವರು ಹೇಗೆ ವೈಶಿಷ್ಟ್ಯವನ್ನು ಉಳಿಸಿಕೊಂಡರು? ಇವರಲ್ಲಿ ಪ್ರತಿಯೊಬ್ಬರ ಸಾಧನೆ ಏನು ಎಂಬುದನ್ನು ವಿಮರ್ಶಿಸಲು ದೊಡ್ಡ ಪುಸ್ತಕವನ್ನೆ ಬರೆಯಬೇಕಾದೀತು. ಒಂದು ದೃಷ್ಟಿಯಿಂದ ಕನ್ನಡ ಗದ್ಯದ ಕಾಲ್ಪನಿಕ ಸಾಹಿತ್ಯವನ್ನು ಇಲ್ಲಿ ಸಮೀಕ್ಷಿಸಲು ಪ್ರಯತ್ನಿಸಿದೆ. ಈ ದೃಷ್ಟಿಗೆ, ವೃತ್ತಿ ಪ್ರವೃತ್ತಿಗಳ ಹರಿವನ್ನಷ್ಟೆ ಗುರುತಿಸುವುದು ಸಾಧ್ಯ.]**

ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ ಕನ್ನಡ ನಾಡಿನಲ್ಲಿ ಹೊಸ ಚೇತನ ವ್ಯಕ್ತವಾದ ಹಲವು ರೂಪಗಳಲ್ಲಿ ಒಂದು. ಈ ಐವತ್ತೈದು ವರ್ಷಗಳಲ್ಲಿ ಕಥೆ, ಕಾದಂಬರಿ ವಿಶಿಷ್ಟ ಸಾಹಿತ್ಯ ರೂಪವಾಗಿ ಅವತರಿಸಿ, ಮೈತುಂಬಿಕೊಂಡಿವೆ. ಹತ್ತು ವರ್ಷಗಳ ಹಿಂದೆ ಎರಡು ಪ್ರಕಾರಗಳೂ ಸತ್ವ ಕಳೆದುಕೊಂಡವು ಎನ್ನುವಂತಿತ್ತು. ಮತ್ತೆ ಎರಡೂ ಹೊಸ ರೀತಿಗಳಲ್ಲಿ ಬೆಳವಣಿಗೆ ಪಡೆದಿವೆ.

ಗಾತ್ರದಲ್ಲಿ ಮಿತವಾದ ಈ ಲೇಖನದಲ್ಲಿ ಈ ಎರಡು ಶ್ರೀಮಂತ ರೂಪಗಳ ಸಂಪೂರ್ಣ ವಿಮರ್ಶೆಯನ್ನಾಗಲಿ, ಪ್ರಮುಖ ಲೇಖಕರ ವೈಶಿಷ್ಟ್ಯಗಳ ವಿವೇಚನೆಯನ್ನಾಗಲಿ ಪ್ರಯತ್ನಿಸಿಲ್ಲ. ಒಂದು ದೃಷ್ಟಿಯಿಂದ ಅವುಗಳ ಸಮೀಕ್ಷೆಯನ್ನು ನಡೆಸಿದೆ.

ಕನ್ನಡ ಸಣ್ಣಕಥೆಯ ವಿಷಯ ಮಾತನಾಡುತ್ತಾ ಮಾಸ್ತಿಯವರೆಂದಿದ್ದಾರೆ: “ಸಾಹಿತ್ಯದ ಈ ಪ್ರಕಾರದಲ್ಲಿ ನಮ್ಮಲ್ಲಿ ಮೊದಲು ದುಡಿದವರು ಶ್ರೀ ಪಂಜೆ ಮಂಗೇಶರಾಯರು ಎಂದು ನನ್ನ ತಿಳಿವಳಿಕೆ. ಶ್ರೀ ಕೆರೂರು ವಾಸುದೇವಾಚಾರ್ಯರೂ, ಶ್ರೀ ಎಂ.ಎನ್. ಕಾಮತರೂ ಬಹು ಮುಂದಾಗಿ ಕತೆಗಳು ಬರೆದರು ಎಂದು ಮಿತ್ರರು ಹೇಳುವುದುಂಟು.” ಶ್ರೀನಿವಾಸ (ಮಾಸ್ತಿ) ಅವರ ಕಥೆಗಳು ೧೯೧೮–೧೯ಕ್ಕೆ ಅಚ್ಚಾಗಲು ಪ್ರಾರಂಭವಾಗಿ ೧೯೨೦–೨೧ರಲ್ಲಿ ಹತ್ತು ಕಥೆಗಳು “ಕೆಲವು ಸಣ್ಣಕತೆಗಳು” ಎಂಬ ಹೆಸರಿನಿಂದ ಸಂಕಲನದಲ್ಲಿ ಪ್ರಕಟವಾದುವು. ಇಲ್ಲಿಗೆ ಸಣ್ಣಕಥೆ ಸಾಹಿತ್ಯ ರೂಪದಲ್ಲಿ ಅವತರಿಸಿದಂತಾಯಿತು. ತನ್ನ ಚರಿತ್ರೆ ಪ್ರಾರಂಭದಲ್ಲಿಯೇ ಕನ್ನಡ ಸಣ್ಣಕಥೆ ಜೀವನದ ನೈಜವೂ, ಆಳವೂ ಆದ ಶ್ರದ್ಧೆ ಜೊತೆಗೆ ಉಪದೇಶ ಪ್ರವೃತ್ತಿಯಿಂದ ಬಿಡುಗಡೆ, ಶುದ್ಧಹಾಸ್ಯ, ಸ್ಪಷ್ಟ ಸರಳ ಸಹಜ ಶೈಲಿ ಎಲ್ಲವನ್ನೂ ಪಡೆದುಕೊಂಡಿದ್ದು ಆಶ್ಚರ್ಯದ ಸಂಗತಿ.

೧೯೧೫ರಲ್ಲಿ ‘ಮಾಡಿದ್ದುಣ್ಣೋ ಮಹರಾಯ’ವನ್ನು ಕನ್ನಡಕ್ಕೆ ಕೊಟ್ಟು, ಕಾದಂಬರಿಗೆ ಒಂದು ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಟ್ಟವರು ಎಂ.ಎಸ್.ಪುಟ್ಟಣ್ಣನವರು. ಇದರ ದೋಷಗಳು ಬೇರೇನೇ ಇರಲಿ, ಜೀವನವನ್ನು ವಾಸ್ತವಿಕವಾಗಿ ಚಿತ್ರಿಸಿದ ರೀತಿ, ಹರಿತವಾದ ಬರಹ–ಇವೆರಡೂ ಇಂದಿಗೂ ಬೆರಗುಗೊಳಿಸುವಂತಿವೆ. ೧೮೯೯ರಲ್ಲಿ ಗುಲ್ವಾಡಿ ವೆಂಕಟರಾಯರ ‘ಇಂದಿರಾ’ ೧೯೦೫ರಲ್ಲಿ, ಬೋಳಾರ ಬಾಬುರಾಯರ ‘ವಾಗ್ದೇವಿ’ ಪ್ರಕಟವಾಗಿದ್ದರೂ, ‘ಮಾಡಿದ್ದುಣ್ಣೋ ಮಹರಾಯ’ ಕಾದಂಬರಿ ಎನ್ನಿಸಿಕೊಳ್ಳುವ ಮೊದಲ ಕೃತಿ. ೧೯೨೦ರಿಂದ ೧೯೪೫ರವರೆಗಿನ ಅವಧಿಯಲ್ಲಿ ಒಟ್ಟು ಎಂಬತ್ತು ಕಾದಂಬರಿಗಳು ಬೆಳಕು ಕಂಡವೆಂದು ಡಾ. ಮುಗಳಿಯವರು ಹೇಳಿದ್ದಾರೆ. ೧೯೬೫–೬೬ರ ಎರಡು ವರ್ಷಗಳಲ್ಲಿ ತಮ್ಮ ಗಮನಕ್ಕೆ ಬಂದಂತೆ ಎಂಬತ್ತು ಸಣ್ಣ ಕಥಾ ಸಂಗ್ರಹಗಳೂ, ನೂರಿಪ್ಪತ್ತು ಕಾದಂಬರಿಗಳೂ, ಒಟ್ಟು ಇನ್ನೂರು ಕೃತಿಗಳು ಪ್ರಕಟವಾಗಿವೆ. ಆದರೆ, ಒಟ್ಟು ಪ್ರಕಟಣೆಗಳ ಸಂಖ್ಯೆ ಮುನ್ನೂರಾದರೂ ಆಗಬಹುದೆಂದು ಡಾ.ಹಾ.ಮಾ. ನಾಯಕರು ಹೇಳಿದ್ದಾರೆ. (೧೯೫೫ರಿಂದ ೧೯೬೫ರ ಅವಧಿಯಲ್ಲಿ ನನ್ನ ಗಮನಕ್ಕೆ ಸುಮಾರು ಐನೂರು ಕಾದಂಬರಿಗಳು ಬಂದುವೆಂದು ಕಾರವಾರ ಸಾಹಿತ್ಯ ಸಮ್ಮೇಳನದಲ್ಲಿ ‘ಕಾದಂಬರಿ’ ವಿಭಾಗದ ವಿಮರ್ಶೆಯನ್ನು ನಾನು ನಿವೇದಿಸಿದ್ದೆ. ಈ ಪ್ರಕಾರಗಳ ಜನಪ್ರಿಯತೆಯನ್ನು ಗುರುತಿಸಲು ಇದೊಂದು ಸೂಚಕ.

ಈ ಎರಡು ಪ್ರಕಾರಗಳು ಶಕ್ತಿಗೂಡಿಸಿಕೊಳ್ಳುತ್ತಿದ್ದ ಕಾಲದ ಬರಹಗಾರರ ಆವರಣವನ್ನು ಕಲ್ಪಿಸಿಕೊಳ್ಳುವುದು ಅಗತ್ಯ. ಅಕ್ಷರಸ್ಥರ ಸಂಖ್ಯೆಯೇ ಮಿತವಾಗಿದ್ದು, ಕಾಲೇಜು ಹತ್ತುವ ಭಾಗ್ಯವನ್ನು ಕಂಡವರಂತೂ ಅತಿ ವಿರಳ. ಅಧಿಕಾರಿಗಳಲ್ಲಿ ಮತ್ತು ಅಧ್ಯಾಪಕರಲ್ಲಿ ವಿದೇಶೀಯರ ಸಂಖ್ಯೆ ಗಣನೀಯ. ಇವರಲ್ಲಿ ಹಲವರು ಅಹಂಕಾರಿಗಳು, ವರ್ಣಾಂಧರು ಎಂದರೂ, ಕೆಲವರಾದರೂ ಪಾಶ್ಚಾತ್ಯ ಸಂಸ್ಕೃತಿಯನ್ನು ರಕ್ತಗೂಡಿಸಿಕೊಂಡಿದ್ದವರು. ಇಂಗ್ಲಿಷ್ ಅಭ್ಯಾಸ ಪ್ರೌಢಶಾಲೆಗಳು, ಕಾಲೇಜುಗಳಲ್ಲಿ ಕಡ್ಡಾಯವಾಗಿದ್ದ ಕಾಲ. ಪ್ರೌಢ ಕೃತಿಗಳನ್ನೆ ಪಠ್ಯಪುಸ್ತಕವಾಗಿ ಆರಿಸುತ್ತಿದ್ದ ಕಾಲ. ಶೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್, ಷೆಲ್ಲಿ, ಬೈರನ್, ಕೀಟ್ಸ್, ಸರ್ ವಾಲ್ಟರ್ ಸ್ಕಾಟ್, ಟೆನಿಸನ್, ಬ್ರೌನಿಂಗ್, ಕಾರ್ಲೈಲ್, ರಸ್ಕಿನ್ ಕಾಲೇಜು ವಿದ್ಯಾರ್ಥಿಗಳಿಗೆ ಚೆನ್ನಾಗಿ ಪರಿಚಿತರಾದ ಬರಹಗಾರರೆನಿಸಿದ ಕಾಲ. ಪಾಶ್ಚಾತ್ಯರ ಪ್ರಭುತ್ವದ ನೆರವಿನೊಂದಿಗೆ ಅವರ ಸಂಸ್ಕೃತಿಯಲ್ಲಿ ಶ್ರೇಷ್ಠವಾದುದನ್ನು ನೇರವಾಗಿ ಅರಿಯಲು ಸಾಧ್ಯವಿದ್ದ ಕಾಲ. ನಮ್ಮ ನವೋದಯದ ಮೊದಲನೆಯ ಪೀಳಿಗೆಯ ಬರಹಗಾರರಲ್ಲಿ ಬಹುಮಂದಿಯ ವಿದ್ಯಾಭ್ಯಾಸ ನಡೆದುದು ಈ ವಾತಾವರಣದಲ್ಲಿ.

ಪಾಶ್ಚಾತ್ಯರ ಸಿರಿ, ಅಧಿಕಾರ, ಅವರ ಸಾಹಿತ್ಯದ ವೈವಿಧ್ಯ, ಮಾನವೀಯತೆ, ಶ್ರೀಮಂತಿಕೆಗಳಿಂದ ಆಗಿನ ತರುಣರು (ಕಾಲೇಜಿನಲ್ಲಿ ತರುಣಿಯರ ಸಂಖ್ಯೆ ತೀರ ಕಡಿಮೆಯಾಗಿದ್ದ ದಿನಗಳು!) ಬೆರಗಾಗಿ ಪ್ರಭಾವಿತರಾದುದು ಆಶ್ಚರ್ಯವಲ್ಲ. (ರವೀಂದ್ರರು ತಮ್ಮ ‘ನೆನಪುಗಳಲ್ಲಿ’ ಪಾಶ್ಚಾತ್ಯ ಸಂಸ್ಕೃತಿಯ ಸ್ಪರ್ಶ ಬಂಗಾಳದ ಕೆಲವು ಯುವಕರನ್ನು ಹುಚ್ಚು ಹುಚ್ಚಾಗಿ ಕುಣಿಸಿದುದನ್ನು ವಿವರಿಸಿದ್ದಾರೆ.) ಬಹುಮಟ್ಟಿಗೆ ಭಕ್ತಿರಸಕ್ಕೆ ಮೀಸಲಾಗಿದ್ದ ಸಾಹಿತ್ಯವನ್ನೆ ಓದುತ್ತಿದ್ದವರಿಗೆ, ಶ್ರೀಸಾಮಾನ್ಯನ ಬಯಕೆ ಕನಸು, ನಿರಾಸೆ, ದುಃಖಗಳೆಲ್ಲದರ ಅಭಿವ್ಯಕ್ತಿಯ ಸಾಧನವಾದ ಸಾಹಿತ್ಯ ರೋಮಾಂಚನಗೊಳಿಸಿತು. ‘ಕಾವ್ಯೇಷು ನಾಟಕಂ ರಮ್ಯಂ, ನಾಟಕೇಷು ಶಕುಂತಲಾ’, ಇಂತಹ ಕೆಲವು ವಾಕ್ಯಗಳಿಗೆ ಅನ್ವಯ ವಿಮರ್ಶೆ ಸೀಮಿತವಾಗಿದ್ದ ನಾಡಿನಲ್ಲಿ ಬ್ರ್ಯಾಡ್ಲಿಯ, ಶೇಕ್ಸ್‌ಪಿಯರ್‌ನ ರುದ್ರ ನಾಟಕಗಳ ವಿಮರ್ಶೆ ಕಣ್ಣಿಗೆ ಅಚಿಜನ ಹಾಕಿದಂತೆ ಭಾಸವಾದುದೂ ಸಹಜ. ಶೇಕ್ಸ್‌ಪಿಯರ್, ಈಸ್ಕಿಲಸ್, ಸಾಫೊಕ್ಲೀಸ್, ಯೂರಿಪಿಡೀಸ್‌ರ ರುದ್ರ ನಾಟಕಗಳ ಭವ್ಯತೆಯಂತೂ ಒಂದು

ಮಹಾದರ್ಶನ. ಸಹಜವಾಗಿ ಸಣ್ಣಕತೆ, ರುದ್ರನಾಟಕ, ಭಾವಗೀತೆ, ಕಥನ ಕವನ, ಕಾದಂಬರಿ, ಸುನೀತದಂತಹ ಹೊಸ ಪ್ರಕಾರಗಳು ಅವತರಿಸಿದುವು, ಅನ್ವಯ ವಿಮರ್ಶೆ ಪ್ರಾರಂಭವಾಯಿತು.

ಆದರೆ, ಆ ಕಾಲದಲ್ಲಿನ ಬರಹಗಾರರು ಭದ್ರವಾಗಿ ನಿಂತಿದ್ದುದು ಭಾರತೀಯ ಸಂಸ್ಕೃತಿಯ ನೆಲದಮೇಲೆ. ಮನೆಗಳಲ್ಲಿ ಬಹುಮಟ್ಟಿಗೆ ಇನ್ನೂ ವೈದಿಕ ಸಂಸ್ಕೃತಿ ಗಾಳಿಯಲ್ಲಿ ಮಿಳಿತವಾಗಿತ್ತು. ಗೀತೆ, ಹಲವು ಧರ್ಮಗ್ರಂಥಗಳ ಭಾಷ್ಯಗಳು, ರಾಮಾಯಣ–ಮಹಾಭಾರದ ಪಾರಾಯಣ–ಪ್ರವಚನಗಳು ನಿತ್ಯ ಜೀವನದ ಭಾಗವಾಗಿದ್ದುವು. ವಿದ್ಯಾಭ್ಯಾಸದ ಪ್ರಾರಂಭದ ವರ್ಷಗಳಲ್ಲಿ ಸಂಸ್ಕೃತದ ಅಭ್ಯಾಸ ಅನಿವಾರ್ಯವಾಗಿತ್ತು. ಬಂಗಾಳಿ ಸಾಹಿತ್ಯ ಭಾರತದ ಇತರ ಭಾಷಾ ಸಾಹಿತ್ಯಗಳ ಮೇಲೆ ಪರಿಣಾಮಕಾರಿ ಪ್ರಭಾವವನ್ನು ಬೀರಿತ್ತು. ೧೯೩೦ರಲ್ಲಿ ರವೀಂದ್ರರಿಗೆ 'ನೋಬೆಲ್' ಬಹುಮಾನ ದೊರೆತದ್ದು ಭಾರತೀಯರಿಗೆ ಹೆಮ್ಮೆಯನ್ನುಂಟು ಮಾಡಿತು. ರವೀಂದ್ರರ ಕೃತಿಗಳು ಇತರ ಭಾಷೆಗಳಿಗೆ ಅನುವಾದವಾಗಲು ಸ್ಫೂರ್ತಿಯಾಯಿತು. ರವೀಂದ್ರ, ಶರತ್‌ಚಂದ್ರ, ಬಂಕಿಮಚಂದ್ರ ಇವರೆಲ್ಲರ ಸಾಹಿತ್ಯ ಬರಹಗಾರರ ಮತ್ತು ಓದುಗರ ಕಣ್ಣು, ಮನಸ್ಸುಗಳನ್ನು ಮತ್ತೆ ಭಾರತದತ್ತ ತಿರುಗಿಸಿದುವು. ('ವಂದೇಮಾತರಂ' ಗೀತೆಯನ್ನೊಳಗೊಂಡ 'ಆನಂದ ಮಠ' ಕನ್ನಡ ಭಾಷಾಂತರ ೧೯೨೫ರ ಹೊತ್ತಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಪಠ್ಯಪುಸ್ತಕವಾಗಿತ್ತು ಎಂಬುದು ಗಮನಾರ್ಹ.) ಕಾಲೇಜುಗಳಲ್ಲಿ ಪ್ರೊ. ಎಂ.ಹಿರಿಯಣ್ಣ, ಡಾ.ರಾಧಾಕೃಷ್ಣನ್ ಅಂತಹವರು ಭಾರತೀಯ ಸಂಸ್ಕೃತಿಯನ್ನು ಬೆಳಗಿದರು.

ಹೀಗೆ ನವೋದಯದ ಕಾಲದಲ್ಲಿ, ಮತಧರ್ಮದ ಸಖಿಯಾಗಿದ್ದ ಸಾಹಿತ್ಯ ತಾನೇ ರಾಣಿಯಾಗಿ ಮೆರೆಯುವಂತಾಯಿತು. ದೇವತೆಗಳು ಪೌರಾಣಿಕ ವ್ಯಕ್ತಿಗಳಿಗೇ ಬಹುಮಟ್ಟಿಗೆ ಮೀಸಲಾಗಿದ್ದ ಸಾಹಿತ್ಯ ಸಾಮಾನ್ಯ ವ್ಯಕ್ತಿಯ ಜೀವನವನ್ನೂ ಪ್ರವೇಶಿಸುವಂತಾಯಿತು. ಹೊಸ ಹೊಸ ಸಾಹಿತ್ಯ, ಪ್ರಕಾರಗಳು ಅವತರಿಸಿದುವು. ಭಾಷೆಗೆ ಹೊಸದೊಂದು ಸ್ವಾತಂತ್ರ್ಯ, ಚೈತನ್ಯ, ಲವಲವಿಕೆ ಬಂದಿತು. ಆದರೆ, ಆನಂದಕಂದ, 'ಶ್ರೀ', ಪಂಜೆ ಮಂಗೇಶರಾವ್, ಶ್ರೀನಿವಾಸ, ಡಿ.ವಿ.ಜಿ. ಇವರೆಲ್ಲರ ಕೃತಿಗಳು ಭಾರತೀಯ ಸಂಸ್ಕೃತಿಯ ಚೈತನ್ಯವನ್ನು ಪ್ರಕಟಗೊಳಿಸುವ ವಿದ್ಯುದ್ ಬಲ್ಬುಗಳಾದುವು. ೧೯೨೬ರಲ್ಲಿ ಬೆಳಕು ಕಂಡ ಸುಂದರ ಕೃತಿರತ್ನ 'ಸುಬ್ಬಣ್ಣ' (ಶ್ರೀನಿವಾಸ) ೧೯೩೫ರಲ್ಲಿ ಪ್ರಕಟವಾಗಿ ಜನಪ್ರಿಯವಾಗಿದ್ದ 'ಸುದರ್ಶನ' (ಆನಂದಕಂದ) ಇಂತಹ ಕೃತಿಗಳಲ್ಲಿ, ಪಾಶ್ಚಾತ್ಯರಿಂದ ಬಂದ ಸಾಹಿತ್ಯ ಮಾಧ್ಯಮದಲ್ಲಿ ಭಾರತದ ಸಂಸ್ಕೃತಿಯ ಅಭಿವ್ಯಕ್ತಿಯನ್ನು ಕಾಣಬಹುದು. ಪಾಶ್ಚಾತ್ಯ ಮೆಚ್ಚುಗೆಯೊಡನೆ ಭಾರತೀಯ ಸಂಸ್ಕೃತಿಯಲ್ಲಿ ಉಸಿರಾಡಲು ಸಾಧ್ಯವಿದ್ದ ಈ ವಾತಾವರಣದಲ್ಲಿ ಹಲವರು ಕಾದಂಬರಿಕಾರರು, ಕಥೆಗಾರರು, ತಮ್ಮ ತಮ್ಮ ವೈಶಿಷ್ಟ್ಯವನ್ನು ಬೆಳೆಸಿಕೊಂಡರು. ವಿದ್ಯುಚ್ಛಕ್ತಿ ಹಲವು ಬಣ್ಣಗಳ ಬಲ್ಬುಗಳಲ್ಲಿ ಹಲವು ಬಣ್ಣಗಳಲ್ಲಿ ಪ್ರಕಟಿತವಾದಂತೆ, ಹಲವು ಯಂತ್ರಗಳಲ್ಲಿ ಹಲವು ಬಗೆಗಳಲ್ಲಿ ಶಕ್ತಿ ತೋರಿದಂತೆ, ಪೂರ್ವ–ಪಶ್ಚಿಮಗಳ ಸಮ್ಮಿಳನ ಹಲವರು ಕಾದಂಬರಿಕಾರರು–ಕಥೆಗಾರರಲ್ಲಿ ಹಲವು ರೀತಿಗಳಲ್ಲಿ ಪ್ರಕಟಿತ ವಾಯಿತು. 'ಶ್ರೀಪತಿ' (ಎ.ಆರ್. ಕೃಷ್ಣಶಾಸ್ತ್ರಿ) ಕಥೆ, ಕಡೆಗೋಂಡ್ಲು ಶಂಕರಭಟ್ಟರ ಕಾದಂಬರಿ, ಕುವೆಂಪು ಅವರ 'ಕಾನೂರು ಸುಬ್ಬಮ್ಮ' (೧೯೩೬) – ಇವು ಹೆಸರಿಸಬಹುದಾದ ಕೆಲವು ಸಾಧನೆಗಳು. ದೇವುಡು ಅವರ, 'ಮಹಾಬ್ರಾಹ್ಮಣ' 'ಮಹಾಕ್ಷತ್ರಿಯ' 'ಮಹಾದರ್ಶನ' ಈ ಮನೋಧರ್ಮದ ದಿವ್ಯಕೊಡುಗೆ.

ಪಾಶ್ಚಾತ್ಯ–ಪೌರ್ವಾತ್ಯ ಸಂಸ್ಕೃತಿಗಳು ಈ ಕೃತಿಗಳಲ್ಲಿ ಬೇರೆ ರೀತಿಯನ್ನಲ್ಲದೆ, ಗಮನಿಸಬೇಕಾದ ಕೆಲವು ಅಂಶಗಳುಂಟು. ಮೊದಲನೆಯದು, ಭಾರತ ಅಂದು ಪರತಂತ್ರವಾಗಿ ರಿಕ್ತ ಸ್ಥಿತಿಯಲ್ಲಿದ್ದರೂ, ಈ ಬರಹಗಾರರಿಗೆ ಜೀವನ ಗೊಂದಲವನ್ನುಂಟು ಮಾಡಲಿಲ್ಲ. ಇದಕ್ಕೆ ಕಾರಣ ಇವರು ದೇಶದ ವಿಷಯಕ್ಕೆ ಅಲಸ್ಯದಿಂದ ಇದ್ದರು ಎನ್ನುವುದಲ್ಲ. ದೇಶದ ಬಗ್ಗೆ ಇವರ ಕಳಕಳಿ ಸ್ಪಷ್ಟ. ಆದರೆ, ಈ ಪೀಳಿಗೆಯವರಿಗೆ ಭಾರತದ ಅಂತಃಸತ್ವ ಉಳಿದಿದೆ, ಮತ್ತೆ ಪ್ರಕಟವಾಗುತ್ತದೆ. ಜಗತ್ತಿಗೆ ಭಾರತ ಅಮೂಲ್ಯವಾದ ಕೊಡುಗೆಯನ್ನು ಕೊಡಲಿದೆ ಎಂಬ ವಿಶ್ವಾಸ. ಕುವೆಂಪು ಅವರ 'ಭಾರತ ತಪಸ್ವಿನಿ' (೧೯೩೩) ಸುನೀತದ ವಿಶ್ವಾಸ 'ಶ್ರೀನಿವಾಸ'ರ ಪ್ರಾರಂಭದ ಕಥೆಗಳೊಲ್ಲೊಂದಾದ 'ಮಸುಮತ್ತಿ'ಯಲ್ಲಿ ಎಷ್ಟು ಕಲಾತ್ಮಕವಾಗಿ, ಗಂಭೀರವಾಗಿ ಪ್ರಕಟವಾಗಿದೆ! ಜೀವನದಲ್ಲಿ ಗಂಭೀರ ಶ್ರದ್ಧೆ ಇದ್ದ ಈ ಬರಹಗಾರರಿಗೆ ಜೀವನ ಸ್ವೀಕಾರಾರ್ಹ; ಜೀವನದಲ್ಲಿ ಸಾಧಿಸುವುದೇನೋ ಇದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಜೀವನ ಪರಿಪೂರ್ಣ, ದೋಷರಹಿತ ಎಂದು ಭ್ರಮೆ ಇಲ್ಲ ಅವರಿಗೆ. ಆದರೆ ಜೀವನ, ವ್ಯಕ್ತಿತ್ವ ಇವುಗಳ ವಿಷಯದಲ್ಲಿ ಗೊಂದಲವೂ ಇಲ್ಲ. ಆದುದರಿಂದ ಜೀವನಕ್ಕೆ, ಪರಿಸರಕ್ಕೆ ಇವರ ಪ್ರತಿಕ್ರಿಯೆಯಲ್ಲಿ ದ್ವಂದ್ವ ಉದ್ವೇಗಗಳಿಲ್ಲ. ಎರಡನೆಯದಾಗಿ, ಇವರಿಗೂ ಇವರ ಓದುಗರಿಗೂ ದೂರ ಹೆಚ್ಚಿಲ್ಲ. ಇವರೊಡನೆ ಸುಲಭವಾಗಿ ಸಹಾನುಭೂತಿ ಗಳಿಸಿಕೊಂಡು ಇವರ ದೃಷ್ಟಿ, ಮೌಲ್ಯಗಳನ್ನು ಸ್ವೀಕರಿಸಬಲ್ಲ ಓದುಗರಿಗಾಗಿ ಇವರು ಬರೆಯುತ್ತಿದ್ದುದು. ಅಕ್ಷರ ಜ್ಞಾನ, ನಿಯತಕಾಲಿಕಗಳ ಸಂಖ್ಯೆ, ಪ್ರಸಾರ, ಪುಸ್ತಕ ಓದುವವರ ಸಂಖ್ಯೆ– ಎಲ್ಲ ನಿಯಮಿತವಾಗಿ, ಬಹುಮಟ್ಟಿಗೆ ಪಟ್ಟಣಗಳಿಗೆ ಸೀಮಿತವಾಗಿದ್ದ ಕಾಲದಲ್ಲಿ ಬರೆಯಲಾರಂಭಿಸಿದವರು ಇವರು, ಮತ್ತೊಮ್ಮೆ ಓದುಗರ ವೃತ್ತದ ಅತಿ ಶ್ರೇಷ್ಠ ಪ್ರತಿನಿಧಿಗಳು. ಇವರಿಗೂ, ಓದುಗರಿಗೂ ವ್ಯತ್ಯಾಸವಿದ್ದುದು ಇವರ ಕಲ್ಪನಾಶಕ್ತಿಯಲ್ಲಿ, ಗಹನತೆಯಲ್ಲಿ. ಮೂರನೆಯದಾಗಿ, ಈ ಕೃತಿಕಾರರಿಗೆ ತಂತ್ರದತ್ತ ವಿಶಿಷ್ಟ ಗಮನವಿಲ್ಲ. ನವೋದಯದ ಪ್ರಾರಂಭದಲ್ಲಿ ಬಂದರೂ, ಬರೆಯುತ್ತಿದ್ದವರ ಸಂಖ್ಯೆ ಕಡಿಮೆ ಎನ್ನುವುದು ಒಂದು ಕಾರಣ; ಓದುಗ–ಕಥೆಗಾರರ ನಡುವಿನ ಸಹಜವಾದ ಸಹಾನುಭೂತಿ ಮತ್ತೊಂದು ಕಾರಣ. ನಾಲ್ಕನೆಯದಾಗಿ, ಭಾಷೆಯ ಬಳಕೆಯಲ್ಲಿಯೂ ವಿಶೇಷಪ್ರಜ್ಞೆ ಇವರಲ್ಲಿಲ್ಲ. ಇವರು ಸ್ವತಂತ್ರವಾಗಿ ಕೃತಿ ರಚನೆ ಮಾಡುತ್ತಿದ್ದವರು, ನವೋದಯದ ಕನ್ನಡ ಗದ್ಯದ ಪ್ರಾರಂಭದ ದಿನಗಳಲ್ಲವರು. ಹಿಂದಿನ ಪೀಳಿಗೆಗಳ ಪ್ರಭಾವದಿಂದ ತಪ್ಪಿಸಿಕೊಳ್ಳುವ ಅಗತ್ಯವಿರಲಿಲ್ಲ. (ವಚನಕಾರರು ಗಡುಸನ್ನು ಕಳಚಿದ ಆಡು ಭಾಷೆಯನ್ನು ಬಳಸಿಕೊಳ್ಳುವ ರೀತಿಯನ್ನು ತೋರಿಸಿದ್ದರು, ನವೋದಯದ ಬರಹಗಾರರಿಗೂ ಇವರಿಗೂ ಕಾಲಮಾನದಲ್ಲಿದ್ದ ಅಂತರ ವಚನಕಾರರ ಪ್ರಭಾವ ಸರಪಳಿಯಾಗದಂತೆ ತಡೆಯಿತು.) ಶ್ರೀನಿವಾಸ, ದೇವುಡು, ನವರತ್ನ ರಾಮರಾವ್, ಆನಂದ ಕಂದ, ಎ.ಆರ್.ಕೃಷ್ಣಶಾಸ್ತ್ರಿ – ಇಚಿತಹವರು ವಯಶಿಷ್ಟ್ಯವನ್ನು ಬೆಳಗಿದರು.

ವರ್ಷಗಳು ಸೇರಿದಂತೆ, ಭಾರತದಲ್ಲಿ ಪಶ್ಚಿಮ–ಪೂರ್ವಗಳ ಸಂಬಂಧದ ರೀತಿ ಬೇರೆಯಾಯಿತು. ಆಂಗ್ಲ ದಬ್ಬಾಳಿಕೆಯ ಸಂಕೇತವಾದ ಶಾಲಾ ಕಾಲೇಜುಗಳ ಸಂಖ್ಯೆ ಹೆಚ್ಚಿದಂತೆ ತರುಣವರ್ಗಕ್ಕೆ ಇಂಗ್ಲೆಂಡಿನಿಂದ ಬಂದ ಉಪಾಧ್ಯಾಯರ ನೇರ ಪರಿಚಯದ ಅವಕಾಶ ಕಡಿಮೆಯಾಯಿತು. (೧೯೪೨ರ ಹೊತ್ತಿಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿದ್ದು ಒಬ್ಬರೇ ಆಂಗ್ಲರು, ಅವರು

೧೯೪೩ರಲ್ಲಿ ಬಿಟ್ಟರು) ಆಂಗ್ಲ ಅಧಿಕಾರಿಗಳೊಡನೆ ಜನರ ನೇರ ಸಂಪರ್ಕವೂ ಕಡಿಮೆಯಾಯಿತು. ಮತ್ತೊಂದು ವಿಸ್ಮಯದ ಸಂಗತಿ ಎಂದರೆ, ಈ ಶತಮಾನದ ನಾಲ್ಕನೆಯ ದಶಕದ ಕಡೆಯ ವರ್ಷಗಳವರೆಗೆ ಇಲಿಯಟ್, ಆಡೆನ್, ವಾಲ್ಟ್ ವ್ಹಿಟ್‌ಮನ್– ಇವರೆಲ್ಲ ನಮ್ಮ ಮಟ್ಟಿಗೆ ಬಹುಪಾಲು ಅಜ್ಞಾತರಾಗಿಯೇ ಉಳಿದರೆಂಬುದು. ಇಂಗ್ಲಿಷ್ ಸಾಹಿತ್ಯ ಎಂದರೆ, ಶೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್, ಷೆಲ್ಲಿ, ಬೈರನ್, ಕೀಟ್ಸ್, ಕಾರ್ಲೈಲ್, ರಸ್ಕಿನ್, ಸ್ಕಾಟ್, ಜೇನ್ ಆಸ್ಟಿನ್, ಥ್ಯಾಕರೆ, ಹಾರ್ಡಿ, ಟೆನಿಸನ್, ಬ್ರೌನಿಂಗ್, ಆರ್ನಾಲ್ಡ್, ಸ್ವಲ್ಪಮಟ್ಟಿಗೆ ಬರ್ನಾರ್ಡ್ ಷಾ. ಇಬ್ಸೆನ್ನಿನ ಹೆಸರನ್ನು ಕೆಲವರು ಕೇಳಿದ್ದರು. ಹೀಗಾಗಿ ಪಾಶ್ಚಾತ್ಯ ಸಂಸ್ಕೃತಿ ಸ್ವಲ್ಪ ದೂರವಾಯಿತು. ದೇಶವನ್ನೆಲ್ಲ ತುಂಬಿದ ಸ್ವಾತಂತ್ರ್ಯಪ್ರೇಮ ಭಾರತದ ಸಂಸ್ಕೃತಿಯಲ್ಲಿ ಒಲವನ್ನು ಹೆಚ್ಚಿಸಿತು; ದೇಶಾಭಿಮಾನ ಕ್ರಿಯಾಶಾಲಿಯಾಗಬೇಕು, ದೇಶಸೇವೆ ಎಂದರೆ ದೇಶದ ಜನತೆಯ ಸೇವೆ ಎಂಬ ಭಾವನೆ ಬಲಿಯಿತು. 'ಗೀತೆ ನಮಗೆ ತಾಯಿ' ಎಂದ ಗಾಂಧೀಜಿಯ ಪ್ರಭಾವ ಈ ಪೀಳಿಗೆಯ ಮೇಲೆ ಅಪಾರ. ೧೯೧೫ರಲ್ಲಿ ಪ್ರಕಟವಾದ 'ಮಾತೃನಂದಿನಿ'ಯಲ್ಲಿ ರಾಷ್ಟ್ರೀಯ ಭಾವನೆ ಮಿಂಚಿತಾದರೂ, ಅದು ಕಾದಂಬರಿಗಳ ಮೂಲಚೈತನ್ಯವಾದುದು ೧೯೪೫–೪೭ರಲ್ಲಿ; 'ಮೂರಾಬಟ್ಟೆ' (ವಿ.ಎಂ. ಇನಾಂದಾರ್), 'ಸ್ವಾತಂತ್ರ್ಯದೆಡೆಗೆ' (ಬಸವರಾಜ ಕಟ್ಟೀಮನಿ), 'ರಕ್ತ ತರ್ಪಣ' (ತ.ರಾಸು.), 'ಮೆರವಣಿಗೆ' (ಗೊರೂರು ರಾಮಸ್ವಾಮಿ ಅಯ್ಯಂಗಾರ್) ಇಂತಹ ಕೃತಿಗಳಲ್ಲಿ. ಈ ಅವಧಿಯಲ್ಲಿಯೆ ಪ್ರಗತಿಶೀಲದ ಪಂಥ ಗರಿಗೂಡಿತು ಎಂಬುದೂ ಗಮನಾರ್ಹ. ಈ ಬರಹಗಾರರಲ್ಲಿ ಹಲವರು ಹಳ್ಳಿಗಳಲ್ಲಿ ಹುಟ್ಟಿ ಬೆಳೆದೂ ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗವಹಿಸಿದವರು, ಸರಕಾರಿ ಕೆಲಸದಿಂದ ದೂರ ಉಳಿದವರು. ಹಳ್ಳಿಗರ ಕಷ್ಟದುಃಖಗಳನ್ನು ಸಮೀಪವಾಗಿ ಕಂಡವರು. ಒಟ್ಟಿನಲ್ಲಿ ಹೇಳುವುದಾದರೆ–ಈ ಮಾತು ಈ ಅವಧಿಯ ಹಲವರಿಗೆ ಅನ್ವಯಿಸುವುದಿಲ್ಲ ಎಂಬುದು ನೆನಪಿನಲ್ಲಿಡಬೇಕಾದ ಸಂಗತಿ. ಹಿಂದಿನ ಪೀಳಿಗೆಯವರಿಗೆ ಪೂರ್ವ–ಪಶ್ಚಿಮ ಸಂಸ್ಕೃತಿಗಳೊಡನಿದ್ದ ಸಂಪರ್ಕ ಇವರಿಗಿರಲಿಲ್ಲ. ಪಾಶ್ಚಾತ್ಯ ಸಂಸ್ಕೃತಿ ಸ್ವಲ್ಪ ದೂರವಾಯಿತು. ಸಂಸ್ಕೃತ ಅಧ್ಯಯನ ಪ್ರಾಧಾನ್ಯ ಕಳೆದುಕೊಳ್ಳುತ್ತಿದ್ದ ಕಾಲದಲ್ಲಿ, ಇವರಲ್ಲಿ ಬಹುಮಂದಿಗೆ ಭಾರತೀಯ ಸಂಸ್ಕೃತಿ ಪರಿಚಯವಾದುದು ಜನಜೀವನದಲ್ಲಿ ಅದರ ಅಭಿವ್ಯಕ್ತಿಯಿಂದಲೇ. (ಆದರೆ, ಈ ಸಂಸ್ಕೃತಿ ಜೀವಂತವಾಗಿ, ಬಾಳನ್ನು ನಡೆಸಬಲ್ಲುದು ಎಂಬುದನ್ನು ಇವರು ಕಂಡರು.) ಗಾಂಧೀಜಿಯ ಪ್ರಭಾವ ದೇಶವನ್ನೆಲ್ಲಾ ತುಂಬಿದ್ದ ಕಾಲದಲ್ಲಿ ಭಾರತದ ಪ್ರಾಚೀನ ಸಂಸ್ಕೃತಿಯ ಸತ್ವದ ಬಗ್ಗೆ ಸಂದೇಹ ಬರುವಂತಿರಲಿಲ್ಲ; ಅಲ್ಲದೆ, ಈ ಸಂಸ್ಕೃತಿ ಕ್ರಿಯಾಶೀಲವೂ ಆಯಿತು. ಈ ಅವಧಿಯ ಬರಹಗಾರರಿಗೂ ಜೀವನ ಗೊಂದಲದ ಪ್ರಶ್ನೆಯೇ ಅಲ್ಲ; ಬದುಕು ಸ್ವೀಕಾರಾರ್ಹವೆ, ಬದುಕಿನ ಗುರಿ ಏನು–ಇಂತಹ ಸಮಸ್ಯೆಗಳು ಇವರಿಗಿಲ್ಲ. ಒಂದು ದೃಷ್ಟಿಯಿಂದ ಈ ಪ್ರಗತಿಶೀಲರು 'ರೊಮ್ಯಾಂಟಿಕ್ಸ್' ಇವರಿಗೆ ಮಾನವ ಹೃದಯದ ಸಹಜ ಭಾವಗಳು (ಫೀಲಿಂಗ್ಸ್) ಪವಿತ್ರ; ಮನುಷ್ಯನ ಬಾಳನ್ನು ಸುಂದರಗೊಳಿಸಬಹುದು ಎನ್ನವ ನಂಬಿಕೆ ಇವರಿಗೆ.

ಈ ಪೀಳಿಗೆಯ ಕಾದಂಬರಿ ಕಥೆಗಳನ್ನು ಸಮೀಕ್ಷಿಸುವಾಗ ಕೆಲವು ಸ್ವಾರಸ್ಯದ ಸಂಗತಿಗಳು ಗೋಚರವಾಗುತ್ತವೆ. ಪ್ರಗತಿಶೀಲರು ಹಿಂದಿನ ಪೀಳಿಗೆಯ ವಿರುದ್ಧ ಬಂಡಾಯ ಹೂಡಿದರು ಎಂದು ಆಗ ತೋರುತ್ತಿತ್ತು. ಹಿಂದಿನ ಪೀಳಿಗೆಗೂ ಇವರಿಗೂ ಇದ್ದ ಸಮಾನಾಂಶಗಳು ಈಗ ಸ್ಪಷ್ಟವಾಗಿವೆ. ಇಬ್ಬರಿಗೂ ಮಾನವ ವ್ಯಕ್ತಿತ್ವ ಗೊಂದಲದ ಸಮಸ್ಯೆಯಲ್ಲ ಎಂಬುದು ಒಂದು. (ಹೀಗೆಂದ ಮಾತ್ರಕ್ಕೆ ಇಬ್ಬರೂ ಮನುಷ್ಯ ಸ್ವಭಾವದ ಜಟಿಲತೆಯನ್ನೂ, ವೈಚಿತ್ರ್ಯವನ್ನೂ ಅರಿಯದವರು ಎಂದು ಅರ್ಥವಲ್ಲ.) ಇಬ್ಬರಿಗೂ ಬದುಕು ಸ್ವೀಕಾರಾರ್ಹ. ಇಬ್ಬರೂ ಓದುಗ ವರ್ಗದೊಡನೆ ಸಹಾನುಭೂತಿಯ ಬಾಂಧವ್ಯವನ್ನು ಸಾಧಿಸಿದ್ದರು. ಪ್ರಗತಿಶೀಲರ ಕಾಲದಲ್ಲಿ ಓದುಗರ ಸಂಖ್ಯೆ ಬೆಳೆಯಿತು– ಹಲವಾರು ಕಾರಣಗಳಿಂದ. ಓದುಗರಲ್ಲಿ ಕೆಲವರಿಗೆ ಕೆಲವು ಕೃತಿಗಳು ಸಭ್ಯತೆಯ ವೃತ್ತವನ್ನು ದಾಟಿದುವು ಎನ್ನಿಸಿದುದು ಉಂಟು; ಸಾಹಿತ್ಯದಲ್ಲಿ ಶೀಲ–ಅಶ್ಲೀಲದ ಪ್ರಶ್ನೆ ತುಂಬಾ ಕಾವಿನಿಂದ ಪ್ರಶ್ನೆಯಾದುದುಂಟು. ಆದರೆ, ಅನ್ಯಾಯ, ಶೋಷಣೆ, ಡಾಂಭಿಕತೆ ಇವನ್ನು ನಿಗ್ರಹ ಮಾಡಬೇಕು ಎಂಬ ಪ್ರಗತಿಶೀಲದ ಧೋರಣೆಯನ್ನು ಯಾರೂ ವಿರೋಧಿಸುವಂತಿರಲಿಲ್ಲ; ಬಾಳನ್ನು ಹಸನುಗಳಿಸುವ ಅವರ ತವಕವನ್ನು ಅಲ್ಲಗಳೆಯುವಂತಿರಲಿಲ್ಲ. ಇದಕ್ಕಿಂತ ಮುಖ್ಯವಾಗಿ ಅವರ ಬರಹ ಅರ್ಥವಾಗುವುದಿಲ್ಲ ಎನ್ನುವ ಸೊಲ್ಲು ಇರಲಿಲ್ಲ. ಕೃತಿಕಾರ–ಓದುಗರ ನಡುವೆ ಸೇತುವೆ ಕಟ್ಟುವುದು ಸಮಸ್ಯೆಯಾಗಿರಲಿಲ್ಲ.

ಸಮಾಜದಲ್ಲಿ ಕ್ರಾಂತಿಯನ್ನುಂಟುಮಾಡಲು ಹೊರಟ ಈ ಬರಹಗಾರರಿಗೆ ಸಾಹಿತ್ಯ ಒಂದು ಸಾಧನವಾಯಿತು. ನವೋದಯಕ್ಕೆ ಮೊದಲು ಸಾಹಿತ್ಯ, ಮತ–ಧರ್ಮಕ್ಕೆ ಸಖಿ, ಪ್ರಗತಿಶೀಲರ ಕಾಲದಲ್ಲಿ ಸಾಹಿತ್ಯ, ಸಾಮಾಜಿಕ ಕ್ರಾಂತಿಯ ಸಖಿ. ಇದರಿಂದ ಒಟ್ಟಿನಲ್ಲಿ ಇವರು ಕಾದಂಬರಿ–ಕಥೆಗಳ ಕಲೆಗೆ ಹೆಚ್ಚು ಗಮನ ನೀಡಲಿಲ್ಲ. (ತ.ರಾ.ಸು.–ಹುಟ್ಟು ಕಲೆಗಾರರು. ಅವರ 'ಮುಂಜಾವಿನಿಂದ ಮುಂಜಾವು', 'ಬಿಡುಗಡೆಯ ಬೇಡಿ'ಯಿಂದ ಪ್ರಾರಂಭಿಸಿ ಈಚೆಗಿನ ಕಾದಂಬರಿಗಳವರೆಗೆ ತಂತ್ರಕ್ಕೆ ವಿಶಿಷ್ಟ ಗಮನವನ್ನು ಕೊಡುವುದನ್ನು ಕಾಣಬಹುದು. 'ಗಿರಿ ಮಲ್ಲಿಗೆಯ ನಂದನದಲ್ಲಿ'ಯಂತಹ ಸಂಕಲನ ಅವರ ಪ್ರಯೋಗಶೀಲತೆಗೆ ಸಾಕ್ಷಿ.) ಇವರಲ್ಲಿ ಬಹುಮಂದಿ ಸಹಜವಾಗಿ ಮನಮುಟ್ಟುವಂತೆ ಬರೆಯಬಲ್ಲವರು. ಅ.ನ.ಕೃ. ಅವರದು ಸಹಜ, ತೇಜಸ್ವೀ ಭಾಷೆ. ತ.ರಾ.ಸು. ಚಿತ್ರಮಯ ಮೂರ್ತ ಶೈಲಿ ಬಳಸಿದರು. ಕಟ್ಟೀಮನಿಯವರ ಭಾಷೆ ಶಕ್ತಿಯ ಪೊಟ್ಟಣ. ಆದರೆ ಕ್ರಾಂತಿಯ ಉತ್ಸಾಹದಲ್ಲಿದ್ದ ಇವರು ಭಾಷೆಯ ಬಳಕೆಗೆ ವಿಶಿಷ್ಟ ಗಮನ ಕೊಡಲಿಲ್ಲ. ಹೀಗಾಗಿ, ಶಬ್ದಗಳನ್ನು ಸವಕಲು ನಾಣ್ಯಗಳನ್ನಾಗಿ ಮಾಡಿಬಿಟ್ಟರು. ಹೊಣೆಗಾರಿಕೆಯಿಂದ ಭಾಷೆಯನ್ನು ಬಳಸಲಿಲ್ಲ ಎಂಬ ಆಕ್ಷೇಪಣೆಗೆ ಗುರಿಯಾಗಬೇಕಾಯಿತು.

ಇದುವರೆಗಿನ ಸಾಮಾನ್ಯೀಕರಣಗಳಿಗೆ ಅಪವಾದಗಳೆನ್ನಿಸಿ ಕೊಳ್ಳಬಹುದಾದ ಇಬ್ಬರು ಹಿರಿಯ ಕಥೆಗಾರ–ಕಾದಂಬರಿ ಕಾರರಿದ್ದಾರೆ. ಮೊದಲನೆಯವರು, ಶಿವರಾಮ ಕಾರಂತ. ಯಾವ ಪಂಥಕ್ಕೂ ಸೇರದ, ಯಾವ ಪಂಥವನ್ನೂ ಸೃಷ್ಟಿಸದ ಕಾರಂತ. (ಎಸ್.ಎಲ್.ಭೈರಪ್ಪನವರ ಕಾದಂಬರಿಗಳು ಮಾತ್ರ ಕಾರಂತರ ಕೃತಿಗಳನ್ನು ನೆನಪಿಗೆ ತರುತ್ತವೆ) ಕಾಲದ ದೃಷ್ಟಿಯಿಂದ ಮೊದಲನೆಯ ಪೀಳಿಗೆಗೆ ಇವರು ಸೇರಿದರೂ, ಕಾರಂತರನ್ನು 'ಪ್ರಗತಿಶೀಲ'ರಲ್ಲ ಎಂದು ಯಾರು ಹೇಳಬೇಕು? ಕಾರಂತರಾದರೂ ಜೀವನ ಸ್ವೀಕಾರಾರ್ಹ ಎಂದು ಬಗೆದವರು. ಜೀವನದ ಅನ್ಯಾಯ, ಆಷಾಢಭೂತಿತನಗಳನ್ನು ಕಂಡು ರೊಚ್ಚಿಗೆದ್ದರೂ, ಜೀವನವೇ ಸಮಸ್ಯೆ ಎಂದುಕೊಂಡವರಲ್ಲ. ಗಟ್ಟಿ ನೆಲದ ಮೇಲೆ ನಿಂತು ಸುತ್ತ ನೋಡುವವರು ಅವರು; ನೆಲವೇ ಕುಸಿಯುತ್ತಿದೆ ಎಂದು ದಿಗ್ಭ್ರಮೆಯಿಂದ ಕೆಳಗೆ ಸುತ್ತ ಕಣ್ಣು ಹೊರಳಿಸಿದವರಲ್ಲ. ಓದುಗರೊಡನೆ ಸಹಾನುಭೂತಿಯ ಮತ್ತು ಕಲ್ಪನೆಯ ಸಂಪರ್ಕ

ಸಾಧಿಸುವುದಂತೂ ಎಂದೂ ಅವರಿಗೆ ಸಮಸ್ಯೆಯಾಗಲಿಲ್ಲ. 'ಬೆಟ್ಟದಜೀವ', 'ಮರಳಿ ಮಣ್ಣಿಗೆ', 'ಅಳಿದ ಮೇಲೆ' ಕಾದಂಬರಿಗಳಲ್ಲಿ ಬೇರೆ ಬೇರೆ ತಂತ್ರಗಳನ್ನು ಬಳಸಿದ್ದರೂ, ತಂತ್ರಕ್ಕೆ ಹೆಚ್ಚು ಗಮನ ಕೊಟ್ಟಿರಲಿಲ್ಲ. ಬಂಡೆಯಂತಹ ಶಕ್ತಿಯುತ ವ್ಯಕ್ತಿತ್ವದಿಂದ ಬಂದ ಸತ್ತ್ವ, ತೇಜಸ್ಸುಗಳೇ ಅವರ ಭಾಷೆಗೆ ಉಸಿರು; ಲಕ್ಷ್ಯ ಕೊಟ್ಟು ರೂಪಿಸಿದ ಬರಹವಲ್ಲ ಅವರದು. ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರದು ವಿಶಿಷ್ಟ ಸ್ಥಾನ, ವಿಶಿಷ್ಟ ಸಾಧನೆ. ಅವರಲ್ಲಿ ಹಾಸ್ಯ ಪ್ರವೃತ್ತಿ ಇನ್ನೂ ಸಮರ್ಥವಾಗಿದೆ ಎಂಬುದೊಂದನ್ನು ನೆನಪಿನಲ್ಲಿಟ್ಟರೆ, ಕಾರಂತರ ಬಗ್ಗೆ ಹೇಳಿದದುದೆಲ್ಲ ಅವರಿಗೂ ಅನ್ವಯಿಸುತ್ತದೆ.

ನವೋದಯದ ಪ್ರಾರಂಭದ ಪೀಳಿಗೆ, ಅನಂತರದ ಪೀಳಿಗೆ–ಎರಡೂ ಪೀಳಿಗೆಯವರೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಅವಧಿಯಲ್ಲಿ ಚಾರಿತ್ರಿಕ ಕಾದಂಬರಿಗಳನ್ನು ರಚಿಸಿದುದು ಕುತೂಹಲದ ಸಂಗತಿ. ಶ್ರೀನಿವಾಸ, ಕೆ.ವಿ. ಅಯ್ಯರ್, ಬಿ.ಪುಟ್ಟಸ್ವಾಮಯ್ಯ, ಅ.ನ.ಕೃ., ತ.ರಾ.ಸು. – ಎಲ್ಲರೂ ಒಂದೇ ದಶಕದಲ್ಲಿ ಚಾರಿತ್ರಿಕ ಕಾದಂಬರಿಗಳನ್ನು ರಚಿಸಿದುದು ಇವರಿಗಿದ್ದ ಸಮಾನ ಅಂಶಗಳನ್ನು ಸ್ಪಷ್ಟಗೊಳಿಸುತ್ತದೆ.

ಸ್ವಾತಂತ್ರ್ಯ ಬಂದ ಕೆಲವೇ ವರ್ಷಗಳಲ್ಲಿ 'ನವ್ಯ' ಪಂಥ ಉದಯಿಸಿತು. (ಅಡಿಗರ 'ನಂದನ' ಕವನ ೧೯೫೧ರ ಜನವರಿಯಲ್ಲಿ, 'ಕೃಷ್ಣನ ಕೊಳಲು' ೧೯೫೨ರ ಆಗಸ್ಟ್‌ನಲ್ಲಿ, 'ಹಿಮಗಿರಿಯ ಕಂದರ' ೧೯೫೨ರ ಸೆಪ್ಟೆಂಬರ್‌ನಲ್ಲಿ ಪ್ರಕಟವಾದುದು) ಆ ಹೊತ್ತಿಗೆ ಗಾಂಧೀಜಿ ಮರೆಯಾಗಿದ್ದರು; ಪ್ರಾಮಾಣಿಕ 'ಗಾಂಧಿಸಂ' ಬಹುಮಟ್ಟಿಗೆ ಮರೆಯಾಗಿತ್ತು. ಗಾಂಧೀಜಿಯ ನೆರಳಿನಲ್ಲಿ ನಡೆಯುವವರು ಎನ್ನಿಸಿಕೊಂಡವರ ವ್ಯಕ್ತಿತ್ವಗಳಲ್ಲಿನ ಬಿರುಕುಗಳು ವಿಚಾರವಂತರ ಎದೆ ಒಡೆಯುವಂತೆ ಕಾಣಿಸಿಕೊಂಡವು.

ವ್ಯಕ್ತಿತ್ವದ ವಿಶ್ಲೇಷಣೆ ಪ್ರಾಧಾನ್ಯ ಪಡೆಯಲು ಇದೂ ಒಂದು ಕಾರಣ. ಮೂವತ್ತು–ನಲವತ್ತು ವರ್ಷಗಳ ಕಾಲ ಜನತೆಯ ಕಣ್ಣಿನ ಮುಂದಿದ್ದು, ಜನತೆಯಲ್ಲಿ ಒಂದು ಚಿತ್ರವನ್ನೂ, ನೆಚ್ಚಿಕೆಯನ್ನೂ ಮೂಡಿಸಿದ್ದವರ ವ್ಯಕ್ತಿತ್ವ ಅನಿರೀಕ್ಷಿತ ಮುಖಗಳನ್ನು ಪ್ರದರ್ಶಿಸಲು ಪ್ರಾರಂಭಿಸಿದಾಗ, ಸಹಜವಾಗಿ ಮನುಷ್ಯನ ವ್ಯಕ್ತಿತ್ವ ಎಂದರೇನು, ಇದರ ಒಳತೋಟಿ ಎಂತಹದು, ಎನ್ನುವುದು ಬಹು ಮುಖ್ಯವಾದ ಪ್ರಶ್ನೆಯಾಯಿತು. ಹಿಂದಿನ ಎರಡು ಪೀಳಿಗೆಗಳಲ್ಲಿ ಬೇರೆ ವ್ಯತ್ಯಾಸಗಳು ಏನೇ ಇರಲಿ, ಅವರ ಮೂಲ ಮೌಲ್ಯಗಳು ಒಂದೇ. (ಅ.ನ.ಕೃ., ತ.ರಾ.ಸು., ಕಟ್ಟೀಮನಿ ಇವರ ಚಾರಿತ್ರಿಕ ಕಾದಂಬರಿಗಳು ಇವನ್ನು ಸ್ಪಷ್ಟಪಡಿಸುತ್ತವೆ.) ರಾಷ್ಟ್ರಜೀವನದ ಆವರಣ ಇವೆರಡರಲ್ಲಿ ಒಂದು ಸಹಜ ಸಂಬಂಧವನ್ನು ಕಲ್ಪಿಸತ್ತು. ಆ ಮೌಲ್ಯಗಳನ್ನು–ಬಾಯಿ ಮಾತಿನಲ್ಲಲ್ಲದಿದ್ದರೂ, ಕೃತಿಯಲ್ಲಿ ಮುಖ್ಯರೆನಿಸಿಕೊಂಡವರು ಧಿಕ್ಕರಿಸಿದಾಗ, ಅವರ ಕೃತಿಗಳು ಅವರ ಘೋಷಣೆಗಳಿಗಿಂತ ಗಟ್ಟಿಯಾಗಿ ಮಾತನಾಡಿದಾಗ, ಸ್ವಾತಂತ್ರ್ಯ ನಿರೀಕ್ಷಿತ ಫಲವನ್ನು ತಂದುಕೊಡದಿದ್ದಾಗ, ಹಿಂದಿನ ಮೌಲ್ಯಗಳು ಕುಸಿದವು. ಹೊಸ ಮೌಲ್ಯಗಳ ಶೋಧನೆ ಮಾತ್ರವಲ್ಲ, ಜೀವನದಲ್ಲಿ ನೆಚ್ಚಬಹುದಾದ ಮೌಲ್ಯಗಳುಂಟೇ ಎಂಬ ವಿಚಾರವೂ ಪ್ರಾರಂಭವಾಗುವುದು ಅನಿವಾರ್ಯವಾಯಿತು; ಪ್ರತಿ ವಿಚಾರವಂತ, ತಾನೇ ಮೌಲ್ಯಗಳನ್ನು ಕಂಡುಕೊಳ್ಳುವುದು ಅನಿವಾರ್ಯವಾಯಿತು. ಟಿ.ಎಸ್.ಇಲಿಯಟ್, ಪಿರಾಂಡೆಲೊ, ಬೆಕೆಟ್, ಸ್ಟಲೀಮಗರ್, ಅಯನೆಸ್ಕೊ–ಹೀಗೆ ಇಂಗ್ಲೆಂಡಿನ ಮತ್ತು ಇತರ ದೇಶಗಳ ಬರಹಗಾರರ ಅಧ್ಯಯನ ಒಂದು ಪ್ರಭಾವೀ ಗುಂಪಿನಲ್ಲಿ ಬೆಳೆಯಿತು. ಸಮನ್ವಯ ಸಾಧಿಸಿದ ವ್ಯಕ್ತಿತ್ವದ ಅಭಿವ್ಯಕ್ತಿಯಾಗದೆ, ಸಾಹಿತ್ಯ ಆತ್ಮವಿಶ್ಲೇಷಣೆಯ ಸಾಧನವಾಯಿತು. ಇದರಿಂದ, ಭಾಷೆಯನ್ನೇ ಒಡೆದು ಅಧ್ಯಯನ ಮಾಡುವುದು, ಭಾಷೆ ಸಾಧಿಸುವ ಸಂಪರ್ಕದ ರೀತಿಯನ್ನೇ ಪ್ರಶ್ನಿಸುವುದು, ಪ್ರಯೋಗ ನಡೆಸುವುದು ಅನಿವಾರ್ಯವಾಯಿತು

ಕನ್ನಡ ಗದ್ಯದ ಕಾಲ್ಪನಿಕ ಸಾಹಿತ್ಯದಲ್ಲಿ ಮೊದಲ ಬಾರಿಗೆ ಜೀವನ ಗೊಂದಲದ ಪ್ರಶ್ನೆಯಾಗುವುದನ್ನು ನವ್ಯ ಸಾಹಿತ್ಯದಲ್ಲಿ ಕಾಣುತ್ತೇವೆ. ಹಿಂದಿನವರ ಮೌಲ್ಯಗಳು ಈ ಸಾಹಿತ್ಯದ ಮೌಲ್ಯಗಳಲ್ಲ, ಜೀವನವೇ ಗೊಂದಲವಾಗಿ ಎಲ್ಲಾ ಪ್ರಶ್ನೆಗೆ ವಸ್ತುವಾಗುವುದರಿಂದ ಇಲ್ಲಿ ನೇರವಾದ ಅಥವಾ ಅಪ್ರತ್ಯಕ್ಷವಾದ ನೈತಿಕ ಮೌಲ್ಯಗಳ ಆಧಾರವಿಲ್ಲ. (ನೈತಿಕ ಮೌಲ್ಯಗಳೆಂದ ಮಾತ್ರಕ್ಕೆ ಮಂಡಿವಂತಿಕೆಯಲ್ಲ. ಶ್ರೀನಿವಾಸರು, ನವರತ್ನ ರಾಮರಾಯವರು, ದೇವುಡು ಇವರ ಬರಹಗಳಲ್ಲಿ ಕ್ರಾಂತಿಕಾರಕ ವಿಚಾರ ರೀತಿ ಅಡಗಿದೆ. ಆದರೆ ಈ ವಿಚಾರರೀತಿ ಆಡಂಬರವಾಗಲಿ, ಅಬ್ಬರವಾಗಲಿ ಇಲ್ಲ) ನೀತಿ ಎಂದರೇನು ಎಂಬುದೇ ಗಂಭೀರ ಪ್ರಶ್ನೆಯಾದಾಗ ನೈತಿಕ ಮೌಲ್ಯಗಳ ನೆಲೆಗಟ್ಟು ಇರುವುದು ಸಾಧ್ಯವೂ ಇಲ್ಲ. ವ್ಯಕ್ತಿತ್ವ, ಅಭಿವ್ಯಕ್ತಿ ಎಲ್ಲ ಸಮಸ್ಯೆಗಳಾದಾಗ ಸಹಜವಾಗಿ ಬಳಸುವ ಪ್ರತಿಪದವೂ ಮುಖ್ಯವಾಗುತ್ತದೆ. ಈ ಪಂಥದ ಬರಹಗಾರರಿಗೆ ಭಾಷೆಯ ಬಳಕೆ ಒಂದು ಹೊಣೆ, ಗುರುತರವಾದ ಹೊಣೆ. ಬರಹಗಾರ ಸಂಪೂರ್ಣವಾದ ಮತ್ತು ತಾನು ಕಲ್ಪನೆಯಲ್ಲಿ ಅರಗಿಸಿಕೊಂಡ ಅನುಭವವನ್ನು ಓದುಗರೊಡನೆ ಹಂಚಿಕೊಳ್ಳುತ್ತಿಲ್ಲ ಇಲ್ಲಿ; ಪರಿಸರದೊಡನೆ ತನ್ನ ಸಂಪರ್ಕವನ್ನು ಬಿಡಿಸಿ, ಕೆದಕಿ, ವಿಶ್ಲೇಷಿಸಿ ನೋಡುತ್ತಿದ್ದಾನೆ; ಜೀವನದ ಅನುಭವಗಳೊಡನೆ ಸೆಣಸಾಡುತ್ತಿದ್ದಾನೆ. ಅನುಭವವನ್ನು ಪದರ ಪದರ ಬಿಡಿಸಿ ನೋಡುವ ಪ್ರಯತ್ನದಲ್ಲಿ ಭಾಷೆ ಒಂದು ಸಾಧನ. ಹೀಗಾಗಿ ಕೃತಿ ಒಂದು ಸಾವಯವ ಸೃಷ್ಟಿ.

ದೇವುಡು ಅವರ 'ಅಂತರಂಗ', ಅನಂತಮೂರ್ತಿ ಅವರ 'ಸಂಸ್ಕಾರ' ಇವುಗಳ ಹೋಲಿಕೆ, ಮೂರು ಪೀಳಿಗೆಗಳವರು ಪೌರಾಣಿಕ ಸಂಪತ್ತನ್ನು ಬಳಸಿಕೊಂಡಿರುವ ರೀತಿಯ ಅಧ್ಯಯನ–ಇವು ಕಾಲ್ಪನಿಕ ಸಾಹಿತ್ಯ ನಡೆದುಬಂದ ರೀತಿಯನ್ನು ಸ್ಪಷ್ಟಗೊಳಿಸಬಲ್ಲವು. 'ಅಂತರಂಗ' 'ಸಂಸ್ಕಾರ; – ಎರಡರ ಕೇಂದ್ರ ಸನ್ನಿವೇಶಗಳಲ್ಲಿ ಸಾದೃಶ್ಯವಿದೆ. ಎರಡರಲ್ಲಿಯೂ, ಕೇಂದ್ರ ವ್ಯಕ್ತಿ ಹಿಂದಿನ ಸಂಪ್ರದಾಯದ ಪರಿಸರದಲ್ಲಿ ನಿಷ್ಠನಾಗಿ ಬಾಳಿದವನು; ಎರಡರಲ್ಲಿಯೂ ಹೆಣ್ಣಿನ ಆಕರ್ಷಣೆ ಅವನು ನಿರೀಕ್ಷಿಸದಿದ್ದ ಮಾರ್ಗಕ್ಕೆ ಕೊಂಡೊಯ್ಯುತ್ತದೆ. ಆದರೆ, ಅಂತರಂಗದ ನಾಯಕ ತಾನು ಒಪ್ಪಿದ್ದ ಮಾರ್ಗವನ್ನೇ ಪ್ರಶ್ನಿಸುವ ಘಟ್ಟಕ್ಕೆ ಹೋಗುವುದಿಲ್ಲ. ಅವನಲ್ಲಿ ಬೌದ್ಧಿಕತೆ ಇಲ್ಲವೆಂದಲ್ಲ. ಆದರೆ, ಅವನ ವ್ಯಕ್ತಿತ್ವ ಈ ಸವಾಲಿನಿಂದ 'ಸಂಸ್ಕಾರ'ದ ನಾಯಕನ ವ್ಯಕ್ತಿತ್ವದಲ್ಲಿ ಛಿದ್ರವಾಗುವುದಿಲ್ಲ. ದೇವುಡು ಅವರ ಕೃತಿಯಲ್ಲಿ ಅನಗತ್ಯ ವಿಡಂಬನೆಯ ಛಾಯೆ ಸುಳಿಯದಿರುವುದೂ ಕೃತಿಯ ಹಿಂದಿರುವ ಸಮನ್ವಯ ಸಾಧಿಸಿರುವ ವ್ಯಕ್ತಿತ್ವಕ್ಕೆ ಸಾಕ್ಷಿ. 'ಅಂತರಂಗ'ದ ಭಟ್ಟ ತಾನು ನಂಬಿದ್ದ ಸಂಪ್ರದಾಯದ ಸತ್ತ್ವವನ್ನು ಅರಗಿಸಿಕೊಂಡಿದ್ದನೇ? ಎಂಬ ಸಂಶಯ ನಮಗೆ ಬರುವುದಿಲ್ಲ; 'ಸಂಸ್ಕಾರ'ದ ಪ್ರಾಣೇಶಾಚಾರ್ಯನ ವಿಷಯದಲ್ಲಿ ಈ ಸಂಶಯ ಬರುತ್ತದೆ.

ನವ್ಯ ಪಂಥದವರಿಗೆ ಈಚೆಗೆ ಪತ್ರಿಕೆಗಳಲ್ಲಿ, ಸಾಹಿತ್ಯ ಸಮೀಕ್ಷೆಗಳಲ್ಲಿ, ಸಮ್ಮೇಳನಗಳಲ್ಲಿ ದೊರೆತಿರುವ ಪ್ರಾಧಾನ್ಯ ಒಂದು ಅಂಶವನ್ನು ಮರೆಸಿಬಿಡುತ್ತದೆ. ಇಂದು, ನವ್ಯ ಪಂಥರಲ್ಲದವರೂ

ನೂರಾರು ಕಥೆ ಕಾದಂಬರಿಗಳನ್ನು ಬರೆಯುತ್ತಿದ್ದಾರೆ, ಇವರ ಕೃತಿಗಳನ್ನು ಓದುವವರ ಸಂಖ್ಯೆ ಗಣನೀಯ ಎಂಬುದು. ನವೋದಯದ ನಂತರ ಮೊಟ್ಟಮೊದಲ ಬಾರಿಗೆ ಕೆಲವು ಪರಿಣಾಮಗಳಾಗಿವೆ. ಮೊದಲನೆಯದು: ಬರಹಗಾರ ತನ್ನ ಓದುಗರೊಂದಿಗೆ ಸಂಪರ್ಕ ಸಾಧಿಸುವುದರಲ್ಲಿ ಮತ್ತೆ ಮತ್ತೆ ಸೋಲುತ್ತಿದ್ದಾನೆ. ಇದಕ್ಕೆ ಬರಹಗಾರನ ಇಂದಿನ ಪ್ರಯತ್ನದ ವಿಶಿಷ್ಟ ಲಕ್ಷಣವೂ ಕಾರಣ. ತನ್ನ ಒಳಜಗತ್ತಿನ ಅನ್ವೇಷಣೆ, ತನ್ನ ವ್ಯಕ್ತಿತ್ವದ ವಿಶ್ಲೇಷಣೆ – ಇವನ್ನು ಪ್ರಯತ್ನಿಸುವ ಬರಹಗಾರನಿಗೆ ಸಹಜವಾಗಿ ಇತರರೊಂದಿಗೆ ತನ್ನ ಅನುಭವವನ್ನು ಹಂಚಿಕೊಳ್ಳುವುದು ಕಷ್ಟವಾಗುತ್ತದೆ. ಭಾಷೆ ಈವರಗೆ ಸಾಧಿಸದಿದ್ದುದನ್ನು ಅದರ ಮೂಲಕ ಸಾಧಿಸಲು ಆತ ಪ್ರಯತ್ನಿಸುತ್ತಿದ್ದಾನೆ. ಅಲ್ಲದೆ, ಬರಹಗಾರ–ಓದುಗರಿಗೆ ಸಮಾನವಾದ ಮೌಲ್ಯಗಳ ನೆಲೆಗಟ್ಟೊಂದು ಹಿಂದೆ ಇತ್ತು. ನೈತಿಕ ತೀರ್ಪನ್ನೇ ಬಿಟ್ಟುಕೊಟ್ಟ ಬರಹಗಾರನಿಗೆ ಈ ಅನುಕೂಲವಿಲ್ಲ. ಎರಡನೆಯದಾಗಿ, ಮೊಟ್ಟಮೊದಲ ಬಾರಿಗೆ ಓದುಗರ ವರ್ಗ ಎರಡು ಗುಂಪಾಗಿದೆ. ನವ್ಯ ಸಾಹಿತ್ಯ ಅರ್ಥವಾಗುವುದಿಲ್ಲವೆಂದು, ಸಾಂಪ್ರದಾಯಿಕ ಎನ್ನಬಹುದಾದ ವರ್ಗದ ಕೃತಿಗಳನ್ನು ಬಹುಮಂದಿ ಓದುತ್ತಾರೆ. ಪ್ರಗತಿಶೀಲರ ಕೃತಿಗಳು (ಈ ವರ್ಗಕ್ಕೆ ಈಗ ಸೇರುವುದು ಚರಿತ್ರೆಯ ವ್ಯಂಗ್ಯ.) ನವ್ಯ ಸಾಹಿತ್ಯ ಬರೆಯುವವರು–ಓದುವವರಷ್ಟು ಗಮನ ಸೆಳೆಯುವ ಚಟುವಟಿಕೆ ಇವರಲ್ಲಿ ಒಲ್ಲದಿರಬಹುದು. ಆದರೆ, ಸಾವಿರಾರು ಮಂದಿ ಶ್ರದ್ಧಾವಂತ ಓದುಗರು ಈ ಗುಂಪಿಗೆ ಸರಿದವರೆಂಬುದು ಸತ್ಯದ ಸಂಗತಿ. 'ಶ್ರೀನಿವಾಸ'ರ ಕಥೆಗಳನ್ನು ರಾಜಾಜಿ ಮೆಚ್ಚಿ ಭಾಷಾಂತರ ಮಾಡಿದರು. ತೀರಾ ಸಂಕುಚಿತ ವೃತ್ತದಲ್ಲಿ 'ಸಾಂಪ್ರದಾಯಿಕ' ಜೀವನ ಸಾಗಿಸುತಿದ್ದ ಗೃಹಿಣಿಯರೂ ಓದಿದರು. ನಮ್ಮ ನಿಯತಕಾಲಿಕಗಳಲ್ಲಿ ಬರುವ ಕಥೆ–ಕಾದಂಬರಿಗಳು ಬಹು ಪ್ರಮಾಣ ಈ ಬಗೆಯವು. ಸಾಹಿತ್ಯವನ್ನು 'ಸುಲಿದ ಬಾಳೆಯ ಹಣ್ಣು' ಎಂದು ಭಾವಿಸಬಾರದು. ಅದೊಂದು ಹೊಣೆಗಾರಿಕೆಯ ಚಟುವಟಿಕೆಯಾಗಬೇಕು, ಸಾಹಿತ್ಯಕ್ಕೊಂದು ಬೆಲೆ ಉಂಟು ಎನ್ನುವುದಾದದರೆ ಆ ಬೆಲೆಗೆ ತಕ್ಕ ಪ್ರಾಮಾಣಿಕ ಶ್ರಮವನ್ನು ಓದುಗ ನೀಡಲು ಸಿದ್ಧವಾಗಿರಬೇಕು ಎಂದು ಸಾಹಿತಿ ವಾದಿಸಬಹುದು. ಆದರೆ, ಸಾಹಿತಿ ತನ್ನ ಕ್ಷೇತ್ರಕ್ಕೂ ಉತ್ಪ್ರೇಕ್ಷಿತ ಪ್ರಾಧಾನ್ಯವನ್ನು ಕಲ್ಪಿಸಹೊರಡಬಾರದು. ಪ್ರೇಮಿಗೆ ಜಗತ್ತಿನ ಎಲ್ಲ ಪ್ರೇಮ ಗೀತೆಗಳಿಗಿಂತ ನಲ್ಲೆಯ ಒಂದು ಮುತ್ತು ಮುಖ್ಯ. ಬಾಳಿನ ಬಗೆಗೆ ಓದುವುದಕ್ಕಿಂತ ಬಾಳುವುದು ಮುಖ್ಯ – ಅಲ್ಲದೆ ಹೆಚ್ಚು ಆಸಕ್ತಿಯನ್ನುಂಟುಮಾಡಬಲ್ಲುದು. ತನ್ನ ಓದುಗರಿಂದ ಉತ್ಪ್ರೇಕ್ಷಿತ ನಿರೀಕ್ಷಣೆ ಇಟ್ಟುಕೊಂಡ ಬರಹಗಾರರ ಓದುಗರ ವೃತ್ತವನ್ನೇ ಸಂಕುಚಿತ ಮಾಡಿಕೊಳ್ಳುತ್ತಾನೆ. (ಆದರೂ ಚಿಂತೆಯಿಲ್ಲ–ಎಂಬ ಪ್ರಾಮಾಣಿತೆಯೂ ಮನ್ನಣೆಗೆ ಅರ್ಹವೇ) ನವ್ಯ ಪಂಥಕ್ಕೆ ಸೇರದಿರುವವರಲ್ಲಿಯೂ ಪ್ರಥಮ ಪಂಕ್ತಿಯ ಕಾದಂಬರಿಕಾರ–ಕಥೆಗಾರರಿದ್ದಾರೆ. ಶ್ರೀನಿವಾಸ, ಕೆ.ವಿ.ಅಯ್ಯರ್, ಶ್ರೀರಂಗ, ರಾವ್‌ಬಹದ್ದೂರ್, ವ್ಯಾಸರಾಯ ಬಲ್ಲಾಳ, ಎಸ್.ಎಲ್.ಭೈರಪ್ಪ, ತ.ರಾ.ಸು., ಅ.ನ.ಕೃ., ಬಸವರಾಜ ಕಟ್ಟೀಮನಿ, ನಿರಂಜನ, ಚದುರಂಗ – ಇನ್ನೂ ಹಲವು ಹೆಸರುಗಳು ಶ್ರದ್ಧಾವಂತ ಓದುಗರಿಗೆ ಪರಿಚಿತವಾದವು. ತ್ರಿವೇಣಿಯವರು ತೀರಿಕೊಂಡು ಹಲವು ವರ್ಷಗಳಾದರೂ ಅವರ ಜನಪ್ರಿಯತೆ ಮಾಸಿಲ್ಲ. ಹೀಗೆ ಇಂದು, ಸಾಹಿತ್ಯದಲ್ಲಿ ಪ್ರಾಮಾಣಿಕವಾದ ಆಸಕ್ತಿ ಅರಿವು ಓದುಗರಲ್ಲಿಯೇ ಎರಡು ವೃತ್ತಗಳಾಗಿವೆ. ಅಲ್ಲದೆ ನವ್ಯ, ಆಗಲೇ ಒಂದು 'ಫ್ಯಾನ್' ಆಗಲು ಪ್ರಾರಂಭವಾಗಿದೆ. ಈ ಪಂಥದ ಮೊದಲಿನ ಬರಹಗಾರರಿಗೆ ಆಂತರ್ಯದ ಅನಿವಾರ್ಯತೆಯಾಗಿತ್ತು ನವ್ಯ ರೀತಿ; ಈಗ ಅದೊಂದು ಸುಲಭ ಮಾರ್ಗವಾಗಲು ಪ್ರಾರಂಭವಾಗಿದೆ. ಅಡಿಗರ ಪ್ರಖರ ಪ್ರಾಮಾಣಿಕತೆ–ಫಿಯರ್ಸ್, ಹಾನಿಸ್ಟಿ ಬಹುಮಂದಿ ನವ್ಯರಲ್ಲಿ ಇಲ್ಲ. ಮತ್ತೊಂದು ಗಣನೀಯ ಅಂಶವೆಂದರೆ, ಸಾಹಿತ್ಯದ ಬೆಲೆ ಕಟ್ಟುವುದರಲ್ಲಿ ಗೊಂದಲ. ಸಾಹಿತ್ಯ ಅರ್ಥಪೂರ್ಣ ಅನುಭವದ ಅಭಿವ್ಯಕ್ತಿ ಎನ್ನುವುದಾದರೆ, ಯಾವುದು ಅರ್ಥಪೂರ್ಣ? ಒಂದು ಕಥೆ. ಸಾಹಿತ್ಯ ಎನ್ನಿಸಿಕೊಳ್ಳುವಾಗ ಅನುಭವವೇ ಒಂದು ಬಗೆಯದಾಗಿರಬೇಕು ಎನ್ನೋಣವೆ, ಅಭಿವ್ಯಕ್ತಿ ಮುಖ್ಯ ಎನ್ನೋಣವೆ? ಮದುವೆ, ಸಾವು ಇಂತಹ ಘಟನೆಗಳಿಗೆ ಸಹಜವಾಗಿ ಒಂದು ಪ್ರಾಧಾನ್ಯ. ಪ್ರಾಧಾನ್ಯ ಘಟನೆಯಲ್ಲಿಲ್ಲ, ಅಭಿವ್ಯಕ್ತಿಯಲ್ಲಿ ಎನ್ನುವುದಾದರೆ, ಇದರಲ್ಲಿ ಯಶಸ್ಸು–ಸೋಲುಗಳನ್ನು ಗುರುತಿಸುವುದು ಹೇಗೆ? ಜೀವನದ ಎಷ್ಟು ಭಾಗವನ್ನು ಕಥೆ–ಕಾದಂಬರಿ ಅರಗಿಸಿಕೊಂಡಿದೆ ಎಂಬುದೊಂದು ದೃಷ್ಟಿ. ಶ್ರೀನಿವಾಸರ 'ಮಸುಮತ್ತಿ', 'ಸುಬ್ಬಣ್ಣ'ದಿಂದ ಖಾಸನೀಸರ 'ತಬ್ಬಲಿಗಳು', ಲಂಕೇಶರ 'ವಾಮನ'ನವರೆಗೆ ಸಣ್ಣ ಕಥೆ ಕೂಡ ಜೀವನದ ವಿಶಾಲ ಕ್ಷೇತ್ರಗಳಲ್ಲಿ ತನ್ನ ವಾಮನ ಪಾದಗಳಲ್ಲಿ ದಾಟಬಲ್ಲುದು ಎಂಬುದನ್ನು ತೋರಿಸುವ ಎಷ್ಟೋ ಕೃತಿಗಳುಂಟು. ಆದರೆ 'ನವ್ಯಪಂಥ'ದಲ್ಲಿಯೆ ಆಗಲಿ ರಚಿತವಾದ ಪ್ರತಿ ಕೃತಿಯೂ ಯಶಸ್ಸಿನ ಮೇರು ಶಿಖರವನ್ನೆ ಮೆಟ್ಟುತ್ತದೆ ಎನ್ನುವಂತಿಲ್ಲ. ಕೆಲವು ಹೊರಲಕ್ಷಣಗಳು ಮತ್ತು ಯುಕ್ತಿಗಳ (ಡಿವೈಸ್) ಬಳಕೆಯಿಂದಲೆ ಕೃತಿ ಸಾರ್ಥಕವಾಗುವುದಿಲ್ಲ. ಇದನ್ನು ನವ್ಯ ಪಂಥದ ಹಲವು ಉತ್ಸಾಹಿಗಳು ಗಣನೆಗೆ ತಂದುಕೊಳ್ಳುವಂತೆ ತೋರುವುದಿಲ್ಲ. ಅವರ ಕೃತಿಗಳಲ್ಲಿ ಬರಿಯ ಲಕ್ಷಣಗಳು, ಯುಕ್ತಿಗಳೇ ವಿಕೃತವಾಗಿ ಮೆರಯುತ್ತವೆ. ಒಟ್ಟಿನಲ್ಲಿ ಈ ಪಂಥದ ಕೃತಿಗಳು ಲೈಂಗಿಕ ಪ್ರವೃತ್ತಿಯ ವಿಶ್ಲೇಷಣೆಗೆ ಪ್ರಾಮುಖ್ಯತೆ ಕೊಟ್ಟಿರುವುದು ಕಾದಂಬರಿಯ ದೃಷ್ಟಿಯಿಂದಲೇ ಸಮರ್ಥನೀಯವೆ ಎಂದು ಪ್ರಶ್ನಿಸಬೇಕಾಗಿದೆ. ವ್ಯಕ್ತಿತ್ವದಲ್ಲಿ ಭೂಕಂಪವನ್ನುಂಟುಮಾಡಬಲ್ಲ ದೈತ್ಯಶಕ್ತಿ ಲೈಂಗಿಕ ಪ್ರವೃತ್ತಿ ಎಂಬುದನ್ನು ಒಪ್ಪಿದರೂ, ಮನೋವಿಜ್ಞಾನಿಗಳೇ ಅಹಮಿಕೆ ಯಂತಹ ಪ್ರವೃತ್ತಿಯ ಪ್ರಾಧಾನ್ಯವನ್ನೂ ಸಾರುತ್ತಿದ್ದಾರೆ. ಜನಪ್ರಿಯವೂ ಶಕ್ತಿಯುತವೂ ಆದ ಸಾಹಿತ್ಯ ಪ್ರಕಾರ ತನ್ನ ಕ್ಷೇತ್ರವನ್ನು ಆದಷ್ಟು ವಿಶಾಲವಾಗಿ ಉಳಿಸಿಕೊಳ್ಳಬೇಕು. ಪಾತ್ರಗಳು, ಅನುಭವಗಳು ಉದಹಾರಣೆಗಳೋ ವೈಯುಕ್ತಿಕ ಸ್ವತ್ತೋ ಆಗದೆ ಸಾಂಕೇತಿಕವಾಗಬೇಕು. 'ಮುಕ್ತಿ' (ಶಾಂತಿನಾಥ ದೇಸಾಯಿ), 'ಬಿರುಕು' (ಲಂಕೇಶ) ಇಂತಹ ಸತ್ವಯುತ ಕಾದಂಬರಿಗಳನ್ನು ಓದಿ ನವ್ಯ ಪಂಥದಲ್ಲಿ ಭರವಸೆ ಇಟ್ಟುಕೊಂಡವರೂ ಅದರ ಯುಕ್ತಿಗಳೇ ಪ್ರಧಾನವಾಗಿ, ಕಬ್ಬಿಣದ ಕಡಲೆ ಎನ್ನವುದೇ ಹೆಗ್ಗಳಿಕೆಯಾಗಿ ಉಳಿಯಬಾರದು ಎಂದು ಆಶಿಸುತ್ತಾರೆ. ಈ ಪಂಥದ ಎಷ್ಟು ಕಥೆಗಳಲ್ಲಿ ನಾಯಕ ಕಾಲೇಜಿನ ಅಧ್ಯಾಪಕ (ಅದರಲ್ಲಿಯೂ ಇಂಗ್ಲಿಷ್ ಅಧ್ಯಾಪಕ) ಎಷ್ಟು ಘಟನೆಗಳ ಸ್ಥಳ ಸಾಹಿತ್ಯದ ತರಗತಿ ಎಂಬುದನ್ನು ಗಮನಸಿದೆ; ಬೆಕ್ಕು–ಹಾವುಗಳೂ ಎಷ್ಟು ಕಥೆಗಳಲ್ಲಿ ಸುಳಿಯುತ್ತವೆ ಎಂಬುದನ್ನು ನೆನೆದಾಗ (ಸರ್ಪದರ್ಶನ ನವ್ಯ ಕಥೆಯಲ್ಲಿ ಅನಿವಾರ್ಯ ಎನ್ನುವಂತಾಗಿದೆ!)–ಮೇಲೆ ಹೇಳಿದ ಮಾತಿನ ಸತ್ಯ ಅರಿವಾಗುತ್ತದೆ. ಅಲ್ಲದೆ ಇದೆ, 'ಸೊಫೆಸ್ಟಿಕೇಟೆಡ್' ಗುಂಪು ಒಂದರ ಸ್ವತ್ತು ಎನ್ನುವಂತಾಗುತ್ತದೆ. ಜನ ಸಾಮಾನ್ಯಕ್ಕೂ ವಿದ್ಯಾವಂತ ವರ್ಗಕ್ಕೂ ನಡುವೆ ಅಂತರ ಹೆಚ್ಚಾಗುತ್ತಿದೆ ಎಂದು ಗಾಂಧೀಜಿ

ವಿಷಾದಪಟ್ಟಿದ್ದರು. ಹಲವು ನವ್ಯ ಕೃತಿಗಳನ್ನು ಓದಿದಾಗ ಈ ಅಂತರ ದಾಟಲಾರದೆ ಅಭ್ಯಂತರವಾಗುತ್ತಿದೆ ಎನ್ನಿಸುತ್ತಿದೆ. ಇವುಗಳಲ್ಲಿ ಕಂಡುಬರುವ 'ಅನಾಥಪ್ರಜ್ಞೆ'ಯ ಅರಿವು, 'ಶೂನ್ಯ'ದ ನೋವು, ಎರಡು ಜಗತ್ತುಗಳ ನಡುವೆ ಇರುವ ಭಾವನೆ ಜನಸಾಮಾನ್ಯರಲ್ಲಿ ಎಷ್ಟು ಪ್ರಮಾಣದವರಿಗೆ ಬಂದಿದೆ, ಅಥವಾ ಕೃತಿಯನ್ನು ಓದಿದ ನಂತರವಾದರೂ ಅದು ನೈಜ ಎಂದು ಮನವರಿಕೆಯಾಗುತ್ತವೆ ಎಂಬದೂ ವಿವಾದದ ಸಂಗತಿ. ಸಾಹಿತ್ಯ ಕೃತಿ ಓದುಗನಿಗೆ ಆಗಲೇ ಬಂದಿರುವ ಅನುಭವ–ಭಾವಗಳಿಗೆ ಸೀಮಿತವಾಗಬೇಕೆಂದು ಲಕ್ಷಣರೇಖೆಯನ್ನೇನೂ ಎಳೆಯಬೇಕಾಗಿಲ್ಲ. ಆದರೆ, ಹೊಚ್ಚ ಹೊಸತೆನಿಸಿದ ಅನುಭವವಾದರೂ ಅದರ ಕಲಾತ್ಮಕ ಸಾಕ್ಷಾತ್ಕಾರವಾಗಬೇಕು; ಓದುಗನ ಕಲ್ಪನೆಗೆ ಅದು ನೈಜ ಎನ್ನಿಸಬೇಕು.

ತಂತ್ರ ಮತ್ತು ಭಾಷೆಯ ಬಳಕೆಯ ದೃಷ್ಟಿಯಿಂದ 'ನವ್ಯ'ರು ಅಗಾಧವಾದ ಕೆಲಸ ಮಾಡಿದ್ದಾರೆ. ಅವರ ಉತ್ತಮ ಕೃತಿಗಳಲ್ಲಿ ತಂತ್ರ, ಅಭಿವ್ಯಕ್ತಿ ಅನಿವಾರ್ಯವಾದವೆಂದು ನಿರ್ಧರಿಸಿದ ಅಂಶವಾಗುತ್ತದೆ. ಅದನ್ನು ಅರಗಿಸಿಕೊಂಡು, ಅದರಿಂದ ದೂರ ನಿಂತು, ತಾದಾತ್ಮ್ಯವನ್ನು ಸಾಧಿಸಿ, ವಿಮರ್ಶಕ ಪ್ರಜ್ಞೆಯನ್ನೂ ಎಚ್ಚರವಿಟ್ಟುಕೊಂಡು ಕೃತಿ ರಚನೆ ಮಾಡುವ ಮಾರ್ಗ ಅವರದು. ಭಾಷೆಯ ಬಳಕೆಯಲ್ಲಿ ತನ್ನತನ, ತೇಜಸ್ಸು ಕಾಣುತ್ತವೆ. ವೀರ್ಯವತ್ತಾದ ಬರಹ ಬೆಳೆದಿದೆ.

ಈ ಲೇಖನದಲ್ಲಿ ಕೃತಿಕಾರರು, ಕೃತಿಗಳ ವಿಮರ್ಶೆಗೆ ಪ್ರಯತ್ನಿಸಿಲ್ಲ. ಯುಗದ ಆವರಣವೇ ಕೃತಿಗಳನ್ನು ಸೃಷ್ಟಿಸುತ್ತದೆ ಎಂಬ ಸಿದ್ಧಾಂತದ ನಿರೂಪಣೆಯೂ ಇಲ್ಲಿಲ್ಲ. ಮೂರು ಪೀಳಿಗೆಗಳ ಬರಹಗಾರರಲ್ಲಿ ಶ್ರೇಷ್ಠರಾದವರು ಹೇಗೆ ವೈಶಿಷ್ಟ್ಯವನ್ನು ಉಳಿಸಿಕೊಂಡರು? ಇವರಲ್ಲಿ ಪ್ರತಿಯೊಬ್ಬರ ಸಾಧನೆ ಏನು? ಎಂಬುದನ್ನು ವಿಮರ್ಶಿಸಲು ದೊಡ್ಡ ಪುಸ್ತಕವನ್ನೇ ಬರೆಯಬೇಕಾದೀತು. ಒಂದು ದೃಷ್ಟಿಯಿಂದ ಕನ್ನಡ ಗದ್ಯದ ಕಾಲ್ಪನಿಕ ಸಾಹಿತ್ಯವನ್ನು ಇಲ್ಲಿ ಸಮೀಕ್ಷಿಸಲು ಪ್ರಯತ್ನಿಸಿದೆ. ★

## ಕನ್ನಡ ಸಾಹಿತ್ಯ ಪರಿಷತ್ತಿಗೆ ಭೇಟಿ ನೀಡಿದ

# ಬ್ರಿಟನ್ ಸಾಹಸಿಗರು



ಬ್ರಿಟನ್ ದೇಶದಿಂದ ಭಾರತಕ್ಕೆ ಬಂದು ಸಾಹಸಯಾನದ ಜೊತೆಗೆ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿರುವ ಮೂವರು ಸಾಹಸಿಗರು, ಕನ್ನಡಿಗರೆಲ್ಲರ ಮಾತೃಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಭೇಟಿ ನೀಡಿದ್ದರು. ಅವರನ್ನು ಸ್ವಾಗತಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು, ಕನ್ನಡ ನಾಡಿನ ಪರಂಪರೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಮಹತ್ವವನ್ನು ವಿವರಿಸಿ ಅವರ ಸಾಹಸಯಾನಕ್ಕೆ ಶುಭವನ್ನು ಹಾರೈಸಿ ಅವರ ಸಾಮಾಜಿಕ ಕಾಳಜಿಯ ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಬ್ರಿಟನ್ ದೇಶದ ನಾಗರೀಕರಾದ ಡಿಕ್ಲಾಕ್ ಕಾಲನ್ ಮ್ಯಾಗಿಲ್ ವೃತ್ತಿಯಲ್ಲಿ ಪೈಲೆಟ್ ಆಗಿದ್ದು, ಅಲೆಕ್ಸ್ ಡೀನ್ ಅವರು ಕೃತಕ ಬುದ್ಧಿಮತ್ತೆಯ ವಿಷಯದಲ್ಲಿ ಪಿಎಚ್.ಡಿ. ಮಾಡುತ್ತಿದ್ದು, ಸ್ಕಾಟ್‌ಲ್ಯಾಂಡ್‌ನ ಅಲೆಕ್ಸಿ ವಿಶರ್ಡ್ ಅವರು ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದಾರೆ. ಈ ಮೂವರೂ ಸ್ನೇಹಿತರು ವಿದ್ಯೆಯಿಂದ ವಂಚಿತರಾದವರಿಗೆ ನೆರವಾಗುವ ಮಹಾತ್ವಾಕಾಂಕ್ಷೆಯನ್ನು ಹೊಂದಿದ್ದರು. ಅದಕ್ಕಾಗಿ ಅವರ ಕಂಡುಕೊಂಡ ದಾರಿ ಭಾರತದಲ್ಲಿನ ಸಾಹಸ ಪ್ರವಾಸ. ಕೇರಳದ ಕೊಚ್ಚಿನ್‌ನಿಂದ ರಾಜಾಸ್ಥಾನದ ಜೈಸಲ್ಮೇರ್‌ವರೆಗೆ ಆಟೋ ರಿಕ್ಷಾದಲ್ಲಿ ಪ್ರವಾಸ ಮಾಡಿ, ಇದರಿಂದ ಸಂಗ್ರಹವಾದ ಹಣವನ್ನು ಅವಕಾಶವಂಚಿತರಿಗೆ ವಿದ್ಯೆ ಒದಗಿಸುವ ಯೋಜನೆಗೆ ಮೀಸಲಿಡಲು ನಿರ್ಧರಿಸಿದರು.

ಈ ಪ್ರವಾಸದ ಭಾಗವಾಗಿ, ಅವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಭೇಟಿ ನೀಡಿತ್ತು. ಅವರನ್ನು ಸ್ವಾಗತಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು, ಕನ್ನಡ–ಕರ್ನಾಟಕ–ಕನ್ನಡದ ಮಹತ್ವದ ಕುರಿತು ಹೇಳಿ, ಕನ್ನಡ ಸಾಹಿತ್ಯ ಪರಿಷತ್ತಿನ ೧೧೯ ವರ್ಷಗಳ ಸುದೀರ್ಘ ಇತಿಹಾಸವನ್ನು ವಿವರಿಸಿದರು. ಕನ್ನಡವನ್ನು ಬ್ರಿಟನ್ನಿನಲ್ಲಿ ಪಸರಿಸುವ ಕುರಿತು ಈ ತಂಡದ ನೆರವನ್ನು ಕೋರಿದರು. ಕನ್ನಡ ಬಾವುಟವನ್ನು ನೀಡಿ, ಈ ತಂಡಕ್ಕೆ ನಾಡೋಜ ಡಾ.ಮಹೇಶ ಜೋಶಿಯವರು ಶುಭ ಕೋರಿದ್ದು ಅರ್ಥಪೂರ್ಣವಾಗಿತ್ತು. ಕನ್ನಡ ಬಾವುಟವನ್ನು ಹೊತ್ತು ಸಾಹಸಗಳ ಆಟೋರಿಕ್ಷಾ ವಾಹನವು ತನ್ನ ಮುಂದಿನ ಪಯಣವನ್ನು ನಡೆಸಿದ್ದು ತಾನು ಚಲಿಸುವ ಸ್ಥಳಗಳಲ್ಲಿ ಸಹಜವಾಗಿಯೇ ಕನ್ನಡದ ಕಹಳೆಯನ್ನು ಮೊಳಗಿಸುತ್ತಾ ಸಾಗಲಿದೆ. ಈ ಸಂದರ್ಭದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ನೇ.ಭ.ರಾಮಲಿಂಗಶೆಟ್ಟಿ, ಡಾ.ಪದ್ಮಿನಿ ನಾಗರಾಜು, ಗೌರವ ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ ಪಾಂಡು, ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಸಿಬ್ಬಂದಿ ವರ್ಗದವರು ಹಾಜರಿದ್ದರು. ★

# ಅನೇಕತೆಯಲ್ಲಿ 'ಏಕತೆ'ಯನ್ನು ಸಾರಿದ
# ಸಂತ ಶ್ರೇಷ್ಠರು ಸಂತ ಶಿಶುನಾಳ ಶರೀಫರು

-ನಾಡೋಜ ಡಾ.ಮಹೇಶ ಜೋಶಿ



ಬದುಕಿನ ಹಿರಿಮೆಯನ್ನು ಅರಿತು, ಸಮಾಜದಲ್ಲಿನ ತಾರತಮ್ಯಗಳ ನಿವಾರಣೆಗೆ ಶ್ರಮಿಸಿ, ಜಾತಿ ಮತಗಳ ಗಡಿದಾಟಿ ಸಂತಶ್ರೇಷ್ಠ ಎನ್ನಿಸಿಕೊಂಡವರು ಸಂತ ಶಿಶುನಾಳ ಶರೀಫರು. ಕಳಸದ ಗುರು ಗೋವಿಂದ ಭಟ್ಟರಿಂದ ಉಪದೇಶವನ್ನು ಪಡೆದುಕೊಂಡು ಎರಡೂ ಧರ್ಮದವರ ವಿರೋಧವನ್ನು ಎದುರಿಸಿ ಜಾತಿ, ಮತಗಳಿಗಿಂತ 'ಮಾನವ ಧರ್ಮವೇ ಶ್ರೇಷ್ಠ' ಎಂದು ಬೋಧಿಸಿದರು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ತಿಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಏರ್ಪಡಿಸಿದ್ದ ಸಂತ ಶಿಶುನಾಳ ಶರೀಫರ ಜನ್ಮದಿನದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. 'ಬೋಧ ಒಂದೇ, ಬ್ರಹ್ಮನಾದ ಒಂದೇ, ಸಾಧನೆ ಮಾಡುವ ಹಾದಿ ಒಂದೇ, ಆದಿ ಪದ ಒಂದೇ – ಶಿಶುನಾಳಧೀಶನ ಭಾಷೆ ಒಂದೇ' ಎಂದು, 'ಅನೇಕತೆಯಲ್ಲಿ ಏಕತೆ'ಯನ್ನು ಸಾರಿದರು. ಸಹೋದರತ್ವವನ್ನು ಎತ್ತಿಹಿಡಿದು ಮತೀಯ ಸೌಹಾರ್ದವನ್ನು ತೋರಿಸಿದ ದಾರ್ಶನಿಕರು. ಕಳಸದ ಗುರುಗೋವಿಂದ ಭಟ್ಟರು ಹಾಗೂ ಶಿಶುನಾಳ ಶರೀಫರು ಹಿಂದೂ ಹಾಗೂ ಇಸ್ಲಾಂ ಧರ್ಮಗಳ ಸಮಾನತೆ, ಸಮನ್ವಯ ಹಾಗೂ ಸಮತೆಯನ್ನು, ಸಮಭಾವ, ಸಮಚಿತ್ತ ಹಾಗೂ ಸಮದೃಷ್ಟಿಯಿಂದ ನೋಡಿದಂಥ 'ಸಮಾನತೆಯ ಹರಿಕಾರರು. ಇವರಿಬ್ಬರದು ಅಪರೂಪದ ಗುರು–ಶಿಷ್ಯ ಜೋಡಿ. ಹೀಗಾಗಿ ಇಬ್ಬರನ್ನೂ ಒಟ್ಟಾಗಿಯೇ ಸ್ಮರಿಸುವ ಪರಂಪರೆ ನಡೆದು ಬಂದಿದೆ ಎಂದು ನಾಡೋಜ ಡಾ.ಮಹೇಶ ಜೋಶಿಯವರು ವಿಶ್ಲೇಷಿಸಿದರು.

ದಿನನಿತ್ಯ ನಡೆಯುವ ಘಟನೆಗಳನ್ನು ಶರೀಫರು ತತ್ವಪದಗಳಲ್ಲಿ ವಿವರಿಸಿ, ಅದಕ್ಕೆ ಆಧ್ಯಾತ್ಮಿಕ ಹಿನ್ನೆಲೆ ನೀಡುತ್ತಿದ್ದರು. 'ಕೋಡಗನ ಕೋಳಿ ನುಂಗಿತ್ತಾ', 'ಬಿದ್ದಿಯಬ್ಬೆ ಮುದುಕಿ', 'ಹಾವು ತುಳಿದೇನೆ', 'ಎಂಥ ಮೋಜಿನ ಕುದುರಿ', 'ಗುಡಿಯ ನೋಡಿರಣ್ಣ', 'ತರವಲ್ಲ ತಗೀ ನಿನ್ನ ತಂಬೂರಿ' 'ಏನ್ ಕೊಡ ಎನ್ ಕೊಡವಾ' 'ಸೋರುತಿಹುದು ಮನೆಯ ಮಾಳಿಗಿ', ಕುಂಬಾರಕೀ ಈಕೆ ಕುಂಬಾರಕಿ', 'ಗುಡು ಗುಡಿಯ ಸೇದಿ ನೋಡೋ' ಮುಂತಾದ ತತ್ವಪದಗಳು ಇಂದಿಗೂ ಜನಸಾಮಾನ್ಯರ ಬಾಯಲ್ಲಿ ನಲಿಯುತ್ತಿವೆ. ಶರೀಫರು ರಚಿಸಿದ ಒಟ್ಟು ೪೧೦ ತತ್ವ ಪದಗಳು ಈವರೆಗೂ ದಾಖಲಾಗಿದ್ದು ಅವುಗಳಲ್ಲಿ ದೇವಸ್ತುತಿ, ಗುರುಸ್ತುತಿ, ದಂಡಕ, ಕಾಲಜ್ಞಾನ, ಲಾವಣಿ, ಅಲಾವಿ ಪದಗಳು ಸೇರಿವೆ. ಜೊತೆಗೆ ಗುಣಾತ್ಮಕ ಹಿನ್ನೆಲೆಯಲ್ಲಿ ಬರೆದ ನೀತಿಯನ್ನು ಒಳಗೊಂಡ ಇನ್ನೂ ಅನೇಕ ರಚನೆಗಳಿವೆ. ಹೀಗೆ ತತ್ವ ಪದ ಹಾಡಿ ತತ್ವ ಬೋಧನೆ ಮಾಡಿದರು. ದಂಡಕಗಳನ್ನು ಹೇಳಿ ದೇವಿ–ದೇವತೆಯರನ್ನು ಸ್ತುತಿಸಿದರು. ಮಂಗಳಾರತಿಯನ್ನು ಹಾಡಿ ಸರ್ವರಿಗೂ ಮಂಗಳವನ್ನು ಬಯಸಿದರು. ಆದ್ದರಿಂದಲೇ ಶರೀಫರು 'ಸರ್ವಜನರ ಸಂತ'ರಾದರು ಎಂದು ಹೇಳಿದ ನಾಡೋಜ ಡಾ.ಮಹೇಶ ಜೋಶಿಯವರು, ಶರೀಫರ ಕುರಿತು ಇಂದು ನಮ್ಮ ದೇಶದಲ್ಲಿ ಮಾತ್ರ ಜಗತ್ತಿನೆಲ್ಲೆಡೆ ಸಂಶೋಧನೆ ಮತ್ತು ವಿಶ್ಲೇಷಣೆಗಳು ನಡೆಯುತ್ತಿರುವುದು ಹೆಮ್ಮೆಯ ಸಂಗತಿ ಎಂದು ನಾಡೋಜ ಡಾ.ಮಹೇಶ ಜೋಶಿ ತಿಳಿಸಿದರು.

ತ್ರಿಕಾಲಜ್ಞಾನಿಯಾಗಿದ್ದ ಗುರುಗೋವಿಂದಭಟ್ಟರು ತಮ್ಮ ಅಂತ್ಯದ ದಿನಗಳು ಸಮೀಪವಾಗುತ್ತಿರುವುದನ್ನು ಅರಿತು ಒಂದು ದಿನ ಶಿಷ್ಯರೆಲ್ಲರನ್ನು ಕರೆದು 'ನನಗಾ ವಾಂತಿ ಬರೋಂಗ ಆಗ್ತಿದೆ. ಅದ್ರ ನಾ ಮಾಡೋ ವಾಂತಿ ಎಲ್ಲೂ ಚೆಲ್ಲಬಾರದು. ಯಾರೂ ತುಳೀಬಾರದು, ಅಂತಹ ಜಾಗ ನೋಡ್ರಪ್ಪಾ' ಎಂದರು. ಸುತ್ತ ನೆರೆದ ಶಿಷ್ಯರೆಲ್ಲ ಗಾಬರಿಯಾದರು. ಅಷ್ಟು ಹೊತ್ತಿಗೆ ಶರೀಫರು ಅಲ್ಲಿಗೆ ಓಡೋಡಿ ಬಂದರು. ತಮ್ಮ ದೇಹವನ್ನು ಯಾರೂ ತುಳಿಯಲು ಸಾಧ್ಯವಿಲ್ಲ ಎಂದರಿತು, ತಮ್ಮ ಬೊಗಸೆಯನ್ನು ಗುರುಗಳ ಮುಂದೆ ಒಡ್ಡಿದರು, ಗುರುಗಳು ಬೊಗಸೆಯಲ್ಲಿ ಮಾಡಿದ ವಾಂತಿಯನ್ನೇ 'ಉತ್ಕೃಷ್ಟ ಪ್ರಸಾದ' ಎಂದು ಶರೀಫರು ಕುಡಿದು ಬಿಟ್ಟರು. ಈ ಮೂಲಕ ಗುರು ಗೋವಿಂದ ಭಟ್ಟರು

ತಮ್ಮೊಳಗಿನ ಆಧ್ಯಾತ್ಮ ಹಾಗೂ ಜ್ಞಾನಶಕ್ತಿಯನ್ನು ಶರೀಫರಿಗೆ ಧಾರೆಯೆರೆದರು. ಇದರ ಫಲವಾಗಿ ಶರೀಫರಲ್ಲೂ ಜ್ಞಾನ ಹಾಗೂ ಜಾಗೃತಶಕ್ತಿ ಮೂಡಿತು. ತಮ್ಮ ಗುರುಗಳು ದೇಹಾಂತ್ಯವಾದ ವರ್ಷ ೧೮೭೦ರ ನಂತರ ೧೯ ವರ್ಷಗಳ ಕಾಲ ಸಾಧನೆಗಳನ್ನು ಮಾಡಿ ಇನ್ನಷ್ಟು ಮಹಾಮಹಿಮರಾದರು ಎಂದು ಅವರ ಜೀವನದ ಘಟನೆಯನ್ನು ನೆನಪು ಮಾಡಿಕೊಂಡ ನಾಡೋಜ ಡಾ.ಮಹೇಶ ಜೋಶಿಯವರು ಶರೀಫರು ಕನ್ನಡದ ಮೊದಲ ಮುಸ್ಲಿಂ ಕವಿ ಎನ್ನುವುದಕ್ಕಿಂತ, ಜಾತಿಧರ್ಮವನ್ನು ಮೀರಿದ ದಾರ್ಶನಿಕ ಎನ್ನುವುದು ಸೂಕ್ತ ಎಂದು ವಿವರಿಸಿದರು.

ಗುರುಗಳಿಂದ ಕಾಲಜ್ಞಾನ ತಿಳಿದ ಶರೀಫರು ಮುಂದೆ ಒದಗಲಿರುವ ಅಪತ್ತುಗಳನ್ನು ಮೊದಲೇ ಗ್ರಹಿಸಿ, ಎಲ್ಲರನ್ನೂ ಎಚ್ಚರಿಸಿದರು. ಮುಂದೆ ಗುರುಗಳಾದ ಗೋವಿಂದಭಟ್ಟರಂತೆ ಶರೀಫರು ಕೊಡ ತಮ್ಮ ಅಂತ್ಯಕಾಲ ಸಮೀಪವಾಗುತ್ತಿರುವುದನ್ನು ಜ್ಞಾನಶಕ್ತಿಯಿಂದ ತಿಳಿದು. 'ಬಿಡತೀನಿ ದೇಹ ಬಿಡತೇನಿ, ಕೊಡತೀನಿ ಭೂಮಿಗೆ, ಇಡತೀನಿ ಮಹಿಮರ ನಡತೀ ಹಿಡಿದು, ಜೀವನ ಬಾಧೆಗೆದ್ದು ಶಿವಲೋಕದೊಳಗೆ ನಾ' ಎಂದು ನುಡಿದು ದೇಹತ್ಯಾಗ ಮಾಡಿ ಅಖಂಡದಲ್ಲಿ ನಿಂತರು. ಶಿಶುನಾಳದ ಶರೀಫರ ಗದ್ದುಗೆ ಇಂದಿಗೂ ಕೋಮು ಸೌಹಾರ್ದತೆ, ಹಿಂದೂ–ಮುಸ್ಲಿಂ ಭಾವೈಕ್ಯತೆ, ಭ್ರಾತೃತ್ವದ ಬಂಧುರತೆಗೆ ಸಾಕ್ಷಿಯಾಗಿದ್ದು, ಶರೀಫ–ಗೋವಿಂದ ಭಟ್ಟರ ಜೋಡಿ ಜಾತಿಮತಗಳ ಗಡಿ ದಾಟಿ ಸಾಧಿಸಿದ ಮಾನವತೆಯ ಎತ್ತರಕ್ಕೆ ನಿದರ್ಶನವಾಗಿದೆ. ಇಂದಿನ ಕಾಲಘಟ್ಟದಲ್ಲಿಯೂ ಈ ಅಚ್ಚರಿಯನ್ನು ನಾವು ನೋಡಬಹುದು. ಒಂದೆಡೆ 'ಅಲ್ಲಾಹೋ ಅಕ್ಬರ್' ಘೋಷಣೆ ಕೇಳಿ ಬಂದರೆ ಇನ್ನೊಂದೆಡೆ 'ಹರ ಹರ ಮಹಾದೇವ್' ಎಂಬ ಉದ್ಗಾರವನ್ನು ಕೇಳಬಹುದು. ಹಿಂದೂಗಳು ಹಣ್ಣು–ಕಾಯಿ ಅರ್ಪಿಸಿದರೆ, ಮುಸ್ಲೀಮರು ಸಕ್ಕರೆ ಅರ್ಪಿಸಿ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಪ್ರತಿಯೊಬ್ಬ ಕನ್ನಡಿಗರೂ ಶಿಶುನಾಳಕ್ಕೆ ಭೇಟಿ ನೀಡಿ ಈ ಭಾವೈಕ್ಯತೆಯ ದರ್ಶನವನ್ನು ಪಡೆಯಬಹುದು ಎಂದು ಹೇಳಿದ ನಾಡೋಜ ಡಾ.ಮಹೇಶ ಜೋಶಿ, ಸಂತ ಶಿಶುನಾಳ ಶರೀಫರ ಚಿಂತನೆಗಳು ಇಂದಿಗೆ ಹೆಚ್ಚು ಪ್ರಸ್ತುತವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಸಂತ ಶಿಶುನಾಳ ಶರೀಫ ಮತ್ತು ಗುರು ಗೋವಿಂದಭಟ್ಟರ ಜೋಡಿ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

★


# ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ವಾತಂತ್ರ್ಯ ದಿನಾಚರಣೆ



ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಕಛೇರಿಯಲ್ಲಿ ೭೮ನೆಯ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ರಾಷ್ಟ್ರಧ್ವಜಾರೋಹಣ ಮಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ಮಾತನಾಡಿ, 'ಈ ದೇಶದ ಸ್ವಾತಂತ್ರ್ಯವು ಹಲವರ ತ್ಯಾಗ, ಬಲಿದಾನಗಳಿಂದ ನಮಗೆ ಲಭಿಸಿದೆ. ಪ್ರತಿ ಸ್ವಾತಂತ್ರ್ಯ ದಿನಾಚರಣೆಯಂದು ಅವರ ಕೊಡುಗೆಗಳನ್ನು ನಾವು ಸ್ಮರಿಸಿಕೊಳ್ಳಬೇಕು, ಕನ್ನಡ ಸಾಹಿತ್ಯ ಲೋಕವು ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಸ್ಪಂದಿಸಿದ್ದಿತು. ಪ್ರಮುಖ ಬರಹಗಾರರೆಲ್ಲರೂ ಈ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ವರಕವಿ ಬೇಂದ್ರೆಯವರು 'ನರಬಲಿ' ಎನ್ನುವ ಕವಿತೆಯನ್ನು ಬರೆದಿದ್ದಕ್ಕಾಗಿ ಬ್ರಿಟೀಷರಿಂದ ಸೆರೆವಾಸದ ಶಿಕ್ಷೆಗೆ ಗುರಿಯಾಗಿದ್ದರು. ಕನ್ನಡಿಗರು ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆಗಳನ್ನು ಕುರಿತು, ಡಾ.ಸೂರ್ಯನಾಥ ಕಾಮತರು ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟಗಳಲ್ಲಿ ದಾಖಲಿಸಿದ್ದಾರೆ. ಮುಂಬರುವ ಪೀಳಿಗೆ ಸ್ವಾತಂತ್ರ್ಯದ ಮಹತ್ವವನ್ನು, ಹಿರಿಯರು ಮಾಡಿದ ತ್ಯಾಗ ಬಲಿದಾನಗಳನ್ನು ಅರಿತುಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗಶೆಟ್ಟಿ, ಡಾ.ಪದ್ಮಿನಿ ನಾಗರಾಜು, ಗೌರವ ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ ಪಾಂಡು ಮತ್ತು ಪರಿಷತ್ತಿನ ಸಿಬ್ಬಂದಿ ವರ್ಗದರು ಭಾಗವಹಿಸಿದ್ದರು.

★

# ಕಮಲಾ ಹಂಪನಾ ಅವರ ಅಗಲಿಕೆಯಿಂದ ಕನ್ನಡ ಸಾಹಿತ್ಯದ ಒಂದು ಯುಗ ಮುಕ್ತಾಯವಾಗಿದೆ – ನಾಡೋಜ ಡಾ. ಮಹೇಶ ಜೋಶಿ




**ಕ**ಮಲಾ ಹಂಪನಾ ಅವರ ಅಗಲಿಕೆಯಿಂದ ಕನ್ನಡ ಸಾಹಿತ್ಯದಲ್ಲಿ ಒಂದು ಯುಗದ ಮುಕ್ತಾಯವಾಗಿದೆ ಎಂದರೆ ತಪ್ಪಾಗದು. ಕನ್ನಡ ಸಾಹಿತ್ಯಕ್ಕೆ ಅವರು ನೀಡಿರುವ ಕೊಡುಗೆ ಅಷ್ಟು ಅಮೂಲ್ಯವಾದದ್ದಾಗಿದೆ. ಅವರ ಅಗಲಿಕೆಯಿಂದ ಮನೆಯ ಹಿರಿಯರನ್ನು ಕಳೆದುಕೊಂಡ ತಬ್ಬಲಿ ಭಾವನೆಯ ಅನುಭವವಾಗುತ್ತಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ಹೇಳಿದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿಸಲಾಗಿದ್ದ 'ಕಮಲಾ ಹಂಪನಾ ನುಡಿ ಗೌರವ' ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. ಅವರ ಪತಿ ಡಾ. ಹಂಪನಾಗರಾಜಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗುವ ಮೊದಲಿಂದಲೂ ಕನ್ನಡ ಸಾಹಿತ್ಯ ಪರಿಷತ್ತಿನ ಜೊತೆಗೆ ನಿಕಟ ಸಂಬಂಧವನ್ನು ಇಟ್ಟುಕೊಂಡಿದ್ದ ಡಾ. ಕಮಲಾ ಹಂಪನಾ ೨೦೦೩ರ ಡಿಸೆಂಬರ್ ೧೮, ೧೯, ೨೦ ಮತ್ತು ೨೧ರಂದು ಮೂಡಬಿದರೆಯಲ್ಲಿ ನಡೆದ ೭೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಜಿಲ್ಲಾ ಸಾಹಿತ್ಯ ಸಮ್ಮೇಳನ, ಲೇಖಕಿಯರ ಸಮ್ಮೇಳನ, ಅತ್ತಿಮಬ್ಬೆ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಮುಂತಾದ ಹಲವು ಪ್ರಮುಖ ಸಮ್ಮೇಳನಗಳ ಅಧ್ಯಕ್ಷತೆಯ ಗೌರವ ಅವರಿಗೆ ದೊರಕಿದೆ. ಇದರ ಜೊತೆಗೆ ಹಲವಾರು ದೇಶಗಳಲ್ಲಿ ನಡೆದ ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ ಮೊದಲ ಕನ್ನಡ ಲೇಖಕಿಯಾಗಿದ್ದರು. ೨೦೧೨ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅವರಿಗೆ ತನ್ನ ಪ್ರತಿಷ್ಠಿತ 'ಚಾವುಂಡರಾಯ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತ್ತು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ತಾಯಿ ಭುವನೇಶ್ವರಿ ಪುತ್ಥಳಿಯ ಅನಾವರಣ ಕಾರ್ಯಕ್ರಮದಲ್ಲಿಯೂ ಭಾಗಿಯಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿಗೆ ಹಿರಿಯಕ್ಕನಂತೆ ಸದಾ ಮಾರ್ಗದರ್ಶನ ಮಾಡುತ್ತಿದ್ದರು. ಅವರ ಅಗಲಿಕೆಯಿಂದ ಕನ್ನಡ ಸಾಹಿತ್ಯಕ್ಕೂ ಕತ್ತಲು ಕವಿದಂತಾಗಿದೆ ಎಂದು ನಾಡೋಜ ಡಾ.ಮಹೇಶ ಜೋಶಿ ಕಂಬನಿ ಮಿಡಿದರು.

ಕಮಲಾ ಹಂಪನಾ ಸಾಹಿತ್ಯ ಕ್ಷೇತ್ರದಲ್ಲಿ ಅಚ್ಚಳಿಯದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದರು. ಅವರು ಶೈಕ್ಷಣಿಕ ವಲಯದಲ್ಲಿ ಚಿರಪರಿಚಿತರು. ಕನ್ನಡ ಮಹಿಳಾ ಸಾಹಿತ್ಯ ಜಗತ್ತಿನಲ್ಲಿ ಅಚ್ಚಳಿಯದೆ ಉಳಿಯುವ ಹೆಸರು ಕಮಲಾ ಹಂಪನಾ ಅವರದ್ದು. ತಾವರೆ ಹೂ ಕೆಸರಿನಲ್ಲಿ ಹುಟ್ಟಿ ಆಕಾಶದ ಕಡೆ ಮುಖ ಚಾಚುವಂತೆ, ತಂದೆಯ ಸಾವಿನಿಂದ ಬಡತನ ಅನುಭವಿಸುವಂತಾದರೂ ಸಹ, ಹೋರಾಟದಿಂದ ಅದನ್ನು ಮೆಟ್ಟಿ ನಿಂತು ಸಿದ್ಧಿಯನ್ನು ಪಡೆದರು. ಕಥೆ, ಕಾವ್ಯ, ನಾಟಕ, ಸಂಶೋಧನೆ, ಸಂಪಾದನೆ, ವಿಮರ್ಶೆ ಜೊತೆಗೆ ತಮ್ಮ ಬಹುತೇಕ ಸಮಕಾಲೀನ ಲೇಖಕಿಯರಿಗಿಂತ ಭಿನ್ನವಾಗಿ, ಕೃತಿ ಸಂಪಾದನೆ, ಸಂಶೋಧನಾ ಕ್ಷೇತ್ರಗಳಲ್ಲಿ ಮುನ್ನುಗ್ಗಿ ಹೆಸರನ್ನು ಮಾಡಿರುವುದು ಗಮನಾರ್ಹ ಸಂಗತಿಯಾಗಿದೆ ಎಂದು ನಾಡೋಜ ಡಾ.ಮಹೇಶ ಜೋಶಿ ವಿಶ್ಲೇಷಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ, ಹಿರಿಯ ಬರಹಗಾರ, ಸಂಶೋಧಕ ನಾಡೋಜ ಡಾ.ಹಂಪನಾಗರಾಜಯ್ಯನವರು, ತಮ್ಮ ೭೧ ವರ್ಷಗಳ ಬಾಂಧವ್ಯದ ಕುರಿತು ಹೇಳುತ್ತಾ, ಕಮಲಾ ಹಂಪನಾ ಅವರ ಧೀಶಕ್ತಿ ಬಹಳ ದೊಡ್ಡದು. ಹೋರಾಟದ ಹಾದಿಯಲ್ಲಿ ಅವರು ಸದಾ ಮುಂದಿದ್ದರು ಎಂದು ಅನೇಕ ನೆನಪುಗಳ ಮೂಲಕ ವಿವರಿಸಿದರು. ಹೊಂಬುಜ (ಹುಮಚ) ಕ್ಷೇತ್ರದಲ್ಲಿ ಕಮಲಾ ಹಂಪನಾ ಅವರಿಗೆ ಸನ್ಮಾನ ಮಾಡಿದ ಸಂದರ್ಭದಲ್ಲಿ, ಬರಿಯ ಸನ್ಮಾನ ತೆಗೆದುಕೊಂಡು ಹೋಗದೆ

ಸಮಾಜಕ್ಕೆ ಮರಳಿ ಕೊಡಬೇಕು ಎಂಬ ದೃಢ ನಿರ್ಧಾರ ಮಾಡಿದ ನಂತರ, ಜೈನ ಸಾಹಿತ್ಯದ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮಹತ್ವದ ಹೊಣೆಗಾರಿಕೆ ಬಂದಾಗ ಜವಾಬ್ದಾರಿಯಿಂದ ನಿರ್ವಹಿಸಿದರು. ಸೃಜನಶೀಲತೆ ಮತ್ತು ಸಂಶೋಧನೆ ಎರಡಕ್ಕೂ ಸಮಾನ ಮಹತ್ವ ನೀಡಿದ್ದ ಕಮಲಾ, ಹೊರದೇಶಗಳಲ್ಲಿ ನಮ್ಮ ಸಂಸ್ಕೃತಿಯನ್ನು ಅನುಸರಿಸುವುದರ ಮೂಲಕ, ಭಾರತೀಯ ಸಂಸ್ಕೃತಿಯನ್ನು ಗೌರವ ತಂದು ಕೊಟ್ಟಿದ್ದನ್ನು ಸ್ಮರಿಸಿಕೊಂಡರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆಯವರು ಮಾತನಾಡಿ, 'ಏನಾದರೂ ಆಗು ಮುಗುವಿನ ಮುಗ್ಧತೆಯನ್ನು ಕಳೆದುಕೊಳ್ಳಬೇಡ' ಎಂಬ 'ಗ್ಯಾಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್'ನ ಮಾತಿಗೆ ಕಮಲಾ ಹಂಪನಾ ನಿದರ್ಶನವಾಗಿದ್ದರು. ಈ ಹಿಂದಿನ ಸಂಶೋಧನಾ ಪರಂಪರೆಯನ್ನು ಮುಂದುವರೆಸಬೇಕು ಎನ್ನುವುದು ಅವರ ಆಶಯವಾಗಿತ್ತು. ಸಂಶೋಧನೆಯು ನಿರಂತರತೆ, ಪರಿಶ್ರಮ, ವ್ಯಾಪಕತೆ, ಮೌಲಿಕತೆ ಮತ್ತು ಹೊಸತನವನ್ನು ಒಳಗೊಂಡಿರ ಬೇಕೆಂಬುದು ಕಮಲಾ ಹಂಪನಾ ಅವರ ಚಿಂತನೆಯಾಗಿತ್ತು. ಸಂಶೋಧನೆಗೆ ಎಂದಿಗೂ ಪೂರ್ಣವಿರಾಮ ನೀಡಬಾರದು ಎಂದು ಅವರು ಪ್ರತಿಪಾದಿಸಿದ್ದರು. ಗ್ರಂಥ ಸಂಪಾದನೆ ಮತ್ತು ಉಪೇಕ್ಷಿತ ಬರಹಗಾರರ ಅಧ್ಯಯನದ ಕುರಿತೂ ಕಮಲಾ ವಿಶೇಷ ಮಹತ್ವ ನೀಡಿದ್ದರು. ಈ ಹಾದಿಯಲ್ಲಿ, ನಾವೆಲ್ಲರೂ ಸಾಗುವುದೇ, ನಾವು ಅವರಿಗೆ ಸಲ್ಲಿಸಬಹುದಾದ ಗೌರವವಾಗಿದೆ ಎಂದು ನುಡಿದರು. ಹಿರಿಯ ಬರಹಗಾರ್ತಿ, ಡಾ.ಕೆ.ಆರ್.ಸಂಧ್ಯಾ ರೆಡ್ಡಿ ಮಾತನಾಡಿ ಡಾ.ಕಮಲಾ ಹಂಪನಾ ಅವರ ಆತ್ಮಕತೆ 'ಬೇರು–ಬೆಂಕಿ–ಬಿಳಲು' ಓದಿದರೆ ಅವರ ಪರಿಶ್ರಮದ ಹಾದಿ ಅರ್ಥವಾಗುತ್ತದೆ. ನಿರಂತರ ಅಧ್ಯಯನ ಮತ್ತು ಸ್ನೇಹಶೀಲತೆ ಅವರ ಹಿರಿಮೆ ಎಂದು ಬಣ್ಣಿಸಿದರು. ಸಪ್ನ ಬುಕ್ ಹೌಸ್‌ನ ಆರ್.ದೊಡ್ಡೇಗೌಡರು ತಮ್ಮ ಸಂಸ್ಥೆಯ ಜೊತೆಗೆ ಹಂಪನಾ ದಂಪತಿಗಳಿಗಿದ್ದ ೩೫ ವರ್ಷಗಳ ಸಂಬಂಧವನ್ನು ವರ್ಣಿಸಿ, ಅವರನ್ನು ಜಕ್ಕವಕ್ಕಿಗಳು ಎಂದು ಕರೆದು ಈ ಜೋಡಿಯನ್ನು ನೋಡುವುದೇ ಸಂಭ್ರಮವಾಗಿತ್ತು ಎಂದು ಹೇಳಿ, ಡಾ.ಕಮಲಾ ಹಂಪನಾ ಅವರ ಹದಿನಾಲ್ಕು ಸಂಪುಟಗಳ ಕೃತಿ ಶ್ರೇಣಿಯನ್ನು ಪ್ರಕಟಿಸುವಲ್ಲಿ ತಮಗಾದ ಅನುಭವಗಳನ್ನು ಹಂಚಿಕೊಂಡರು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷರಾದ ಡಾ.ಬಿ.ಎಂ.ಪಟೇಲ್ ಪಾಂಡು ಕಾರ್ಯಕ್ರಮವನ್ನು ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ನೇ.ಭ. ರಾಮಲಿಂಗ ಶೆಟ್ಟಿ ಹಾಗೂ ಡಾ. ಪದ್ಮಿನಿ ನಾಗರಾಜು ಅವರುಗಳು ಉಪಸ್ಥಿತರಿದ್ದರು. ★

## ೭೭ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ

# ಪ್ರೊ. ಜಿ.ವೆಂಕಟಸುಬ್ಬಯ್ಯನವರ ಭಾಷಣದ ಸಂಗ್ರಹ

ಬೆಂಗಳೂರಿಗೆ ಬಂದ ಗ್ರಾಮೀಣ ಪ್ರದೇಶದ ಜನರಿಗೆ ಇವರ ಮಾತನ್ನು ಕೇಳಿ ದಿಗ್ಭ್ರಮೆಯಾಗುತ್ತದೆ. ಬೆಂಗಳೂರಿನಲ್ಲಿ ಕನ್ನಡ ಸಾಯುತ್ತಿದೆ ಎಂದು ಹೇಳುತ್ತಾರೆ. ಹಾಗೆ ಹೇಳುವವರಿಗೆ ಗ್ರಾಮೀಣ ಪ್ರದೇಶದಲ್ಲಿ ಅದು ಬದುಕಿ ಉಳಿಯುತ್ತದೆ ಎಂಬ ನಂಬಿಕೆಯಿದೆ. ಕನ್ನಡದ ರಾಜಧಾನಿಯಲ್ಲಿ ಕನ್ನಡ ಸತ್ತರೆ ಗ್ರಾಮೀಣ ಪ್ರದೇಶದಲ್ಲಿ ಉಳಿಯುತ್ತದೆಯೇ? ಇಂಥ ವಿಪರ್ಯಾಸವನ್ನು ಗಮನಿಸುತ್ತಿರುವ ನನಗೆ ಕೆಲವು ವಿವರಗಳನ್ನು ಇಂಥ ಸಭೆಯ ಮುಂದೆ ಹೇಳಲೇಬೇಕೆಂಬ ಅಪೇಕ್ಷೆಯುಂಟಾಗಿದೆ.

ಈಗಿನ ನಾವು ಬದುಕಿರುವ ಈ ಕಾಲದಲ್ಲಿ ಕನ್ನಡ ಭಾಷೆಯು ತನ್ನ ಮತ್ತೊಂದು ಹೊಸತನವನ್ನು ಪಡೆಯುತ್ತಾ ಇದೆ. ಹಿಂದೆ ಕನ್ನಡದ ಆಡುಮಾತಿಗೆ ಸಂಸ್ಕೃತ ಶಬ್ದಗಳು ಹೇಗೆ ಸೇರಿಕೊಂಡಿತೋ ಹಾಗೆ ಈಗ ಇಂಗ್ಲಿಷಿನಿಂದ ಸಾವಿರಾರು ಶಬ್ದಗಳು ನಾಗರಿಕ ಜೀವನದಲ್ಲಿ ಸೇರಿಕೊಳ್ಳುತ್ತಾ ಇದೆ. ಇದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಹೀಗೆ ನಗರದ ಸಂಕೀರ್ಣ ಜನಸಮುದಾಯದಲ್ಲಿ ಇಂಗ್ಲಿಷಿನ ಮತ್ತಿತರ ಭಾಷೆಗಳ–ಅಧಿಕವಾಗಿ ಹಿಂದಿ ಮತ್ತು ಉರ್ದು ಭಾಷೆಗಳ–ಶಬ್ದಗಳು ಒಗ್ಗಟ್ಟಿನಿಂದ ನುಗ್ಗುತ್ತಿವೆ. ಕಾಲಾನುಕ್ರಮದಲ್ಲಿ, ಈ ಶಬ್ದಗಳಲ್ಲಿ ಅನೇಕ ಶಬ್ದಗಳು ಕನ್ನಡಕ್ಕೆ ಎರವಲುಗಳಾಗಿ ಬಂದು ಸೇರಿಕೊಂಡುಬಿಡುತ್ತವೆ. ಆ ಎಲ್ಲಾ ಕನ್ನಡ ಶಬ್ದಗಳು ಹಾಗೆ ಬಳಕೆಗೆ ಬರಬೇಕಾದರೆ ಒಂದಿಪ್ಪತ್ತು ಮೂವತ್ತು ವರ್ಷಗಳು ಬೇಕಾಗುತ್ತವೆ. ಈಗಾಗಲೇ ಹಿಂದಿನ ಅನೇಕ ವರ್ಷಗಳಲ್ಲಿ ನಮ್ಮವೇ ಆದ ಎಷ್ಟೊಂದು ಇಂಗ್ಲಿಷ್ ಶಬ್ದಗಳಿವೆ ನೋಡಿ. ಕಾರು, ಬುಕ್ಕು, ಪೆನ್ನು, ಇಂಕು, ಪೇಪರು. ಆದರೆ ಈಗ ನುಗ್ಗಲು ಆತುರಪಡುತ್ತಿರುವ ಶಬ್ದಗಳು ಇಂಥ ಶಬ್ದಗಳಲ್ಲ; ಕನ್ನಡದಲ್ಲಿ ಸೊಗಸಾದ ಶಬ್ದಗಳಿರುವಾಗ ಅವುಗಳನ್ನೇ ತಳ್ಳಿ ಕನ್ನಡಕ್ಕೆ ಬರಲು ಪ್ರಯತ್ನಪಡುತ್ತಿರುವ ಶಬ್ದಗಳು. ಉದಾಹರಣೆ: ಚಿಲ್ಲೀಸ್, ರಾಡಿಶ್, ಬೀನ್ಸ್, ಕುಕುಂಬರ್, ಕ್ಯಾಪ್ಸಿಕಮ್ಮು, ನೈಫು, ಆಯಿಲ್ಲು, ಬಟರು, ಪೌಡರು, ಗ್ರೈಂಡು ಇತ್ಯಾದಿ. ಎಲ್ಲಾ ಅಡಿಗೆ ಮನೆಗೇ ನುಗ್ಗಿಬಿಟ್ಟಿವೆ. ಇದಕ್ಕೆ ಕಾರಣ ದೂರದರ್ಶನದಲ್ಲಿ 'ಹೊಸರುಚಿ'ಯ ಪ್ರದರ್ಶನ ಮಾಡುವ ಕನ್ನಡ ಮಹಿಳಾಮಣಿಗಳ ಸಂಭಾಷಣೆಯ ಪರಿಣಾಮ. ಎಫ್.ಎಂ. ರೇಡಿಯೋ, ದೂರದರ್ಶನದ ಅನೇಕ ವಾಹಿನಿಗಳ ಪ್ರಭಾವ. ವರ್ತಮಾನ ಪತ್ರಿಕೆಗಳಲ್ಲಿಯೂ, ದೂರದರ್ಶನದಲ್ಲಿಯೂ, ಆಕಾಶವಾಣಿಯಲ್ಲಿಯೂ ಪ್ರಚಾರವಾಗುವ ಇಂಥ ಪ್ರಯೋಗಗಳನ್ನು ನಿಲ್ಲಿಸಿ, ನಮ್ಮಲ್ಲಿ ಪ್ರಚಾರದಲ್ಲಿರುವ ಕನ್ನಡ ಶಬ್ದಗಳನ್ನು ಉಪಯೋಗಿಸುವಂತೆ ಆಯಾ ಕೇಂದ್ರಗಳ ಅಧಿಕಾರಿಗಳು ನಿರ್ದೇಶಿಸಬೇಕು. ಯಾವ ಶಬ್ದ ಬೇಕಾದರೂ ನಿಧಾನವಾಗಿ ತಾನೇ ತಾನಾಗಿ ಬರಲಿ. ಆದರೆ ನಾವೇ ಅವುಗಳನ್ನು ಅನವಶ್ಯಕವಾಗಿ ಆಮದು ಮಾಡಿಕೊಳ್ಳಬಾರದು. ಹಾಗೆ ಮಾಡಿದರೆ ನಮ್ಮ ಸ್ವಂತ ಶಬ್ದಸಂಪತ್ತು ಮಾಯವಾಗಿಬಿಡುತ್ತದೆ. ನಾವು ಅವುಗಳಿಲ್ಲದೆ ಕನ್ನಡ ಶಬ್ದದರಿದ್ರರಾಗಿಬಿಡುತ್ತೇವೆ. ಸಮಾಜದ ಹಿರಿಯರು, ವಿದ್ಯಾವಂತ ಮಹಿಳೆಯರು, ಸಾಮಾಜಿಕ ಸಂಸ್ಥೆಗಳ ಕಾರ್ಯಕರ್ತರು, ವರ್ತಮಾನ ಪತ್ರಿಕೆಗಳ ಪತ್ರಕರ್ತರು, ಕನ್ನಡ ಚಳವಳಿಯ ನಾಯಕರು ಇವರೆಲ್ಲರಿಗೂ ಈ ಬಗ್ಗೆ ತಿಳಿವಳಿಕೆಯನ್ನು ನೀಡುವ ಒಂದು ಕನ್ನಡ ಆಂದೋಳನ ನಡೆಯಬೇಕು. ಕನ್ನಡ ಸಾಹಿತ್ಯ ಪರಿಷತ್ತು ಅದರ ಜಿಲ್ಲಾ ಮತ್ತು ತಾಲ್ಲೂಕು ಅಂಗಸಂಸ್ಥೆಗಳು, ಮಹಿಳೆಯರ ಕ್ಲಬ್ಬುಗಳು, ಬೆಳಗ್ಗೆ ವಾಯುವಿಹಾರಕ್ಕೆಂದು ಹೋಗುವ ಹಿರಿಯರ ತಂಡ ಇವರೆಲ್ಲ ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ಕನ್ನಡಕ್ಕೆ ಬರುವ ಶಬ್ದಗಳು ಯಾವ ಭಾಷೆಯಿಂದ ಬೇಕಾದರೂ ಬರಲಿ. ನಿಧಾನವಾಗಿ ಬರಲಿ. ನಾವೇ ಬಲವಂತವಾಗಿ ತುರುಕುವುದು ಬೇಡ. ಅಷ್ಟೆ! ★

# ಕನ್ನಡವನ್ನು ಬಹುಮುಖಿಯಾಗಿ ಬೆಳೆಸಿದ ಎಂ.ಆರ್.ಶ್ರೀ

**ನಾಡೋಜ ಡಾ.ಮಹೇಶ ಜೋಶಿ**



ಕನ್ನಡ ಭಾಷೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದವರಲ್ಲಿ ಮೂವರು ಶ್ರೀಗಳು ಪ್ರಮುಖರಾಗಿದ್ದು, ಅವರುಗಳೆಂದರೆ, ಬಿ.ಎಂ.ಶ್ರೀ, ತೀ.ನಂ.ಶ್ರೀ ಮತ್ತು ಎಂ.ಆರ್.ಶ್ರೀ. ಯವರುಗಳು. ಕನ್ನಡಕ್ಕಾಗಿ ದುಡಿದ ಹಾಗೂ ಕನ್ನಡವನ್ನು ಬೆಳೆಸಿದ ಮಹನೀಯರಲ್ಲಿ ಪ್ರಮುಖರಾಗಿರುವವರಲ್ಲಿ ಎಂ. ಆರ್. ಶ್ರೀನಿವಾಸಮೂರ್ತಿಯವರು ಒಬ್ಬರಾಗಿದ್ದು, ಕನ್ನಡ ಸಾಹಿತ್ಯವನ್ನು ಅಮೂಲಾಗ್ರವಾಗಿ ಓದಿ ಗ್ರಹಿಸಿದ್ದರು. ಮೂಲತಃ ವಿಜ್ಞಾನದ ವಿದ್ಯಾರ್ಥಿಯಾಗಿದ್ದರೂ, ಕನ್ನಡದ ಆಕರ್ಷಣೆಗೆ ಒಳಗಾಗಿ ಶ್ರಮಪಟ್ಟು ಕನ್ನಡ ಸಾಹಿತ್ಯದಲ್ಲಿ ಪ್ರಭುತ್ವವನ್ನು ಪಡೆದಿದ್ದರು. ವೀರಶೈವ ಸಾಹಿತ್ಯ, ಅದರಲ್ಲೂ ವಚನ ಸಾಹಿತ್ಯಕ್ಕೆ ಎಂ.ಆರ್.ಶ್ರೀ. ಅವರದು ಬೆಲೆಯುಳ್ಳ ಕಾಣಿಕೆ. 'ವಚನ ಧರ್ಮಸಾರ' ಕೃತಿಯು ಅವರ ಆಳವಾದ ವ್ಯಾಸಂಗಕ್ಕೆ, ವಿದ್ವತ್ತಿಗೆ, ಹೊಸದಾದ ಆಲೋಚನೆಗಳಿಗೆ ಸಂಕೇತವಾಗಿದೆ ಎಂದು ನಾಡೋಜ ಡಾ.ಮಹೇಶ ಜೋಶಿಯವರು ತಿಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿತವಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಎಂ.ಆರ್. ಶ್ರೀನಿವಾಸಮೂರ್ತಿಯವರ ೧೩೨ನೆಯ ಜಯಂತಿಯ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಮೈಸೂರು ವಿಶ್ವವಿದ್ಯಾಲಯದ ಕನ್ನಡ–ಇಂಗ್ಲಿಷ್ ನಿಘಂಟಿಗೆ ಹೊಸ ರೂಪ ನೀಡಿದ ಎಂ.ಆರ್.ಶ್ರೀ. ಶಿಕ್ಷಣ ಇಲಾಖೆಯಲ್ಲಿ ಜಿಲ್ಲಾ ಶಿಕ್ಷಣಾಧಿಕಾರಿಗಳಾಗಿ ಮಹತ್ವದ ಸೇವೆಯನ್ನು ಸಲ್ಲಿಸಿದರು. ಎಂ.ಆರ್.ಶ್ರೀ ಅವರು ಶ್ರೇಷ್ಠ ವಾಗ್ಮಿಗಳೂ ಆಗಿದ್ದರಲ್ಲದೆ, ಕನ್ನಡ ಸಾಹಿತ್ಯ ಮತ್ತು ವೀರಶೈವ ಸಾಹಿತ್ಯದ ಕುರಿತು ಅಧಿಕಾರವಾಣಿಯಿಂದ ಮಾತನಾಡಬಲ್ಲ ವಿದ್ವಾಂಸರಾಗಿದ್ದರು. ಪರಿಷತ್ತಿನ ಎಲ್ಲ ಸಾಹಿತ್ಯಕ ಚಟುವಟಿಕೆಗಳ ಹಿನ್ನೆಲೆಯಲ್ಲಿ ಗುಪ್ತಗಾಮಿಯಾಗಿ ಎಂ.ಆರ್.ಶ್ರೀ. ಅವರ ಪರಿಶ್ರಮ ಹರಿದಿದೆ. ಕನ್ನಡಕ್ಕೆ ಧಕ್ಕೆ ಬಂದಾಗಲೆಲ್ಲಾ, ಅದರ ಸ್ಥಾನಮಾನಕ್ಕೆ ಚ್ಯುತಿ ಬಂದಾಗಲೆಲ್ಲಾ, ಎಂ.ಆರ್.ಶ್ರೀ. ಹೋರಾಟ ನಡೆಸಿದವರು. ಎಂ.ಆರ್.ಶ್ರೀ. ಅವರು ಅಧ್ಯಕ್ಷರಾಗಿದ್ದಾಗಿನ ಅವಧಿಯಲ್ಲಿ ಸೊಲ್ಲಾಪುರ, ಮುಂಬಯಿ ಮತ್ತು ಬೇಲೂರುಗಳಲ್ಲಿ ಮೂರು ಕನ್ನಡ ಸಾಹಿತ್ಯ ಸಮ್ಮೇಳನಗಳಾದವು. ಅವರ ಕಾರ್ಯದಲ್ಲಿ ಪ್ರಾಮಾಣಿಕತೆ, ಒಪ್ಪ, ಓರಣ, ಶಿಸ್ತು ಲೆಕ್ಕಾಚಾರವಿರುತ್ತಿತ್ತು. ನಿಘಂಟಿನ ಕಾರ್ಯದ ಪುನರ್ ವ್ಯವಸ್ಥೆ ಕನ್ನಡ ನುಡಿ ಪತ್ರಿಕೆಯ ಪರಿಷ್ಕರಣ, ಗಮಕ ಕಲೆಗೆ ಪ್ರೋತ್ಸಾಹ, ಪ್ರತಿಭಾನ್ವಿತರನ್ನೂ, ಕಲಾವಿದರನ್ನೂ ಸನ್ಮಾನಿಸುವುದು ಇವೆಲ್ಲಾ ಅವರ ಅಧಿಕಾರಾವಧಿಯಲ್ಲಿ ಆದಂತಹ ಕಾರ್ಯಗಳು. ಅಧಿಕಾರದಲ್ಲಿದ್ದಾಗಲೇ ಅವರು ನಮ್ಮನ್ನು ಅಗಲಿದ್ದು ದುರದೃಷ್ಟಕರ ಸಂಗತಿ ಎಂದು ನಾಡೋಜ ಡಾ.ಮಹೇಶ ಜೋಶಿಯವರು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕರಾದ ಎನ್.ಎಸ್.ಶ್ರೀಧರ ಮೂರ್ತಿಯವರು ಮಾತನಾಡಿ ಎಂ.ಆರ್.ಶ್ರೀ. ಅವರ ಸಾಹಿತ್ಯಸೃಷ್ಟಿ ವೈವಿಧ್ಯಮಯವಾದುದು. 'ಕಂಠೀರವ ವಿಜಯ', 'ಧರ್ಮದುರಂತ', 'ಯದುವಿಜಯ' ಮತ್ತು 'ನಾಗರಿಕ' – ಇವು ನಾಟಕಗಳು. ೧೯೩೩ರಲ್ಲಿ 'ಕವಿಯ ಸೋಲು' ಮತ್ತು ಇತರ ಕವಿತೆಗಳು ಪ್ರಕಟವಾದವು. 'ಕವಿಯ ಸೋಲು' ಎಂಬುದು ಸರಳರಗಳೆಯ ಪುಟ್ಟ ನಾಟಕ. 'ರೂಲ್ಸ್ ಮೇಷ್ಟ್ರು' ಹಾಗೂ 'ರಂಗಣ್ಣನ ಕನಸಿನ ದಿನಗಳು' ಎಂ.ಆರ್.ಶ್ರೀ. ಅವರ ವೃತ್ತಿ ಜೀವನದ ಅನುಭವಗಳನ್ನು ಒಳಗೊಂಡಿದೆ. 'ರಂಗಣ್ಣನ ಕನಸಿನ ದಿನಗಳು' ಕಥೆಯ ಜಾತಿಗೂ ಸೇರದ, ಕಾದಂಬರಿಯ ಜಾತಿಗೂ ಸೇರದ ಒಂದು ವಿಶಿಷ್ಟವಾದ ಕೃತಿ. ಕುವೆಂಪುರವರು ಇದನ್ನು 'ಚಿತ್ರಕಾದಂಬರಿ' ಎಂದು ಕರೆದಿದ್ದಾರೆ. ಕಳೆದ ಶತಮಾನದ ಎರಡನೆಯ ದಶಕದಲ್ಲಿ ಎಂ.ಆರ್.ಶ್ರೀ. ಅವರು 'ಸಾವಿತ್ರಿ' ಎನ್ನುವ ಸ್ವತಂತ್ರ ಸಾಮಾಜಿಕ ಕಾದಂಬರಿಯನ್ನು ಬರೆದರು. ೧೯೧೬–೧೭ರಲ್ಲಿ 'ಕಾದಂಬರಿ ಸಂಗ್ರಹ' ಎನ್ನುವ ಮಾಸ ಪತ್ರಿಕೆಯಲ್ಲಿ ಇದು ಧಾರಾವಾಹಿಯಾಗಿ ಪ್ರಕಟವಾಯಿತು. ಮುಂದೆ ಇದು ಪುಸ್ತಕರೂಪದಲ್ಲಿ ಪ್ರಕಟಗೊಂಡಿತು. ಎಂ.ಆರ್.ಶ್ರೀ.ಅವರ 'ಮಹಾತ್ಯಾಗ' ಕಾದಂಬರಿ ಚಲನ ಚಿತ್ರವಾಗಿಯೂ ಮನ್ನಣೆಯನ್ನು ಪಡೆದಿದೆ ಎಂದು ವಿವರಗಳನ್ನು ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದ ಡಾ. ಪದ್ಮಿನಿ ನಾಗರಾಜು, ನೇ.ಭ.ರಾಮಲಿಂಗಶೆಟ್ಟಿ, ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ್ ಪಾಂಡು ಸೇರಿದಂತೆ ಪರಿಷತ್ತಿನ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ★

# ಕನ್ನಡ ಸಾಹಿತ್ಯ ಪರಿಷತ್ತಿಗೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಕೊಡುಗೆ

-ನಾಡೋಜ ಡಾ. ಮಹೇಶ ಜೋಶಿ



'**ಕ**ನ್ನಡದ ಆಸ್ತಿ' ಎಂದೇ ಪರಿಗಣಿತವಾಗಿರುವ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿ ಬೆಳೆಸಿದ ಮಹನೀಯರಲ್ಲಿ ಪ್ರಮುಖರಾದವರು. ಅವಿಭಜಿತ ಕೋಲಾರ ಜಿಲ್ಲೆಯ, ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯ ಮಾಸ್ತಿ ಗ್ರಾಮದಲ್ಲಿ ೧೮೯೧ರ ಜೂನ್ ೬ರಂದು ಜನಿಸಿದ ಅವರು ಪ್ರೌಢಶಾಲಾ ಮತ್ತು ಎಫ್.ಎ. ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿಯೂ, ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದು ಮದರಾಸಿನ ಪ್ರಸಿಡೆನ್ಸಿ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು.

೧೯೧೪ರಲ್ಲಿ ಮೈಸೂರು ಸರ್ಕಾರದಲ್ಲಿ ಅಸಿಸ್ಟೆಂಟ್ ಕಮೀಷನರ್ ಹುದ್ದೆಯಿಂದ ಆರಂಭಿಸಿ, ಹಲವು ಪ್ರಮುಖ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ, ೧೯೪೧ರಲ್ಲಿ ಸ್ವಯಂ ನಿವೃತ್ತಿ ಪಡೆದರು. ಈ ವೇಳೆಗಾಗಲೇ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಬೆಳವಣಿಗೆಯಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡಿದ್ದರು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ಮಾಸ್ತಿಯವರು, ಕರ್ಣಾಟಕ ಸಾಹಿತ್ಯ ಪರಿಷತ್ತು ಸ್ಥಾಪನೆಯಾಗಬೇಕು ಎಂದು ಸೂಚಿಸಿದವರಲ್ಲಿ ಪ್ರಮುಖರು. ೧೯೪೩ರಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದರು. ಆಗ ಪರಿಷತ್ತಿನ ಕೇಂದ್ರೀಯ ಸಮಿತಿಯ ಜೊತೆಗೆ ಹೈದರಾಬಾದ್ ಪ್ರಾಂತ್ಯ ಸಮಿತಿ, ಮದ್ರಾಸ್ ಪ್ರಾಂತ್ಯ ಸಮಿತಿಗಳನ್ನು ರೂಪಿಸಿದರು. ಮಾಸ್ತಿಯವರ ಬಹಳ ಮುಖ್ಯವಾದ ಕೊಡುಗೆ, ಕನ್ನಡ ಸಾಹಿತ್ಯ ಪರಿಷತ್ತಿನ ವಿಕೇಂದ್ರೀಕರಣ. ಆರ್ಥಿಕ ಸೌಕರ್ಯವು ಸದಸ್ಯರ ಸಂಖ್ಯೆಯನ್ನು ಅವಲಂಬಿಸಿರಬೇಕು ಎನ್ನುವ ನಿಯಮವನ್ನು ಮಾಡಿದ್ದರಿಂದ, ಪರಿಷತ್ತಿನ ಸದಸ್ಯರ ಸಂಖ್ಯೆ ಹೆಚ್ಚಾಯಿತು. ಅವರ ಕಾಲದಲ್ಲಿ, ಸದಸ್ಯರ ಸಂಕ್ಯೆ ೨೫೦೦ಕ್ಕೆ ಏರಿತು. ಮಹಿಳಾ ಶಾಖೆ ಕೂಡಾ ಆರಂಭವಾಯಿತು. 'ಕನ್ನಡ ಸರಸ್ವತಿ ಹಳ್ಳಿಗೆ ಬಂದಳು' ಎನ್ನುವ ಯೋಜನೆಯಡಿ ಹಳ್ಳಿ-ಹಳ್ಳಿಗಳಲ್ಲಿಯೂ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳು ನಡೆದವು. ಅವರ ಅವಧಿಯಲ್ಲಿಯೇ ಪರಿಷತ್ತಿಗೆ ದೂರವಾಣಿ ಸೌಲಭ್ಯ ಬಂದಿತು. ಆಶುಭಾಷಣ, ಕಂಠಪಾಠ, ದೇವರನಾಮ, ಅಭಿನಯ, ಹಾಡುಗಾರಿಕೆ ಹೀಗೆ ವಿವಿಧ ಸ್ಪರ್ಧೆಗಳು ನಡೆದವು. ಮಾಸ್ತಿಯವರು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಎಷ್ಟೇ ದೂರ ಪ್ರಯಾಣ ಮಾಡಿದರೂ ಪ್ರಯಾಣ ಭತ್ಯೆಯನ್ನು ಪಡೆಯುತ್ತಿರಲಿಲ್ಲ. ೧೯೪೮ರ ಕಾಸರಗೋಡು ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರೇ ಪರಿಷತ್ತಿನ ಅಧ್ಯಕ್ಷರೂ ಆಗಿರಬೇಕು ಎನ್ನುವ ನಿಯಮವನ್ನು ರೂಪಿಸಲಾಯಿತು. ಆದರೆ, ಅದರಿಂದ ಸಾಕಷ್ಟು ಅನಾನುಕೂಲಗಳಾದವು. ೧೯೫೦ರಲ್ಲಿ ಸೊಲ್ಲಾಪುರದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಎಂ.ಆರ್. ಶ್ರೀನಿವಾಸ ಮೂರ್ತಿ ಅವರನ್ನು ಮೂರು ವರ್ಷಗಳ ಅವಧಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಆದರೆ, ಅವರು ಅಧಿಕಾರಾವಧಿ ಮುಗಿಯುವ ಮೊದಲೇ ನಿಧನರಾದರು. ಆಗ, ಎಂಟು ತಿಂಗಳುಗಳ ಕಾಲ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಅವರೇ ಮುಂದುವರೆಯಬೇಕು ಎಂಬ ಒತ್ತಡವಿದ್ದರೂ ವಾರ್ಷಿಕ ಸಭೆಯಲ್ಲಿ ಲೆಕ್ಕಪತ್ರಗಳನ್ನು ಒಪ್ಪಿಸಿ ಹೊಸ ಅಧ್ಯಕ್ಷರನ್ನು ಆರಿಸಿಕೊಳ್ಳುವಂತೆ ತಿಳಿಸಿದರು. ಅದರಂತೆ, ಪ್ರೊ. ಎ.ಎನ್. ಮೂರ್ತಿರಾಯವರು ಅಧ್ಯಕ್ಷರಾಗಿ ಆಯ್ಕೆಯಾದರು.

ಸಮಗ್ರ ಕನ್ನಡ ನಿಘಂಟಿನ ಕಾರ್ಯಕ್ಕೆ ಪ್ರೇರಣೆ ಸಿಕ್ಕಿದ್ದು ಮಾಸ್ತಿಯವರ ಕಾಲ್ಲದಲ್ಲಿಯೇ, ೧೯೪೧ರ ಡಿಸೆಂಬರ್‌ನಲ್ಲಿ. ಆಗ, ಹೈದರಾಬಾದಿನಲ್ಲಿ ಸಮಾವೇಶವಾಗಿದ್ದ ಸಕಲ ಸದಸ್ಯರ ಸಭೆಯಲ್ಲಿ ನಿಘಂಟಿನ ಅಗತ್ಯದ ಬಗ್ಗೆ ಒಮ್ಮತದ ತೀರ್ಮಾನವಾಗಿ ಈ ಕುರಿತು ಪ್ರಯತ್ನಪಡುವಂತೆ ಕಾರ್ಯಕಾರಿ ಸಮಿತಿಯನ್ನು ವಿನಂತಿಸಲಾಯಿತು. ಪ್ರಾಥಮಿಕ ಸಿದ್ಧತೆಗಳಾದ ನಂತರ ೧೯೪೪ರ ಜನವರಿ ೨೨ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡದಲ್ಲಿ ಕನ್ನಡ ನಿಘಂಟಿನ ಕೆಲಸಗಳನ್ನು ಆರಂಭಿಸಲಾಯಿತು. ಶಬ್ದಸಂಗ್ರಹಣೆ ಮತ್ತು ಪರಿಶೋಧನೆ ಕೆಲಸಗಳು ನಿರಂತರವಾಗಿ ನಡೆದವು. ನಿಘಂಟಿನ ರೂಪರೇಷೆಗಳು ಖಚಿತಗೊಂಡಿದ್ದು, ೧೯೫೫ರ ಕೊನೆಯಲ್ಲಿ ಇವೆಲ್ಲಕ್ಕೂ ಮಾಸ್ತಿ ಕಾರಣರಾಗಿದ್ದರು.

'ಕನ್ನಡ ಸಣ್ಣಕತೆ ಜನಕ' ಹೆಸರಾದ ಮಾಸ್ತಿಯವರು ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಜ್ಞಾನಪೀಠವೂ ಸೇರಿದಂತೆ ಹಲವು ಪ್ರಮುಖ ಪುರಸ್ಕಾರಗಳನ್ನು ಪಡೆದ ಅವರು ಕನ್ನಡ ಸಾಹಿತ್ಯದಂತೆಯೇ ಕನ್ನಡ ಸಾಹಿತ್ಯ ಪರಿಷತ್ತನ್ನೂ ಕೂಡ ಸಮಗ್ರವಾಗಿ ಬೆಳೆಸಿದರು. ಮಾಸ್ತಿ ವೆಂಕಟೇಶ ಅಯ್ಯಂಗಾರರು ೧೯೨೯ರ ಮೇ ೧೨, ೧೨, ೧೪ರಂದು ಬೆಳಗಾವಿಯಲ್ಲಿ ನಡೆದ ೧೫ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರ ಸಂಖ್ಯೆ ಹೆಚ್ಚಿಸುವ ಬಗ್ಗೆ ಮತ್ತು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ನಿಯತವಾಗಿ ಬರುವ ಕುರಿತು ಪ್ರಸ್ತಾಪ ಮಾಡಿದರು. ಮಾಸ್ತಿ ಕನ್ನಡ ಸಾಹಿತ್ಯ ಪರಿಷತ್ತಿನ ಶಿಸ್ತು ಮತ್ತು ಮೌಲ್ಯಗಳನ್ನು ನೀಡಿದರು. ಇಂದಿಗೂ ಅವರು ಹಾಕಿಕೊಟ್ಟ ಹಾದಿಯಲ್ಲಿ ನಾವು ಸಾಗುತ್ತಿದ್ದೇವೆ. ★

# ಸಮಷ್ಟಿ ವಿಮರ್ಶೆ

- ಡಾ.ರಂ.ಶ್ರೀ ಮುಗಳಿ

**(ಒಂದು ಕಲಾಕೃತಿಯನ್ನು ಸಮಷ್ಟಿಯಾಗಿ ವಿಮರ್ಶಿಸುವುದೇ ನಿಜವಾದ ವಿಮರ್ಶೆ. ಪಾಶ್ಚಾತ್ಯ ವಿಚಾರ ಸಂಸ್ಕೃತಿಯಲ್ಲಿ ಸಮಷ್ಟಿ ವಿಮರ್ಶೆಗೆ ಒಂದು ತಾತ್ವಿಕ ಪೀಠಿಕೆಯುಂಟು. ಅದಕ್ಕೆ ಸಮಷ್ಟಿ ತತ್ತ್ವವೆನ್ನಬಹುದು. ಯಾವುದೇ ಪದಾರ್ಥದಲ್ಲಿ ಒಂದು ಆಂತರಿಕ ಸಾಂಗತ್ಯ ಇರುವ ಹಾಗೆ ಕಲಾಕೃತಿಯಲ್ಲಿಯೂ ಉಂಟು. ಈ ಆಂತರಿಕ ಸಾಂಗತ್ಯವೇ ಅದರ ಸೌಂದರ್ಯ. ನಿಜವಾದ ವಿಮರ್ಶಕನಿಗೆ ಈ ಸೌಂದರ್ಯ ಪ್ರಜ್ಞೆಯಿರಬೇಕು. ಇದು ಡಾ. ಮುಗಳಿಯವರ ಮನನೀಯ ಲೇಖನದ ಸಾರಾಂಶದ ಸರಳ ನಿರೂಪಣೆ. ಕನ್ನಡದಲ್ಲಿ ಇನ್ನೂ ಬೆಳೆಯಬೇಕಾಗಿರುವ ವಿಮರ್ಶಾಶಾಸ್ತ್ರಕ್ಕೆ ಇಲ್ಲಿನ ವಿಚಾರ ಧೋರಣೆ ಹೊಸದಾಗಿರುವಂತೆ ಬೆಲೆಯುಳ್ಳದ್ದೂ ಆಗಿದೆ.)**

ಒಂದು ಕಲಾಕೃತಿಯನ್ನು ಸಮಷ್ಟಿಯಾಗಿ ಅಂದರೆ, ಸಮಗ್ರವಾಗಿ ವಿಮರ್ಶಿಸುವ ವಿಧಾನವೇ ಸಮಷ್ಟಿ ವಿಮರ್ಶೆ. ಒಂದು ಅರ್ಥದಲ್ಲಿ ಎಲ್ಲಾ ನಿಜವಾದ ವಿಮರ್ಶೆ ಸಮಷ್ಟಿ ವಿಮರ್ಶೆಯೆನ್ನಬಹುದು. ಇನ್ನೊಂದು ಅರ್ಥದಲ್ಲಿ ಸಮಷ್ಟಿ ವಿಮರ್ಶೆಯೆಂಬುದು ಪ್ರತ್ಯೇಕವಾಗಿದ್ದು ತನ್ನದೇ ಆದ ವೈಚಾರಿಕ ಭೂಮಿಕೆಯನ್ನೂ ಅವಧಾರಣೆಯನ್ನೂ ಪಡೆದಿರುತ್ತದೆ. ಈ ಲೇಖನದಲ್ಲಿ ಎರಡನೆಯ ಅರ್ಥದಲ್ಲಿ ಪ್ರಮುಖವಾಗಿ ಅದನ್ನು ವಿವರಿಸಿ ಚರ್ಚಿಸುವ ಉದ್ದೇಶವಿದೆ. ಜೊತೆಗೆ ಕನ್ನಡ ಕಾವ್ಯ ವ್ಯಾಸಂಗದಲ್ಲಿ ಮತ್ತು ಮೌಲ್ಯಮಾಪನದಲ್ಲಿ ಸಮಷ್ಟಿ ವಿಮರ್ಶೆ ಎಷ್ಟರಮಟ್ಟಿಗೆ ಅನ್ವಯವಾಗಿದೆ ಎಂಬುದನ್ನೂ ಕೆಲಮಟ್ಟಿಗೆ ವಿವರಿಸುವ ಉದ್ದೇಶವೂ ಇದೆ. ಪಾಶ್ಚಾತ್ಯ ವಿಚಾರಧಾರೆಯಂತೆ ಸಮಷ್ಟಿ ವಿಮರ್ಶೆ (ಆರ್ಗ್ಯಾನಿಷ್ಟಿಕ್ ಕ್ರಿಟಿಸಿಸಂ) ಎಂಬುದಕ್ಕೆ ಒಂದು ತಾತ್ವಿಕ ಪೀಠಿಕೆಯಿದೆ. ಅದಕ್ಕೆ ಸಮಷ್ಟಿ ತತ್ವ (ಆರ್ಗ್ಯಾನಿಸಿಸಂ) ಎಂದು ಹೇಳುತ್ತಾರೆ. ಪಾರಂಪರಿಕವಾಗಿ ಅದನ್ನು 'ವ್ಯಕ್ತಿ ನಿರಪೇಕ್ಷ ಧ್ಯೇಯವಾದ' (ಆಬ್ಜೆಕ್ಟೀವ್ ಐಡಿಯಲಿಸಂ) ಎಂದು ತಿಳಿಸುವುದುಂಟು. ಪದಾರ್ಥಗಳಲ್ಲಿ ಆಂತರಿಕ ಸಂಬದ್ಧತೆ ಅಥವಾ ಸುಸಂಗತಿ ಇರುತ್ತದೆ ಎಂಬುದೇ ಸಮಷ್ಟೀ ತತ್ವ. ಮೊದಲು ಕಾಣಲಿಕ್ಕೆ ಸಂಬಂಧವಿಲ್ಲವೆಂದು ತೋರಿದ ಪದಾರ್ಥಗಳು ಆಮೇಲೆ ನಿಕಟ ಸಂಬಂಧವುಳ್ಳವಾಗುತ್ತವೆ. ಜ್ಞಾನವು ಮುಂಬರಿದಂತೆ ಅದು ಹೆಚ್ಚು ವ್ಯವಸ್ಥಿತವಾಗುತ್ತದೆ. ಎಷ್ಟರ ಪ್ರಮಾಣದಲ್ಲಿ ನಮ್ಮ ಜ್ಞಾನವು ಸಮಗ್ರತೆಯನ್ನು ಹೊಂದಿರುತ್ತದೆಯೋ ಅಷ್ಟರಿಂದ ಅದರ ಬೆಲೆ ನಿರ್ಧರಿತವಾಗುತ್ತದೆ. ಹೀಗಾಗಿ ಮೂಲ್ಯವೆಂದರೆ ಸರ್ವಾಂಗಗಳಲ್ಲಿಯ ಸಮಗ್ರತೆಯೆಂದು ತಿಳಿಯಬಹುದು. ಜ್ಞಾನದ ಕ್ಷೇತ್ರದಲ್ಲಿ ಮೂಲ್ಯವೆಂದರೆ ತೀರ್ಮಾನಗಳ ಸಮಷ್ಟಿ ಇಲ್ಲವೆ ಸಮಗ್ರತೆ, ನೀತಿಯ ಕ್ಷೇತ್ರದಲ್ಲಿ ಕೃತಿಗಳ ಸಮಷ್ಟಿ, ಕಲಾ ಕ್ಷೇತ್ರದಲ್ಲಿ ಭಾವನೆಗಳ ಸಮಷ್ಟಿ ಎಂದು ಹೇಳಿರುವುದುಂಟು. ಇವೆಲ್ಲಾ ಸೇರಿ ಜೀವನದ ಅಥವಾ ಜೀವನ ಸತ್ಯದ ಸಂಪೂರ್ಣ ಸಮಷ್ಟಿಯೆಂದು ಅಂತಿಮವಾಗಿ ಗ್ರಹಿಸಲಾಗಿದೆ.

ಈ ಸಿದ್ಧಾಂತವು ತಾತ್ವಿಕವಾಗಿ ಎಷ್ಟು ಸಮರ್ಪಕವೆಂಬುದರ ಗೊಡವೆ ನಮಗೆ ಬೇಕಾಗಿಲ್ಲ. ಇದಕ್ಕೆ ಸಾಕಷ್ಟು ಬೆಂಬಲವಿದೆ ಎಂಬುದನ್ನು ಗಮನಿಸಬೇಕು. ಸೌಂದರ್ಯ ಸಮೀಕ್ಷೆಯಲ್ಲಿ ಮತ್ತು ರಸ ವಿಮರ್ಶೆಯಲ್ಲಿ ಇದು ಅತ್ಯಂತ ಫಲಪ್ರದವಾದ ಸಿದ್ಧಾಂತವೆಂದು ಸಿದ್ಧವಾಗಿದೆ. ಇದರ ಅಂತರಾರ್ಥವನ್ನು ಸೆಲಿಂಗ್ ಪೂರ್ತಿಯಾಗಿ ಮೊದಲ ಸಲ ವಿವರಿಸಿದನು. ಆದರೆ, ವಿಮರ್ಶೆಯ ಒಂದು ಸಾಧನವೆಂಬ ದೃಷ್ಟಿಯಿಂದ ಇದರಲ್ಲಿ ಅಡಕವಾದ ಶಕ್ತಿಯನ್ನು ಕಂಡುಹಿಡಿದ ಶ್ರೇಯಸ್ಸು ಪ್ರಾಯಶಃ ಸೂಕ್ಷ್ಮ ಸಂವೇದಿಯಾದ ಕೋಲರಿಜ್‌ನಿಗೆ ಸಲ್ಲಬೇಕು. ಹೆಜೆಲ್ಲನು ಕಲಾಪ್ರಪಂಚದ ಸಮಸ್ತ ಕ್ಷೇತ್ರಕ್ಕೆ ಅನ್ವಯಿಸುವಂತೆ ಇದನ್ನು ಕುರಿತು ಆಳವಾಗಿ ಆಲೋಚಿಸಿ, ಆಧುನಿಕರಲ್ಲಿ ಈ ಬಗ್ಗೆ ತೀವ್ರ ಆಸಕ್ತಿಯನ್ನು ಉಂಟುಮಾಡಲು ಕಾರಣನಾದನೆನ್ನಬಹುದು. ಆದರೆ, ಅವನ ಅನುಯಾಯಿಗಳನೇಕರು ಸೌಂದರ್ಯ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಇದರ ಚಿಂತನಾಂಶದ ಭಿನ್ನ ಭಿನ್ನ ಪ್ರಕಾರಗಳನ್ನು ಬಿತ್ತರಿಸುವುದರಲ್ಲಿ ತೊಡಗಿದರು. ಸೌಂದರ್ಯ ವಿಷಯಕ ಸಂಗತಿಗಳಲ್ಲಿ ಇದರ ಮಾರ್ಗದರ್ಶನವು ಏನೆಂಬುದಕ್ಕೆ ಅಷ್ಟು ಗಮನ ಕೊಡಲಿಲ್ಲ. ಕೊನೆಗೆ ಒಂದು ಶತಮಾನದ ಸಮಷ್ಟಿ ಸಂಬಂಧಿಯಾದ ವಿಚಾರ ಸರಣಿಯ ಚದುರಿರುವ ನಿಷ್ಪತ್ತಿಗಳನ್ನು ಒಂದೆಡೆ ಸೇರಿಸಿ ತನ್ನ 'ಸೌಂದರ್ಯ ಶಾಸ್ತ್ರದ ಮೇಲಿನ ಮೂರು ಉಪನ್ಯಾಸಗಳು' ಎಂಬ ಸಂಕ್ಷಿಪ್ತ ಕೃತಿಯ ಮೂಲಕ ಬೊಸಾಂಕೆ ಎಂಬಾತನು ಆ ಶಾಸ್ತ್ರ ಸಂಬಂಧಿ ವಾಙ್ಮಯ ಶ್ರೇಷ್ಠವಾದ ಕಾಣಿಕೆಯನ್ನು ನೀಡಿದನು. ಮೂರ್ತ ರೂಪಗಳಲ್ಲಿ ಸಮಷ್ಟಿ ತತ್ವವು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಬೊಸಾಂಕೆ ಅಂತಃಸ್ಫೂರ್ತಿಯಿಂದ ಅರಿಯ ಬಲ್ಲವನಾಗಿದ್ದನು. ಇವರಿಬ್ಬರನ್ನೂ ಒಂದು ವ್ಯಕ್ತಿತ್ವದಲ್ಲಿ ಸೇರಿಸಬಹುದಾದರೆ ಸಮಷ್ಟಿ ಸೌಂದರ್ಯಶಾಸ್ತ್ರದ ಮತ್ತು ಸಮಷ್ಟಿ ವಿಮರ್ಶೆಯ ಪರಿಪೂರ್ಣ ಲೇಖಕನು ನಮಗೆ ದೊರಕುವನು.

ಬೊಸಾಂಕೆಯ ಉಪನ್ಯಾಸಗಳಲ್ಲಿ ಪ್ರತಿಪಾದಿತವಾಗಿದ್ದ ಸಮಷ್ಟಿ ತತ್ವವು ಸಂಕ್ಷೇಪವಾಗಿ ಹೀಗಿದೆ. ಎಲ್ಲ ಸಂಬದ್ಧ ಸಂಗತಿಗಳನ್ನು ಇಡಿಯಾಗಿ ತೆಗೆದುಕೊಂಡು ಅವನ್ನು ಕಲ್ಪನೆಗಳಾಗಿ (ಐಡಿಯಾ) ಬೆಳೆಸಬೇಕು. ಅದು ಹೇಗೆಂದರೆ, ಈ ಕಲ್ಪನೆಗಳು ಆಲೋಚನೆಗೆ ಸಂಪೂರ್ಣವೆಂದು ಮತ್ತು ತನ್ನಷ್ಟಕ್ಕೆ ಸುಸಂಗತವೆಂದು ತೋರ ಒಪ್ಪಿತವಾಗಬೇಕು. ಈ ಅನ್ಯೋನ್ಯ ಸುಸಂಗತಿ (ಸೆಲ್ಫ್ ಕನ್ಸಿಸ್ಟೆನ್ಸಿ) ಗಣಿತದ ಅಮೂರ್ತ ಸಂಕೇತಗಳ ಸುಸಂಗತಿಯಲ್ಲ; ಎಲ್ಲ ಸಂಬದ್ಧ ಸಂಗತಿಗಳ ಸುಸಂಗತಿ (ಸೆಲ್ಫ್ ಕನ್ಸಿಸ್ಟೆನ್ಸಿ ಆಫ್ ಆಲ್ ರೆಲೆವೆಂಟ್ ಫ್ಯಾಕ್ಟ್ಸ್) ಸಂಗತಿಗಳಲ್ಲಿರುವ ಜಾಡು ಹಿಡಿದು ಅವುಗಳ ಒತ್ತಡಕ್ಕೆ ಒಳಪಟ್ಟು ಕಂಡುಹಿಡಿಯುವುದೇ ಅವನು ಸೂಚಿಸುವ ಸುಸಂಗತಿ. ನಮ್ಮಲ್ಲಿ ಸಂಗತಿ ಶಬ್ದವೇ ಈ ಸುಸಂಗತಿಯ ಅರ್ಥವನ್ನು ತಾನಾಗಿ ಒಳಗೊಂಡಿದೆ. ಸೌಂದರ್ಯ ವಿಷಯಕ್ಕೆ ಈ ತತ್ವವನ್ನು

ಅನ್ವಯಗೊಳಿಸುತ್ತ ಅವನು ಹೇಳಿದ್ದಾನೆ; ತೀರಾ ಸರಳವಾದ ಸೌಂದರ್ಯಾನುಭವವೆಂದರೆ ಆನಂದಭಾವ ಅಥವಾ ಏನೋ ಆನಂದದಾಯಕವಿರುವುದೆಂಬ ಭಾವ. ಅದು ಸಂಬದ್ಧ ಭಾವವಾಗಿದ್ದು (ರೆಲೆವೆಂಟ್ ಫೀಲಿಂಗ್) ಯಾವುದಾದರೊಂದು ವಿಷಯದ ಗುಣದೊಡನೆ ಸಹಿತವಾಗಿ ಸೇರಿಕೊಂಡಿರುತ್ತದೆ. ಸೌಂದರ್ಯವೃತ್ತಿಯೆಂದರೆ ವಸ್ತುವಿನಲ್ಲಿ ಒಂದು ಭಾವವು ಮೈದಾಳಿ ನೋಡಲು ಬರುವಂತೆ ಅದು ಸ್ಥಿರವಾಗಿ ನಿಲ್ಲುತ್ತದೆ, ಅದು ಸುಸಂಘಟಿವೂ ಮೂರ್ತವೂ ಆಗುತ್ತದೆ. ಇದರಿಂದ ಭಾವವು ಒಂದು ವಸ್ತುವಿನ ನಿಯಮಗಳಿಗೆ ಅಧೀನವಾಗುತ್ತದೆ. ಅದಕ್ಕೆ ಸ್ಥಿರತೆ, ಕ್ರಮ, ಸಾಮರಸ್ಯ, ಅರ್ಥ, ಮೂಲ್ಯ ಉಂಟಾಗುತ್ತದೆ. ಅಂತೇ ಭಾವದ ಅಥವಾ ಭಾವನೆಯ ಸಮಷ್ಟೀಕರಣದಲ್ಲಿ ಸೌಂದರ್ಯ ಮೂಲ್ಯವಿರುತ್ತದೆ ಎಂದು ಸಮಷ್ಟಿವಾದಿಗಳು ವ್ಯಾಖ್ಯಾನಿಸುತ್ತಾರೆ. ಇಲ್ಲಿ ಭಾವ ಅಥವಾ ಭಾವನೆಯೆಂದರೆ ಅನುಭವದ ಗುಣಾಂಶ ಸಂಬಂಧಿಯಾದದು, ವ್ಯಾವಹಾರಿಕ ಇಲ್ಲವೆ ತಾರ್ಕಿಕವಲ್ಲ. ಅದು ನಮಗಾಗುವ ನಲಿ–ನೋವುಗಳಿಗಿಂತ ಹೆಚ್ಚಿನದು. ಈ ಭಾವ–ಭಾವನೆಯ ಸಂಬಂಧಗಳೇನು ಎಂದು ಸಮಷ್ಟಿವಾದಿಯನ್ನು ಕೇಳಿದರೆ ಅವನು ಮರಳಿ ಕೇಳಬಹುದು: "ಕೆಲವು ನಲಿವನ್ನೀಯುವ ವಸ್ತುಗಳ ಹತ್ತಿರ ಬೇರೆ ಅಂಥ ವಸ್ತುಗಳು ಬಂದು ನಿಂತು ನಂಬಿಕೆಯನ್ನು ಉಂಟು ಮಾಡಬೇಕೆಂಬ ಭಾವನೆಯ ಒತ್ತಾಸೆ ನಿಮ್ಮಲ್ಲಿ ಜನಿಸಿಲ್ಲವೇ? ಕೈದೋಟದ ಏರ್ಪಾಡಿನಲ್ಲಿ, ಹೂಗಳ ಜೋಡಣೆಯಲ್ಲಿ, ಕೋಣೆಯ ಓರಣದಲ್ಲಿ, ಭಾಷಣ–ಸಂಭಾಷಣೆಗಳಲ್ಲಿ ಈ ಅನುಭವವು ನಿಮಗೆ ಬಂದಿಲ್ಲವೇ?" ಕೋಲರಿಜ್ಜನು ಭಾವ–ಭಾವನೆಗಳ ಸಂಬಂಧವನ್ನು ಕಲ್ಪಿಸುವ ಈ ಕ್ರಿಯೆಗೆ ಮೊದಲನೆಯ ಸಲ 'ನಿರ್ಮಾಣಶೀಲ ಪ್ರತಿಭೆ' (ಕ್ರಿಯೇಟೀವ್ ಇಮ್ಯಾಜಿನೇಷನ್) ಎಂದು ಹೆಸರಿಟ್ಟನು. ಇದನ್ನು ಮನದಂಡು ಸೌಂದರ್ಯ ಮೂಲ್ಯದ ಇನ್ನೊಂದು ಲಕ್ಷಣವು ಪ್ರತಿಭಾಯುಕ್ತ ಅಥವಾ ಕಲ್ಪನಾತ್ಮಕವಾದ ಸಮಷ್ಟೀಕರಣ ಎಂದು ಸಮಷ್ಟೀವಾದಿ ಹೇಳಿದರೆ ತಪ್ಪಿಲ್ಲ.

ಸಮಷ್ಟಿವಾದದ ಪ್ರಕಾರ ಸೌಂದರ್ಯ ಪ್ರಮಾಣಗಳನ್ನು ನೀಡುವ ಎರಡು ಗಾತ್ರ ವಿಶಿಷ್ಟವಾದ ಅಳತೆಗೋಲುಗಳಿರುತ್ತವೆ. ಒಂದು, ಸಮಷ್ಟೀಕರಣದ ಅಂಶವೆಂದರೆ, ಯಾವುದು ಸುಂದರ ಪದಾರ್ಥದಲ್ಲಿ ಭಾವ ಸಂಬಂಧಗಳು ಎಷ್ಟು ಪರಿಪೂರ್ಣವಾಗಿ ಸಮಷ್ಟೀಕರಣವಾಗಿರುತ್ತವೆ ಎಂಬುದರ ಪರಿಶೀಲನೆ. ತೀರ ಹೆಚ್ಚಿನ ಸಮಷ್ಟೀಕರಣದ ಅವಸ್ಥೆಯಲ್ಲಿ ವಸ್ತುವಿನ ಪ್ರತಿ ವಿವರವು ಇತರ ವಿವರಗಳನ್ನು ಅಪೇಕ್ಷಿಸುತ್ತದೆ ಮತ್ತು ಯಾವ ಭಾವನೆಯ ಅಗತ್ಯಗಳೂ ಈಡೇರದೆ ಉಳಿಯುವುದಿಲ್ಲ. ಅಥವಾ ಇಡಿಯದರ ಬೆಲೆಯನ್ನು ಹಾಳು ಮಾಡದೆ ಯಾವೊಂದು ವಿವರವನ್ನು ಬಿಟ್ಟುಕೊಡುವುದು ಅಥವಾ ಬದಲಿಸುವುದು ಅಸಾಧ್ಯ. ಇಂಥ ಇಡಿಯ ವಸ್ತು ಸಾವಯವ ಸಂಯೋಜನೆ ಅಥವಾ ಸಮಷ್ಟಿಯ ಏಕತೆಯಾಗಿರುತ್ತದೆ. ಅದರಿಂದ ಸಮಷ್ಟಿವಾದ ಎಂದು ಹೆಸರು ಬಂದಿತು. ಸಮಷ್ಟೀಕರಣದ ಅಂಶವೇ ಈ ತತ್ವದಲ್ಲಿ ಮೂಲ್ಯದ ಉತ್ಕಟವಾದ ಅಳತೆಗೋಲು ಎಂದೆನ್ನಬೇಕು. ಎರಡನೆಯದಾಗಿ, ಸೌಂದರ್ಯ ದೃಷ್ಟಿಯಿಂದ ದೊಡ್ಡದೆನಿಸಿಕೊಳ್ಳಬೇಕಾದರೆ, ಯಾವೊಂದು ಕೃತಿಯ ಆಕಾರವೇನೂ ಮುಖ್ಯವಲ್ಲ ಎಂದು ಹೇಳಬಹುದಾದರೂ, ಹೆಚ್ಚಿನ ಪ್ರಮಾಣದಲ್ಲಿ ಸೌಂದರ್ಯ ಸಾಮಗ್ರಿಯನ್ನು ಒಳಗೊಳ್ಳಲು ಬೃಹದಾಕಾರವು ಅವಶ್ಯವಾಗಿರುತ್ತದೆ. ನಾವು ಅತಿ ದೊಡ್ಡ ಕೃತಿಗಳೆಂದು ಹೇಳುತ್ತಿರುವ ಹೊತ್ತಗೆಗಳೆಲ್ಲ ಆಕಾರದಲ್ಲಿಯೂ ತುಂಬ ದೊಡ್ಡವಾಗಿರುತ್ತವೆ. ಕಥನ ವಾಙ್ಞಯದಲ್ಲಿ ಶ್ರೇಷ್ಠವಾದ ಬರವಣಿಗೆ ಸಣ್ಣಕತೆಗಳಿಗಿಂತ ಕಾದಂಬರಿಗಳಲ್ಲಿರುತ್ತದೆ. ಮಹಾಕಾವ್ಯ ಮತ್ತು ನಾಟಕಗಳಲ್ಲಿ ಸಾನೆಟ್ಟುಗಳಿಗಿಂತ ಶ್ರೇಷ್ಠ ಕಾವ್ಯವಿರುತ್ತದೆ. ಹೀಗೆ ಸೌಂದರ್ಯದ ಘನತೆಗೆ ಗಾತ್ರದ ಘನತೆ ಅವಶ್ಯಕವೆಂಬುದನ್ನು ಒಪ್ಪಬೇಕು. ಆದರೆ, ಸಮಗ್ರೀಕರಣದ ಅಂಶ ಹೆಚ್ಚಾಗಿದ್ದು ಸೌಂದರ್ಯ ಸಾಮಗ್ರಿ ಕಡಿಮೆಯಾಗಿರುವ ಕೃತಿ ಸಮಗ್ರೀಕರಣದ ಅಂಶ ವಿರಳವಾಗಿದ್ದು ಸೌಂದರ್ಯ ಸಾಮಗ್ರಿ ಹೆಚ್ಚಾಗಿರುವ ಕೃತಿಗಿಂತ ಮೂಲ್ಯದಲ್ಲಿ ಹಿರಿದಾಗುವುದು.

ಈಗ ಸೌಂದರ್ಯ ವಿಚಾರದಲ್ಲಿಯೆ ಸಮಷ್ಟಿ ತತ್ವದ ಕೆಲವು ಫಲಿತಾಂಶಗಳನ್ನು ಮೂರು ವಿಧದಲ್ಲಿ ಅರಿತುಕೊಳ್ಳೋಣ:

೧. ಸೌಂದರ್ಯ ಮೂಲ್ಯ ನಿರ್ಣಯದಲ್ಲಿ ವ್ಯಕ್ತಿ ನಿರಪೇಕ್ಷತೆಯ ಕಲ್ಪನೆ;

೨. ಸಂದರ್ಯ ಶೀಲ ವಿಮರ್ಶೆಯಲ್ಲಿ ಅದರ ಸಿದ್ಧಾಂತ;

೩. ಕುರೂಪದ ವಿಷಯದಲ್ಲಿ ಅದರ ವಿವರಣೆ.

೧. ತುಂಬಾ ಹೆಚ್ಚಾಗಿ ಸಮಗ್ರೀಕೃತವಾದ ಕಲಾಕೃತಿಯ ವಿಷಯದಲ್ಲಿ ಅಂತಿಮವಾದ ವ್ಯಕ್ತಿ ನಿರಪೇಕ್ಷವಾದ ಮೂಲ್ಯ ನಿರ್ಣಯಕ್ಕೆ ಸಮಷ್ಟಿ ತತ್ವವು ಸಮರ್ಥನೆಯನ್ನು ಕೊಡುತ್ತದೆ. ಇದಾಗಬೇಕಾದರೆ, ಸಂಗತಿಗಳ ಸಮಷ್ಟೀಕರಣವು ಹೆಚ್ಚಿನ ಪ್ರಮಾಣದಲ್ಲಿ ಆ ಕೃತಿಯಲ್ಲಿ ನಡೆದಿರಬೇಕು. ಮತ್ತು ಅದರ ಅರಿವು ವಿಮರ್ಶಕನಿಗೆ ಉಂಟಾಗಬೇಕು. ಈ ವಿಚಾರಧಾರೆಯ ಪರಿಣಾಮವೆಂದರೆ, ಸಮಷ್ಟಿ ವಿಮರ್ಶಕನು ಮಿಗಿಲಾಗಿ ಸಮಗ್ರತೆಯನ್ನು ಹೊಂದಿದ ಕೃತಿಯ ಬಗ್ಗೆ ತನ್ನ ತೀರ್ಮಾನಗಳನ್ನು ಗಟ್ಟಿಯಾಗಿ ಕೊಡಬಲ್ಲನು. ಅದೇ ಅಷ್ಟು ಸಮಗ್ರೀಕೃತವಾದ ಅಪಯಶಸ್ಸಿನ ವಿಷಯದಲ್ಲಿ ಅವನ ತೀರ್ಮಾನಗಳು ವ್ಯಕ್ತಿ ಸಾಪೇಕ್ಷ ಮತ್ತು ಸ್ವೇಚ್ಛಾನುಸಾರ ಆಗಿರುತ್ತವೆ. ಕಲಾ ನಿರ್ಮಿತಿಯ ಬಗ್ಗೆ ಸಮಷ್ಟೀಕಾರನ ದೃಷ್ಟಿ ಅದರ ವ್ಯಕ್ತಿ ನಿರಪೇಕ್ಷತೆಯ ಮತ್ತು ಅದರ ಮೂಲ್ಯ ನಿರ್ಣಯದ ಒಂದು ಭಾಗವಾಗಿರುತ್ತದೆ. ನಿರ್ಮಾಣಶೀಲ ಪ್ರತಿಭೆಯ ಕಾರ್ಯವೆಂದರೆ ಕಲಾ ನಿರ್ಮಿತಿ. ಸೌಂದರ್ಯ ನಿರ್ಮಾಣದ ಸಾಮಗ್ರಿಯಲ್ಲಿ ಭಾವನೆಯ ಬೇಡಿಕೆಗಳನ್ನು ನಿಷ್ಠೆಯಿಂದ ಅನುಸರಿಸುತ್ತಾ ಹೋಗುವುದೇ ಈ ಕಾರ್ಯ. ಇದರಿಂದ ಬೇರೆ ಸಾಮಗ್ರಿಗಳು ಬರಮಾಡಿಕೊಳ್ಳುವ ಹೊಸ ಸಾಮಗ್ರಿಗಳನ್ನು ಕೃತಿಯಲ್ಲಿ ತಂದು ಪೂರ್ತಿಯಾದ ಸಮಷ್ಟಿ ಸ್ಥಾಪಿತವಾಗುವವರೆಗೆ ಅವನ್ನು ಸೇರಿಸಿಕೊಳ್ಳುವುದು. ಆಮೇಲೆ ಆ ಕೃತಿ ತಾನೇ ಮುಕ್ತಾಯಕ್ಕೆ ಬಂದು ನಿಲ್ಲುತ್ತದೆ. ತನ್ನ ಕೃತಿಗೆ ತಾನೇ ಭಾಷ್ಯವಾಗುತ್ತದೆ. ವ್ಯಕ್ತಿ ನಿರಪೇಕ್ಷವೂ ಆಗುತ್ತದೆ. ವ್ಯಕ್ತಿ ನಿರಪೇಕ್ಷತೆಯೆಂದರೆ ಸಮಷ್ಟೀಕಾರನ ದೃಷ್ಟಿಯಲ್ಲಿ ಇಂಥ ಕೃತಿಯಲ್ಲಿಯ ಆಂತರಿಕ ನಿಯಂತ್ರಣ (ಇಂಟರ್ನಲ್

ಕಂಟ್ರೋಲ್) ಅಂದರೆ, ಇದರಲ್ಲಿಯ ಸಾಮಗ್ರಿಗಳು ತಂತಮ್ಮ ಆಂತರಿಕ ಸಂಬಂಧಗಳಲ್ಲಿ ಮಿಗಿಲಾದ ನಿಯಂತ್ರಣಕ್ಕೆ ಒಳಪಟ್ಟಿರುತ್ತವೆ. ಅಂತೇ ಕೃತಿಯ ಆಂತರ್ಯದಲ್ಲಿಯೇ ಅದರ ಸಂಬದ್ಧತೆಯ ಸಂತತ ಪರೀಕ್ಷಣವಿರುತ್ತದೆ.

೨. ಈ ಸೌಂದರ್ಯ ವಿಷಯಕವಾದ ವ್ಯಕ್ತಿ ನಿರಪೇಕ್ಷತೆಯ ಪರಿಣಾಮವಾಗಿ ಸಮಷ್ಟಿ ತತ್ವಸಂಬಂಧವಾದ ವಿಮರ್ಶೆಯ ಸಿದ್ಧಾಂತವೊಂದು ಹೊರಪಡುತ್ತದೆ. ಕಲಾವಿದನು ನಿರ್ಮಿಸುವುದನ್ನು ವಿಮರ್ಶಕನು ತನ್ನ ಮೂಲ್ಯಮಾಪನದ ಪ್ರಕ್ರಿಯೆಯಲ್ಲಿ ಪುನಃ ನಿರ್ಮಿಸುತ್ತಾನೆ. ಅದು ಹೇಗೆಂದರೆ, ಸಾಮಗ್ರಿಗಳ ಭಾವನಾತ್ಮಕ ಅಗತ್ಯಗಳನ್ನು ಅನುಸರಿಸುತ್ತ, ಅವುಗಳ ಸಾಧ್ಯತೆಗಳನ್ನು ಅರಿಯುತ್ತ, ಅವು ಪಡೆಯುವ ಪೂರ್ಣತೆಗಳಿಂದ ಆನಂದಪಡುತ್ತ ಸಾವಯುವ ಸಮಷ್ಟಿ ರಚನೆ ರೂಪುಗೊಳ್ಳುವುದನ್ನು ನೋಡಿ ಉದ್ರೇಕಗೊಳ್ಳುತ್ತ ವಿಮರ್ಶಕನು ಕಲಾಕೃತಿಯ ಪೂರ್ಣದರ್ಶನವನ್ನು ಪಡೆಯುತ್ತಾನೆ. ಇದು ಕಲಾವಿದನ ನಿರ್ಮಾಣಕ್ರಿಯೆಯ ಪುನರ್‌ನಿರ್ಮಾಣ ಕ್ರಿಯೆಯೇ ಆಗುತ್ತದೆ. ಈ ಪ್ರಕ್ರಿಯೆಯಲ್ಲಿ ಒಮ್ಮೊಮ್ಮೆ ಕಲಾವಿದನು ತನ್ನ ನಿರ್ಮಿತಿ ಕಾರ್ಯದಲ್ಲಿ ಹಿಡಿದ ದಾರಿ, ವಿಮರ್ಶಕನು ಕಾಣುವ ದಾರಿ ಬೇರೆಯಾಗಿ ಒಂದು ಬಗೆಯ ಅಡತಡೆ ಉಂಟಾಗಬಹುದು. ಆಗ ಅವನು 'ಹೀಗಿದ್ದರೆ ಚೆನ್ನಾಗಿತ್ತು, ನಾನು ಹೀಗೆ ನಿರ್ಮಿಸುತ್ತಿದ್ದೆ' ಎಂದು ವೈಯುಕ್ತಿಕವಾದ ಅನಿಸಿಕೆಯನ್ನು ಹೇಳಿ ಮುಗಿಸದೆ ಅದರ ವಿಶ್ಲೇಷಣೆಯನ್ನು ಮಾಡಲು ಹೊರಡುತ್ತಾನೆ. ಸಾಮಗ್ರಿಗಳ ಆಂತರಿಕ ಸಂಬಂಧವನ್ನು ಮನಗಂಡು ಯಾರ ದಾರಿ ಸರಿ ಎಂಬುದನ್ನು ನಿರ್ವಿಕಾರವಾಗಿ ನಿರ್ಣಯಿಸುತ್ತಾನೆ. ಇದೇ ವ್ಯಕ್ತಿನಿರಪೇಕ್ಷತೆಯ ಪರಿಣಾಮವನ್ನು ಸಫಲಗೊಳಿಸುವ ವಿಮರ್ಶೆಯ ಸಿದ್ಧಾಂತ.

೩. ಮೂರನೆಯದಾಗಿ, ಕುರೂಪ ವಿಚಾರ. ಬೊಸಾಂಕೆ ತನ್ನ ಕೊನೆಯ ಒಂದು ಉಪನ್ಯಾಸವನ್ನು ಇಡಿಯಾಗಿ ಇದಕ್ಕೆ ಮೀಸಲಾಗಿಸಿದ್ದಾನೆ. ಮೊದಲು, ಭಾವನೆಯು ಸಮಗ್ರೀಕರಣವಾಗದೆ ಇರುವ ಪದಾರ್ಥಗಳೆಲ್ಲ ಕುರೂಪವಲ್ಲ. ಅವು ಅಭಾವರೂಪದ ಸೌಂದರ್ಯ ಮೂಲ್ಯಗಳೂ ಅಲ್ಲ. ಆಮೇಲೆ ತಮ್ಮಲ್ಲಿರುವ ಭಾವನೆಯ ಸಮಗ್ರೀಕರಣದ ಸಾಧ್ಯತೆಯನ್ನು ನೆರವೇರಿಸಲಾರದ ಪದಾರ್ಥಗಳೂ ಅಭಾವರೂಪದ ಸಂಚರ್ಯಮೂಲ್ಯಗಳಲ್ಲ. ಒಮ್ಮೊಮ್ಮೆ ಆದರ್ಶವಾದ ಪರಿಣತಿಯ ಅರಿವು ಮತ್ತು ಅದರ ಆಂಶಿಕವಾದ ಅರಿವು ಇವುಗಳ ನಡುವಿನ ವಿರೋಧದಿಂದ ಅಭಾವರೂಪದ ಸೌಂದರ್ಯಮೂಲ್ಯ ಕಾಣಬಹುದು. ಇಂಥಲ್ಲಿ ಆಯಾ ಕೃತಿಯ ಜಟಿಲ ಸ್ವರೂಪಮತ್ತು ವ್ಯಾಪ್ತಿಯನ್ನು ವಿಮರ್ಶಕನು ಗ್ರಹಿಸದೆ ಇರುವುದಿರಿಂದ ಅಂಥ ಅನುಭವ ಬರಬಹುದು. ಮೂರನೆಯ ಅಂಶವೆಂದರೆ, ಕಲಾಕೃತಿ ಸಂಪೂರ್ಣವಾದ ಸಮಗ್ರೀಕರಣವನ್ನು ಪಡೆಯದಿರುವಾಗ ಅದು ಕುರೂಪವಾಗುತ್ತದೆ. ಬೊಸಾಂಕೆ ಅಜೇಯವಾದ ಕುರೂಪ (ಇನ್‌ವಿಸಿಬಲ್ ಅಗ್ಲಿನೆಸ್) ಎಂದಿದನ್ನು ಕರೆದಿರುವುದರಲ್ಲಿ ಒಂದು ಬಗೆಯ ಗೊಂದಲಕ್ಕೆ ಒಳಗಾಗಿದ್ದಾನೆ. ಅವನು ಕಲಾವಿದರ ಇಂಥ ನಿರ್ಮಿತಿ ಅವನ ದೌರ್ಬಲ್ಯದ ಮೂಲಕ ಎಂದು ಹೇಳಬೇಕಾಗಿತ್ತು, ಅದೇ ಬಗೆಯ ಸಾಮಗ್ರಿಯಿಂದ ಬೇರೊಬ್ಬ ಕಲಾವಿದನು ಸಂಪೂರ್ಣ ಸಮಷ್ಟಿಯನ್ನು ಸಾಧಿಸಬಹುದು. ಆದ್ದರಿಂದ ಅದು, 'ಅಜೇಯ ಕುರೂಪ'ವಾಗಲಾರದು. ನಾಲ್ಕನೆಯ ಅಂಶವೆಂದರೆ, ಸಮಗ್ರೀಕರಣದ ತೀರ ಹತ್ತಿರ ಬಂದಿರುವ ಸಮರ್ಥ ಕಲಾವಿದನು ಒಮ್ಮೆ ಜನಪ್ರಿಯತೆ, ಪ್ರಚಾರ, ಆರ್ಥಿಕ ಲೋಭ, ಕೀರ್ತಿಯ ಆಸೆ ಮುಂತಾದ ಕಾರಣಗಳಿಂದ ಬೇರೆ ದಿಕ್ಕಿಗೆ ತನ್ನ ಕೃತಿಯನ್ನು ತಿರುವಿಬಿಡುತ್ತಾನೆ. ಇದರಿಂದ ಸಮಗ್ರೀಕರಣಕ್ಕೆ ಬಾಧೆಯುಂಟಾಗುವುದಲ್ಲದೆ ಅವನ ಸಮಗ್ರಶೀಲಕ್ಕೂ (ಇಂಟಿಗ್ರಿಟಿ) ಅಪಾಯ ತಟ್ಟುತ್ತದೆ. ಇಲ್ಲಿ ಕುರೂಪದ ಬೇರುಗಳೇ ಇವೆಯೆಂದು ಬೊಸಾಂಕೆ ಹೇಳಿದ್ದಾನೆ. ಇದನ್ನು 'ಅಜೇಯ ಕುರೂಪ'ವೆನ್ನಬಹುದು. ಇಲ್ಲಿ ಸಮಗ್ರೀಕರಣದ ಅಸಾಧ್ಯತೆ ಇಲ್ಲ, ಹೇತುಪೂರ್ವಕವಾದ ಅಸಮಗ್ರತೆ ಇದೆ. ಕರಣವನ್ನು ಸಾಧಿಸುವುದು ಇಲ್ಲವೆ ಅದಕ್ಕೆ ತೀರ ಹತ್ತಿರ ಬರುವುದು ಯಾವುದೋ ಅದೇ ಹಿರಿದಾದ ಸೌಂದರ್ಯ ಮೂಲ್ಯವುಳ್ಳ ಕಲಾಕೃತಿ. ಇಂಥ ಸಾಧನೆಯ ಜಾಡನ್ನು ಹಿಡಿದು ಹೋಗುವುದು ಮತ್ತು ದಾರಿಯಲ್ಲಿ ಪ್ರಶ್ನೆಗಳಿಗೆ ಆಸ್ಪದ ಕೊಡುವ ಬಿರುಕುಗಳನ್ನು ಗುರುತಿಸುವಹುದು ಅಂದರೇ ವಿಮರ್ಶೆ. ರಸಗ್ರಹಣವೆಂದರೂ ಅದೇ; ಆ ದಾರಿಯಲ್ಲಿ ಸ್ವಲ್ಪ ಸಾಧನೆಯಿಂದ ದೊರಕುವ ಸಮಾಧಾನ ಮತ್ತು ಪೂರ್ತಿಯಾಗಿರುವ ಸಮಷ್ಟಿ ರಚನೆಯಿಂದ ದೊರೆಯುವ ಗೆಲುವು. ಈ ಕಲ್ಪನಾತ್ಮಕ ಚಟುವಟಿಕೆಯಲ್ಲಿ ಕಲಾವಿದ, ಸಾಮಾನ್ಯ ಪ್ರೇಕ್ಷಕ ಮತ್ತು ವಿಮರ್ಶಕ ಎಲ್ಲರೂ ಸಮಾನರು, ಸಹಪ್ರವಾಸಿಗಳು; ಕಲಾವಿದನು ಅವರ ಪ್ರವಾಸದಲ್ಲಿ ಅವರಿಗೆ ಮಾರ್ಗದರ್ಶಕನಾಗಿರುತ್ತಾನೆ. ಕುರೂಪವಾಗಲಿ ಅಭಾವರೂಪದ ಸೌಂದರ್ಯಮೂಲ್ಯವಾಗಲಿ ದಾರಿಯಲ್ಲಿ ಅಡ್ಡಬರುವ ಅಡತಡೆಗಳಿಂದ ಉಂಟಾಗುತ್ತದೆ. ಅದಕ್ಕೆ ಕಾರಣ ಮಾರ್ಗದರ್ಶಕನತ್ತ ಇತರ ಪ್ರವಾಸಿಗಳ ಲಕ್ಷ್ಯವಿರದೆ ಇರುವುದಾಗಿರಬಹುದು, ದಾರಿಯನ್ನು ಸರಿಗೊಳಿಸಲು ಮಾರ್ಗದರ್ಶಿಗೆ ಯಶಸ್ಸು ಬಾರದೆ ಇರುವುದಾಗಿರಬಹುದು. ಆದರೆ, ಅಜೇಯವಾದ ಕುರೂಪವು ಮಾತ್ರ ಮಾರ್ಗದರ್ಶಿಯಾದವನು ತನ್ನ ಅನುಯಾಯಿಗಳನ್ನು ವಂಚಿಸಿ ಅಡ್ಡದಾರಿಗೆ ಎಳೆದಾಗ ಉಂಟಾಗುತ್ತದೆ.

ಈವರೆಗೆ ಸಮಷ್ಟಿ ವಿಮರ್ಶೆಯ ಒಂದು ವಿಶೇಷಾರ್ಥವನ್ನು ಸ್ಟೀಫ್ನ್ ಸಿ ಪೆಪ್ಪರ್ ಅವರ (ದಿ ಬೇಸಿಸ್ ಆಫ್ ಕ್ರಿಟಿಸಿಸಂ ಇನ್ ದಿ ಆರ್ಟ್ಸ್, ೧೯೪೬) ಎಂಬ ಪುಸ್ತಕದಲ್ಲಿಯ 'ಆರ್ಗ್ಯಾನಿಕ್ ಕ್ರಿಟಿಸಿಸಂ' ಪ್ರಕಟರಣದಿಂದ ಸಂಗ್ರಹಿಸಲಾಯಿತು. ಸಮಷ್ಟಿ ವಿಮರ್ಶೆಗೆ ಮೂಲಾಧಾರವಾಗಿ ವ್ಯಕ್ತಿ ನಿರಪೇಕ್ಷ ಧ್ಯೇಯವಾದವೆಂಬ ವೈಚಾರಿಕ ಭೂಮಿಕೆಯಿದೆ. ಅದೇ ಸಮಷ್ಟೀ ತತ್ವವೆಂದು ಕರೆಯಲಾಗಿದೆ. ತತ್ವಜ್ಞಾನದ ಕ್ಷೇತ್ರದಲ್ಲಿ ವ್ಯಕ್ತಿ ನಿರಪೇಕ್ಷತೆ (ಆಬ್ಜೆಕ್ಟಿವಿಟಿ) ಇವುಗಳ ಬಗ್ಗೆ ವಾದ–ವಿವಾದಗಳು ಸಾಕಷ್ಟು ನಡೆದಿವೆ. ಸತ್ಯ ವ್ಯಕ್ತಿ–ನಿರಪೇಕ್ಷ ಎಂದು ಸಾಧಿಸುವ ಪಕ್ಷವಿದ್ದರೆ ಅದು ವ್ಯಕ್ತಿ–ಸಾಪೇಕ್ಷ ಎಂಬುದು ವಾದಿಸುವ ಪಕ್ಷವೂ ಇದೆ. ಸಾಹಿತ್ಯ ಮತ್ತು ವಿಮರ್ಶೆಯ ಕ್ಷೇತ್ರದಲ್ಲಿಯೂ ಈ ವಾದಗಳ ಪ್ರವೇಶವಾಗಿದೆ. ನಮ್ಮ ದೃಷ್ಟಿಯಲ್ಲಿ ಯಾವೊಂದು ವಾದದ ಪಟ್ಟು ಹಿಡಿತ ಅಥವಾ ಅತಿರೇಕದ ಭೂಮಿಕೆಯಿಂದ

ವಿತಂಡವಾದಗಳೂ ವ್ಯರ್ಥ ಚರ್ಚೆಗಳೂ ತಲೆದೋರುತ್ತವೆ. ಸಾಹಿತ್ಯ ನಿರ್ಮಿತಿಯಲ್ಲಿ ಮತ್ತು ವಿಮರ್ಶನ ಕಾರ್ಯದಲ್ಲಿ ವ್ಯಕ್ತಿವಿಶಿಷ್ಟವಾದ ಜೀವನಾನುಭವಕ್ಕೆ ಮತ್ತು ರಸಾನುಭವಕ್ಕೆ ಹೆಚ್ಚಿನ ಮಹತ್ವವಿರುತ್ತದೆ. ಆದ್ದರಿಂದ, ಪೂರ್ತಿಯಾಗಿ ವ್ಯಕ್ತಿ ನಿರಪೇಕ್ಷವಾದ ನಿರ್ಮಿತಿಯಾಗಲಿ ವಿಮರ್ಶೆಯಾಗಲಿ ಇರಲಾರದು. ಆದರೆ, ವ್ಯಕ್ತಿ ಸಾಪೇಕ್ಷವಾದ ಈ ಎರಡೂ ಆವಿಷ್ಕಾರಗಳು ಸಾಮಾನ್ಯವಾದ ಕೆಲವು ಸೌಂದರ್ಯ ಸೂತ್ರಗಳಿಗೆ ಒಳಪಟ್ಟು ತಂತಮ್ಮ ಸ್ವಂತಿಕೆಯ ವೈವಿಧ್ಯವನ್ನು ಪಡೆಯುತ್ತವೆ. ಅದರೆ, ವ್ಯಕ್ತಿ ನಿರಪೇಕ್ಷವೆಂದು ವಿಶಾಲವಾಗಿ ಹೇಳಬಹುದಾದ ಶಾಶ್ವತಮೂಲ್ಯಗಳ ತಳಹದಿಯ ಮೇಲೆ ವ್ಯಕ್ತಿ ಸಾಪೇಕ್ಷವಾದ ವಿವಿಧ ಅಭಿವ್ಯಕ್ತಿಗಳಾಗುತ್ತವೆ. ಪದಾರ್ಥಗಳ ಆಂತರಿಕ ಸಂಬದ್ಧತೆ ಅಥವಾ ಸುಸಂಗತಿ ಇರುವುದೇ ಸಮಷ್ಟಿ ತತ್ವ ಎಂಬುದನ್ನು ಮೇಲೆ ಹೇಳಿದ ಮಾತಿನ ಹಿನ್ನೆಲೆಯಲ್ಲಿ ಒಪ್ಪಬಹುದು. ಯಾವುದೇ ಕಲಾಕೃತಿಯ ಸೌಂದರ್ಯವು ನಿರ್ಮಿತಿ ಮತ್ತು ಸಮೀಕ್ಷೆಯಲ್ಲಿ ಕೇವಲ ವ್ಯಕ್ತಿಸಾಪೇಕ್ಷವಾದರೆ ಮೂಲ್ಯಮಾಪನಕ್ಕೆ ಪ್ರಮಾಣಗಳೇ ಇಲ್ಲದಂತಾಗಿ ಚರ್ಚೆಗೆ ಅವಕಾಶವುಳಿಯುವುದಿಲ್ಲ. ಹೀಗೆಂದು ಅದು ತೀರ ವ್ಯಕ್ತಿ ನಿರಪೇಕ್ಷವಾಗಿ ಕಟ್ಟುನಿಟ್ಟಾದರೆ ವ್ಯಕ್ತಿ ವಿಶಿಷ್ಟವಾದ ಅಭಿವ್ಯಕ್ತಿಗಳಿಗೆ ಆಸ್ಪದವೇ ದೊರೆಯಲಾರದು. ತಾತ್ಪರ್ಯವೆಂದರೆ, ಕಲಾಕೃತಿಯಲ್ಲಿ ಆಂತರಿಕ ತತ್ವವಿರುವುದೆಂದು ಒಪ್ಪಿಯೂ ಸಾಹಿತ್ಯ ದೃಷ್ಟಿಯಲ್ಲಿ ಮತ್ತು ಸಮೀಕ್ಷೆಯಲ್ಲಿ ಭಿನ್ನವಾಗಿರುವ ಸಾಧ್ಯತೆಯಿರುವುದೆಂದು ಗ್ರಹಿಸಬೇಕು. ಭಾವನೆಯ ಅಥವಾ ಕಲ್ಪನೆಯ ಸಮಷ್ಟೀಕರಣ ಎಂದು ಬೊಸಾಂಕೆ ಮತ್ತು ಕೋಲರಿಜ್ ಹೇಳಿರುವುದರಲ್ಲಿ ಈ ವ್ಯಕ್ತಿವೈವಿಧ್ಯ ಸೂಚಿತವಾಗುತ್ತದೆ. ಯಾಕೆಂದರೆ, ಸುಸಂಗತಿಯ ನಿರ್ಮಾಣ ಮಾಡುವ ಕಲಾವಿದ ಹಾಗೂ ಅದನ್ನು ಕಂಡುಹಿಡಿಯುವ ವಿಮರ್ಶಕನ ಭಾವನೆ ಅಥವಾ ಕಲ್ಪನೆ ಕಣ್ಣು ಕಟ್ಟಿದ ಕುದುರೆಯಂತೆ ಒಂದೇ ದಾರಿಯಲ್ಲಿ ಹೋಗಲಾರದು. ಇಂಥ ಸುಸಂಗತಿ ಒಂದು ಗಣಿತ ಪ್ರಮೇಯದ ನಿಶ್ಚಿತ ಕ್ರಮದಿಂದ ಸಾಗಲಾರದು. ಸೌಂದರ್ಯ ಅನಂತರೂಪಿ, ಅದರಲ್ಲಿಯ ಸುಸಂಗತಿ ಇಲ್ಲವೆ ಸಮಷ್ಟಿಯೂ ಕೂಡ ಅನೇಕ ವಿಧ.

ಸಮಷ್ಟಿತತ್ವದ ಮೂರು ಫಲಿತಾಂಶಗಳನ್ನು ಪರೀಕ್ಷಿಸಲಾಗಿ ಅವುಗಳಲ್ಲಿ ವ್ಯಕ್ತಿ ನಿರಪೇಕ್ಷತೆಯ ಮೇಲೆ ಪೂರ್ತಿ ಅವಧಾರಣೆ ತಾತ್ವಿಕ ಪಕ್ಷಪಾತದತ್ತ ಎಳೆಯುವುದೇ ಹೊರತು, ಮೂಲ್ಯನಿರ್ಣಯದ ಸಮತೂಕಕ್ಕೆ ಸಹಾಯಕವಾಗುವುದಿಲ್ಲ. ಹೆಚ್ಚಾಗಿ ಸಮಗ್ರೀಕೃತವಾದ ಕಲಾಕೃತಿಯ ವಿಷಯದಲ್ಲಾಗಲಿ ಸಮಗ್ರೀಕೃತವಾಗದ ವಿಷಯದಲ್ಲಾಗಲಿ ವ್ಯಕ್ತಿ ನಿರಪೇಕ್ಷವಾದ ಮೂಲ್ಯನಿರ್ಣಯಕ್ಕೆ ಸಮಷ್ಟಿ ತತ್ವವು ಸಮರ್ಥನೆಯನ್ನು ಕೊಡಬಲ್ಲುದು. ಆದರೆ, ಹಿಂದೆ ವಿವರಿಸಿದಂತೆ ಕಟ್ಟುನಿಟ್ಟಿನ ಸಂಕೋಲೆ ಅದಕ್ಕಿರಕೂಡದು. ಕೃತಿಯ ಯಶಸ್ಸನ್ನು ಸಮಷ್ಟಿತತ್ವವು ಸಮರ್ಥಿಸಬಹುದಾದರೆ ಅದರ ಅಪಯಶಸ್ಸನ್ನು ಅದು ವಿವೇಚಿಸಲಾರದೇಕೆ? ಒಂದರಲ್ಲಿ ಅದು ವ್ಯಕ್ತಿನಿರಪೇಕ್ಷವಾದರೆ ಇನ್ನೊಂದರಲ್ಲಿ ವ್ಯಕ್ತಿ ಸಾಪೇಕ್ಷವೆಂದೇಕೆ ಹೇಳಬೇಕು? 'ಸ್ವೇಚ್ಛಾನುಸಾರ' ಎಂಬುದರ ಅಪಾಯ ಎರಡೂ ಸಂದರ್ಭಗಳಲ್ಲಿ ಇರಬಹುದು. ಸೌಂದರ್ಯಶೀಲ ವಿಮರ್ಶೆ ಪುನನಿರ್ಮಾಣಶೀಲವೆಂಬ ಸಿದ್ಧಾಂತವು ವ್ಯಕ್ತಿ ನಿರಪೇಕ್ಷತೆಯ ಹಟವನ್ನುಳಿದರೆ ಮತ್ತು ಸಾಕಷ್ಟು ನಮನಶೀಲವಾದರೆ ಸರಿಯಾಗಿದೆ ಎನ್ನಬಹುದು. ಸಾಹಿತ್ಯ ಸಮೀಕ್ಷೆಯಲ್ಲಿ ಅವಶ್ಯ ಅಂಗಗಳಾದ ವಿಶ್ಲೇಷಣೆ ಮತ್ತು ಉನ್ಮೀಲನಗಳು ಸಾಮಾನ್ಯ ತತ್ವಗಳ ಪರಿಮಿತಿಯಲ್ಲಿ ವ್ಯಕ್ತಿ ವ್ಯಕ್ತಿಗೆ ಬೇರೆಯಾಗಬಹುದು. ಒಂದೇ ಆದಾಗ ಕೂಡ ಅವುಗಳ ಅಭಿವ್ಯಕ್ತಿ ಬೇರೆಯಾಗಬಹುದು.

ಕುರೂಪ ವಿಚಾರದಲ್ಲಿ ಪೆಪ್ಪರ್ ಅವರು ಮಾಡಿರುವ ಬೊಸಾಂಕೆಯ ಅಭಿಪ್ರಾಯ ವಿಮರ್ಶೆ ಮನನೀಯವಾಗಿದೆ. ಸಮಗ್ರಿಕರಣದಲ್ಲಿಯೆ ಅರಕೆ ಅಜೇಯವಾದ ಕುರೂಪವಲ್ಲವೆಂಬುದು ನಿಜ. ಆದರೆ, ಪರಿಪೂರ್ಣ ಸಮಗ್ರೀಕರಣವು ಎಂಥ ಶ್ರೇಷ್ಠ ಕೃತಿಯಲ್ಲಿಯೂ ದೊರೆಯದೆ ಹೋಗಬಹುದು. ಆಗ ಅದು ಅಜೇಯವಾದ ಕುರೂಪವಲ್ಲ ಎಂದು ಹೇಳಿದ ಮೇಲೆ ಅದರಿಂದ ಅದರ ಶ್ರೇಷ್ಠತೆಗೆ ಹೆಚ್ಚಿನ ಬಾಧೆಯುಂತಾಗುತ್ತದೆ. ಇದು ವ್ಯಕ್ತಿ ನಿರಪೇಕ್ಷ ಪ್ರಾಮಾಣ್ಯ ರೀತಿಯ ತರ್ಕಕ್ಕೆ ಸರಿ ಕಂಡರೂ ಹಾಗೆ ಪ್ರತ್ಯಕ್ಷವಾಗಿ ತೀರ್ಮಾನಿಸುವುದು ಕಷ್ಟವಾಗುತ್ತದೆ. ಯಾಕೆಂದರೆ, ನಿರ್ಮಿತಿಯ ಸಕಲ ಶಕ್ತಿಗಳು ಉನ್ನತ ಮಟ್ಟದಲ್ಲಿ ಸಾಫಲ್ಯವನ್ನು ಪಡೆದಿರುವಾಗ ಸಮಗ್ರೀಕರಣದ ಕೊರತೆಯೊಂದರಿಂದಲೇ ಕೃತಿಯ ಬೆಲೆಯನ್ನು ಇಳಿಸಹೋದರೆ ಅದಕ್ಕೆ ಅನ್ಯಾಯವಾದೀತು. ಅಜೇಯವಾದ ಕುರೂಪವೆಂದರೆ, ಬುದ್ಧಿಪೂರ್ವಕವಾದ ಸಮಗ್ರೀಕರಣದ ಕೊರತೆ ಎಂಬ ಅಭಿಪ್ರಾಯವೂ ಬಂದಿದೆ. ಆದರೆ, ಬುದ್ಧಿಪೂರ್ವಕವಾದ ಪ್ರಯತ್ನದಿಂದ ಕುರೂಪವನ್ನು ತರಲು ಬರುವಂತೆ ಕಳೆಯಲೂ ಬರುತ್ತದೆಂದ ಮೇಲೆ ಅದರ ಅಜೇಯತೆ ಎಲ್ಲಿದೆ ಎಂದು ಕೇಳಬೇಕಾಗುತ್ತದೆ. ಮನುಷ್ಯನ ಕೀರ್ತಿಕಾಮನೆ, ಲಾಭ–ಲೋಭಗಳು ಸಹಜ ಮತ್ತು ಮೀರಲು ಕಷ್ಟ ಎನ್ನಬಹುದಾದರೂ ಅವನ್ನು ಅಜೇಯ ಎಂದು ಹೇಳುವುದಾದರೆ ನಿರ್ಮಿತಿಯ ಏಕಾಗ್ರತೆಯಲ್ಲಿ ನಮಗೆ ನಂಬಿಕೆಯಿಲ್ಲವೆಂದು ಹೇಳಿದಂತಾಗುತ್ತದೆ.

ಹಳೆಯ ಕನ್ನಡ ಕಾವ್ಯಗಳ ವಿಮರ್ಶೆಯಲ್ಲಿ ಸಮಷ್ಟಿ ವಿಮರ್ಶೆಯ ಸಮಗ್ರೀಕರಣ ವಿಚಾರವು ಆಗಾಗ ಬಂದಿದೆ. ಆದರೆ, ಪೆಪ್ಪರ್ ಅವರು ವಿವರಿಸಿರುವ ಅತ್ಯಂತ ವ್ಯಕ್ತಿ ನಿರಪೇಕ್ಷ ರೀತಿಯಲ್ಲಿ ಅಲ್ಲ. ಯಾವುದೇ ಕಾವ್ಯದಲ್ಲಿ ಕಥಾವಸ್ತುವಿನ ಸುಸಂಗತಿಯೆಷ್ಟು, ಪಾತ್ರ ಸುಸಂಗತಿಯೆಷ್ಟು' ವರ್ಣನೆಗಳ ಸುಸಂಗತಿಯೆಷ್ಟು ಎಂಬುದನ್ನು ಚರ್ಚಿಸಿ ತೀರ್ಮಾನಿಸಿದಾಗಲೆಲ್ಲಾ ಸಮಷ್ಟಿ ವಿಮರ್ಶೆ ತಲೆದೋರುತ್ತದೆ. ಪಂಪಭಾರತದ ಕಥಾವಸ್ತುವಿನಲ್ಲಿ ದ್ರೌಪದಿಯ ಪಂಚಪತಿತ್ವವನ್ನು ತೆಗೆದುಹಾಕಿ ಅವಳಿಗೆ ಪತಿಯೊಬ್ಬನೇ, ಅವನು ಅರ್ಜುನನು ಎಂಬ ಮಾರ್ಪಾಟನ್ನು ಪಂಪನು ಮಾಡಿಕೊಂಡನು. ಆದರೆ, ಅದರ ಸಂಭಾವ್ಯ ಪರಿಣಾಮಗಳನ್ನು ಗಮನದಲ್ಲಿರಿಸಿಕೊಂಡು ಇತರ ವ್ಯತ್ಯಾಸಗಳನ್ನು ಅವನು ಮಾಡಲಿಲ್ಲ. ಹೀಗಾಗಿ ಕಥನ ಸುಸಂಗತಿಗೆ ಬಾಧೆಯುಂಟಾಯಿತು. ಅಂದರೆ, ಕಥನ ವಿಸಂಗತಿಯ ಮೂಲಕ ಸಮಗ್ರೀಕರಣದಲ್ಲಿ ಕೊರತೆ ತಲೆದೋರಿತು ಎಂಬ ಮಾತನ್ನು ವಿಮರ್ಶಕರು ಎತ್ತಿ ತೋರಿಸಿದ್ದಾರೆ. ಜೊತೆಗೆ ದುರ್ಯೋಧನ, ಕರ್ಣ ಈ ಪಾತ್ರಗಳ ಚಿತ್ರಣದಲ್ಲಿ ಸಮಷ್ಟಿ ತತ್ವಕ್ಕೆ ಬಾಧೆಬಾರದೆ ಇದ್ದರೂ ಹೊಂದಿಕೆ

ಕಡಿಮೆಯಾಗಿ ಪಾತ್ರ ಸುಸಂಗತಿ ಸ್ಪಷ್ಟವಾಗಿ ಮೂಡಿತೋರಿಲ್ಲ ಎಂದೂ ಪ್ರತೀತಿ ಉಂಟಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಮಗ್ರೀಕರಣದ ಈ ಕೊರತೆಯಿಂದ ಮೂಲ್ಯನಿರ್ಣಯದ ಮೇಲೆ ಪರಿಣಾಮವಾಗುವುದೇ ಎಂಬುದು. ಸಮಗ್ರೀಕರಣವೆಷ್ಟು ಪರಿಪೂರ್ಣವೋ ಅಷ್ಟು ಒಂದು ಕಲಾಕೃತಿಯ ಮೂಲ್ಯ ಹಿರಿದು ಎಂಬ ಸಾಮಾನ್ಯ ಸಿದ್ಧಾಂತವು ತರ್ಕಕ್ಕೆ ಸರಿಹೋದರೂ ಪ್ರತ್ಯಕ್ಷ ರಸಾನುಭವನದಲ್ಲಿ ಸಮಗ್ರೀಕರಣದ ಅಪರಿಪೂರ್ಣತೆಯಲ್ಲಿಯೂ ಕಲಾಕೃತಿಯ ಮೂಲ್ಯ ಹಿರಿದೆಂದು ಇತರ ಪ್ರತಿಭಾಸಿದ್ಧಿಗಳ ಮೂಲಕ ತಜ್ಞ ಸಹೃದಯನಿಗೆ ತೋರಬಹುದು. ಪಂಪಭಾರತವು ಮಾರ್ಗಕಾವ್ಯದ ಕನ್ನಡ ಪರಂಪರೆಯಲ್ಲಿ ಒಂದು ಉನ್ನತ ಶಿಖರವೆಂದು ವಿಮರ್ಶಕರು ಒಪ್ಪಿಕೊಂಡ ತೀರ್ಮಾನವಾಗಿದೆ. ಇದರಂತೆ ಗದಾಯುದ್ಧದಲ್ಲಿ 'ದುರ್ಯೋಧನನು ಮಹಾನುಭಾವನೇ?' ಎಂಬ ವಿಷಯವು ಸಾಕಷ್ಟು ಚರ್ಚೆಯಾಗಿ ಭಿನ್ನ ಭಿನ್ನ ಅಭಿಪ್ರಾಯಗಳಿಗೆ ಅವಕಾಶ ಕೊಟ್ಟಿದೆ. ಒಂದು ಕ್ಷಣ ಲೋಪವುಂಟಾಗಿದೆ ಎಂದರೂ ಕೂಡ ರನ್ನನ ಕೃತಿರತ್ನದ ಬೆಲೆ ಇಳಿಯಬೇಕಾಗಿಲ್ಲ. ಆದ್ದರಿಂದ, ಕಟ್ಟುನಿಟ್ಟಾದ ವ್ಯಕ್ತಿ ನಿರಪೇಕ್ಷವಾದ ಸಮಷ್ಟಿ ವಿಮರ್ಶೆ ನ್ಯಾಯವಾದ ಮೂಲ್ಯಮಾಪನಕ್ಕೆ ಸಹಾಯಕಾರಿಯಾಗಲಾರದು. ಇತ್ತೀಚೆಗೆ ಭರತೇಶ ವೈಭವದ ಭರತೇಶ್ವರ ಪಾತ್ರದಲ್ಲಿ ಯೋಗ ಭೋಗದ ತೊಡಕನ್ನು ಅಂದರೆ, ಪಾತ್ರ ವಿಚಾರದಲ್ಲಿ ಸಮಗ್ರೀಕರಣ ಕೊರತೆಯನ್ನು ಎತ್ತಿತೋರಿಸಲಾಗಿದೆ. ಅದೆಷ್ಟರಮಟ್ಟಿಗೆ ಕೊರತೆ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿರಬಹುದು. ವಿಪುಲಗಾತ್ರದ ಕೃತಿಗಳಲ್ಲಿ ಕವಿಗೆ ಹಿಂದುಮುಂದಿನ ಎಲ್ಲಾ ಎಳೆಗಳನ್ನು ಹೊಂದುಗೂಡಿಸುದಾಗದೆ ಹೋಗಬಹುದು. ಯಾವುದೋ ಒಂದು ಸಂದರ್ಭದಲ್ಲಿ ಅಥವಾ ಹಲವಾರು ಸಂದರ್ಭಗಳಲ್ಲಿ ಕಾರಣಾಂತರಗಳಿಂದ ಸಾಧಿಸದೇ ಹೋಗಬಹುದು. ಏನೇ ಇದ್ದರೂ, ಸಮಗ್ರೀಕರಣಕ್ಕೂ ಮೂಲ್ಯ ನಿರ್ಣಯಕ್ಕೂ ಯಾವಾಗಲೂ ತ್ರೈರಾಶಿಕ ಸಂಬಂಧವಿರುತ್ತದೆ ಎಂದು ಹೇಳಲು ಬಾರದು. ಜೊತೆಗೆ, ಸಮಗ್ರೀಕರಣದ ಕೊರತೆ ಎಲ್ಲಿ ಎಷ್ಟರಮಟ್ಟಿಗೆ ಆಯಾ ಕೃತಿಯಲ್ಲಿ ಅಪರಿಪೂರ್ಣತೆ ಅಥವಾ ನ್ಯೂನತೆ ಉಳಿದಿದೆ ಎಂಬುದನ್ನು ನಿವೇದಿಸಬಹುದು. ಅಂತೇ ನಿಜವಾದ ಸಮಷ್ಟಿ ವಿಮರ್ಶೆ ಸಹೃದಯನ ವ್ಯಕ್ತಿ ವಿಶಿಷ್ಟವಾದ ರಸಾನುಭವದಿಂದ ಕೂಡಿದ ಸಮಗ್ರ ಪ್ರತಿಕ್ರಿಯೆಯಾಗಬೇಕೇ ಹೊರತು ಶುಷ್ಕ ಗಣಿತ ಸೂತ್ರ ಇಲ್ಲವೇ ಒಣತರ್ಕದ ಪ್ರಮೇಯವಾಗಬಾರದು. ವಿಮರ್ಶೆಯ ಕ್ಷೇತ್ರದಲ್ಲಿ ಬೇರೆ ಬೇರೆ ಪರಸ್ಪರ ವಿರೋಧಿ ಪ್ರತಿಕ್ರಿಯೆಗಳೂ, ಅಭಿಪ್ರಾಯಗಳೂ ಹುಟ್ಟಿದರೂ ತಪ್ಪಿಲ್ಲ, ಬೇರೆ ಬೇರೆ ಪಂಥಗಳು ತಾಕಲಾಡಿದರೂ ಚಿಂತೆಯಿಲ್ಲ. ಆದರೆ, ಅವುಗಳಲ್ಲಿ ವ್ಯಕ್ತಿತ್ವ ಪ್ರೇರಿತವಾದ, ಜೀವಂತವಾದ, ಪ್ರಾಮಾಣಿಕವಾದ, ರಸಾನುಭವವಿರಬೇಕು, ಮೂಲ್ಯನಿರ್ಣಯ ವಿರಬೇಕು. ಪೆಪ್ಪರ್ ಹೇಳಿದಂತಹ ರೀತಿಯಲ್ಲಿ 'ಅಜೇಯವಾದ ಕುರೂಪ'ವು ಸಾಹಿತ್ಯ ಸೃಷ್ಟಿಯಲ್ಲಿ ಹೇಗೋ ಸಾಹಿತ್ಯ ಸಮೀಕ್ಷೆಯಲ್ಲಿಯೂ ಕಂಡುಬರುತ್ತದೆ. ಸಲ್ಲದ ವಿಲೋಭನಗಳಿಗೆ ಒಳಗಾಗಿ ಅತಿರೇಕದ ಪ್ರಶಂಸೆ–ನಿಂದೆಗಳು ವಿಮರ್ಶೆಯ ಹೆಸರಿನಲ್ಲಿ ಮೆರೆಯುತ್ತವೆ. ಬೇಕಾದವರ ಬಗ್ಗೆ ಒಂದು ತರದ ಪ್ರತಿಕ್ರಿಯೆ, ಬೇಡಾದವರ ಬಗ್ಗೆ ಇನ್ನೊಂದು ತರದ ಪ್ರತಿಕ್ರಿಯೆ ಇವು ಮನುಷ್ಯಮಾತ್ರರಿಗೆ ಸ್ವಾಭಾವಿಕ. ಆದರೆ, ಸುಸಂಸ್ಕೃತನಾಗಿ, ಆಗಲೆಳೆಸುವ ಸಹೃದಯನಲ್ಲಿ ಇವು ತಲೆದೋರಿದೆ ಹೃದಯ ಸಂವಾದವು ವ್ಯರ್ಥವಾಗುತ್ತದೆ, ಸಾಹಿತ್ಯ ಮತ್ತು ಸಮೀಕ್ಷೆ ಇವೆರಡರ ಪ್ರಗತಿ ಕುಂಠಿತವಾಗುತ್ತದೆ. ಲೇಖಕನ ಕೃತಿಯಲ್ಲಿ ಸಮಗ್ರೀಕರಣವನ್ನು ಶೋಧಿಸುವ ವಿಮರ್ಶಕನು ಜಟಿಲವಾದ ಮೂಲ್ಯಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು, ತನ್ನ ಸಮಸ್ತ ಪ್ರತಿಕ್ರಿಯೆಗಳಲ್ಲಿಯೂ ಸಮಗ್ರೀಕರಣವನ್ನು ಶೋಧಿಸಬೇಕು. ಲೇಖಕನ ಕೃತಿಯಲ್ಲಿ ಸಮಗ್ರೀಕರಣದ ಕೊರತೆಯುಂಟಾದರೂ ಇತರ ಗುಣಾಂಶಗಳಿಂದ ಅದಕ್ಕೆ ಬೆಲೆ ಬರುತ್ತದೆ ಎಂಬುದನ್ನು ಅರಿತಿರಬೇಕು. ★

# ಕೆಲವು ಸಂಕ್ಷಿಪ್ತ ಸಂಗತಿಗಳು

(ಸಂಗ್ರಹ: ಲೇಖಕರು: ಶ್ರೀ ಜಗನ್ನಾಥ ಹೇಮಾದ್ರಿ, ಕೃತಿ:'ಕನ್ನಡ ಸಾಹಿತ್ಯ ಪರಿಷತ್ತು' ಪುಟ : ೧೫೩)

೧. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪರಿಷತ್ತನ್ನು 'ಜನತೆಯ ವಿಶ್ವವಿದ್ಯಾಲಯ' ಎಂದು ಕರೆದರು.

೨. ಅಚ್ಚುಕೂಟ ಸ್ಥಾಪನೆ ಮತ್ತು ಪುಸ್ತಕ ಪ್ರಕಟಣೆ ಕಾರ್ಯಕ್ಕೆ ಹಣ ಸಂಗ್ರಹಕ್ಕಾಗಿ 'ಜಾಯಿಂಟ್ ಸ್ಟಾಕ್ ಕಂಪೆನಿ' ಏರ್ಪಡಿಸಲು ಪರಿಷತ್ತು ೧೯೩೦ರಲ್ಲಿ ಬಹಳ ಪ್ರಯತ್ನ ನಡೆಸಿತು. ಆದರೆ, ಸಾರ್ವಜನಿಕರಿಂದ ಸ್ಪಂದನೆ ಸಿಗದೆ ಕೈ ಬಿಡಲಾಯಿತು.

೩. ೧೯೧೮ರಲ್ಲಿ ಪ್ರಾರಂಭವಾದ ಪರಿಷತ್ತಿನ ಧರ್ಮ ವಾಚನಾಲಯಕ್ಕೆ ಮೈಸೂರು ಸರ್ಕಾರವು ಪ್ರತಿ ತಿಂಗಳೂ ೩೦ ರೂಪಾಯಿಗಳ ಧನ ಸಹಾಯ ಮಾಡುತ್ತಿತ್ತು. ೧೯೨೨ರಿಂದ ಆ ಸಹಾಯ ನಿಂತು ಹೋಯಿತು.

೪. ಕನ್ನಡ ಶ್ರೇಷ್ಠ ವಿದ್ವಾಂಸರಾದ ಪ್ರೊ. ಟಿ.ಎಸ್.ವೆಂಕಣ್ಣಯ್ಯನವರು ಕೊನೆಗೂ ಸಮ್ಮೇಳನಾಧ್ಯಕ್ಷರಾಗಲೇ ಇಲ್ಲ. ನಾಲ್ಕೈದು ಬಾರಿ ಅವರ ಹೆಸರು ಸೂಚಿತಾಗಿತ್ತು.

೫. ಹನ್ನೆರಡು ವರ್ಷಗಳ ಕಾಲ ಪರಿಷತ್ತಿನ ಉಪಾಧ್ಯಕ್ಷರಾಗಿದ್ದವರು ಶ್ರೀ ಕರ್ಪೂರ ಶ್ರೀನಿವಾಸರಾಯರು. ಅವರ ಪೂರ್ವಜರು ಪ್ರತಿಷ ತಿರುಪತಿ ಶ್ರೀವೆಂಕಟೇಶ್ವರ ಸ್ವಾಮಿ ದರ್ಶನಕ್ಕೆ ಹೋಗುತ್ತಿದ್ದರು. ಕಾಲ್ನಡಿಗೆಯಲ್ಲಿ ಬೆಟ್ಟ ಹತ್ತುವಾಗ ದಾರಿಯ ಇಕ್ಕೆಲಗಳಲ್ಲಿ ಉಂಡುಂಡೆ ಕರ್ಪೂರಗಳನ್ನು ಉರಿಸುತ್ತಿದ್ದರು. ಹಾಗಾಗಿ ಅವರದು "ಕರ್ಪೂರ" ಮನೆತನವಾಯಿತು.

೬. ೧೯೯೯ರಲ್ಲಿ ಕನಕಪುರಲದಲ್ಲಿ ೬೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಶ್ರೀ ಪಿ.ಜಿ.ಆರ್. ಸಿಂಧ್ಯಾ ನೇತೃತ್ವದ ಸ್ವಾಗತ ಸಮಿತಿಯು ಸಮ್ಮೇಳನಾಧ್ಯರಾದ ಡಾ.ಎಸ್.ಎಲ್.ಭೈರಪ್ಪ ಅವರಿಗೆ ಒಂದು ಲಕ್ಷ ರೂಪಾಯಿಗಳ ಹಮ್ಮಿಣಿಯನ್ನು ಅರ್ಪಿಸಿತು. ನಮ್ರತೆಯಿಂದ ಸ್ವೀಕರಿಸಿದ ಡಾ.ಭೈರಪ್ಪನವರು ಸ್ಥಳದಲ್ಲಿಯೇ ಅದನ್ನು ಪರಿಷತ್ತಿನ "ಅಮೃತನಿಧಿ"ಗೆ ಕಾಣಿಕೆಯಾಗಿ ಅರ್ಪಿಸಿಬಿಟ್ಟರು. (ಹಮ್ಮಿಣಿ: ಹಣದ ಚೀಲ, ಥೈಲಿ)

೭. ಡಾ.ಶಿವರಾಮ ಕಾರಂತರು ಮೊದಮೊದಲು "ಕೌಶಿಕ: ಎಂಬ ಹೆಸರಿನಿಂದ ಉಗ್ರ, ತೀಕ್ಷ್ಣ ಲೇಖನಗಳನ್ನು ಬರೆಯುತ್ತಿದ್ದರು. ★

# ಶಿಕ್ಷಣ ಮಾಧ್ಯಮದ ಅವಶ್ಯಕತೆ (ವಿವಿಧ ಶಿಕ್ಷಣ ತಜ್ಞರ ವಿಚಾರಗಳು)

**(ಸಂಗ್ರಹ: 'ಚಿನ್ನದ ಬೆಳಸು' - ಸುವರ್ಣ ಮಹೋತ್ಸವ ನೆನಪಿನ ಸಂಪುಟ)**

**–ಎಚ್.ವಿ. ನಂಜುಂಡಯ್ಯ**

["ಪರಕೀಯ ಮಾಧ್ಯಮ ನಮ್ಮ ಮಕ್ಕಳ ಮೆದುಳಿಗೆ ಆಯಾಸವುಂಟುಮಾಡಿ, ಅವರ ನರಮಂಡಲದ ಮೇಲೆ ಮಿತಿ ಮೀರಿದ ಒತ್ತಡವನ್ನು ತಂದುಹಾಕಿದೆ; ಅವರನ್ನು ಕಂಠಪಾಠಪಟುಗಳನ್ನಾಗಿ, ಅನುಕರಣಶೀಲರನ್ನಾಗಿ ಮಾಡಿದೆ; ಸ್ವತಂತ್ರವಾಗಿ ಆಲೋಚನೆ ಮಾಡಿ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಅವರನ್ನು ಅಸಮರ್ಥರನ್ನಾಗಿಸಿದೆ; ಅಲ್ಲದೆ, ತಾವು ಕಲಿತದ್ದನ್ನು ಕುಟುಂಬದ ಇತರರಿಗೂ ಜನಸಾಮಾನ್ಯರಿಗೂ ಹೇಳಿಕೊಡಲು ಅಶಕ್ತರನ್ನಾಗಿ ಮಾಡಿದೆ."

- ಮಹಾತ್ಮ ಗಾಂಧಿ (ಯಂಗ್ ಇಂಡಿಯಾ ಪತ್ರಿಕೆ, ದಿನಾಂಕ ೦೧–೦೯–೧೯೨೧)]

ಪೂರ್ವ ಕಾಲದಲ್ಲಿ ಸಂಸ್ಕೃತವು ದೇಶಭಾಷೆಯನ್ನು ಹೇಗೆ ಮೂಲೆಗೆ ಒತ್ತರಿಸಿತ್ತೋ, ಹಾಗೆಯೇ ಈ ಕಾಲದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವು ಪ್ರಬಲವಾಗಿ ಅದನ್ನು ಹಿಂದೆ ಹಾಕಿದೆ. ವ್ಯಾಸಂಗದಿಂದುಂಟಾಗುವ ಜ್ಞಾನಾರ್ಜನೆಯ ವಿಷಯದಲ್ಲಿ ದೇಶಭಾಷೆಗೂ ಇಂಗ್ಲಿಷ್ ಭಾಷೆಗೂ ಅಜಗಜನ್ಯಾಯ ವಿರುವುದರಿಂದ, ಪಂಡಿತನೆನ್ನಿಸಿಕೊಳ್ಳಬೇಕೆಂದು ಬಯಸುವ ಯಾವ ಮನುಷ್ಯನಾಗಲಿ ದೇಶಭಾಷಾ ಗ್ರಂಥಗಳನ್ನು ಮಾತ್ರ ಓದಿಬಿಟ್ಟರೆ ಸಾಕೆಂದು ಎಣಿಸುವುದಿಲ್ಲ. ಇಂಗ್ಲಿಷ್ ಭಾಷಾ ಸೇವೆಯಲ್ಲಿಯೇ ನಿರತರಾಗಿರುವವರಿಗಿಂತ ತಾವು ಯಾವ ವಿಷಯದಲ್ಲಿಯೂ ನಿಕೃಷ್ಟರಲ್ಲವೆಂದು ಭಾವಿಸಿಕೊಂಡಿರುವ ಕೆಲವರು ಪ್ರಾಚೀನ ಸಂಸ್ಕೃತ ಪಂಡಿತರು ಈಗಲೂ ಇರುವುದು ನಿಶ್ಚಯ. ಆದರೆ, ಇಂತಹವರು ಬರುಬರುತ್ತ ವಿರಳರಾಗುತ್ತಿರುವರು. ಕಾಲೇಜುಗಳ ಮೂಲಕವೂ ಯೂನಿವರ್ಸಿಟಿಗಳ ಮೂಲಕವೂ ಪಡೆಯುವ ಪಾಂಡಿತ್ಯವೇ ಅತ್ಯುತ್ಕೃಷ್ಟವೆಂದು ಒಪ್ಪಿಕೊಳ್ಳಲು ಹಿಂಜರಿಯುವ ಜನರು ಬಹು ಅಪೂರ್ವ. ಇಂಗ್ಲಿಷ್ ಭಾಷಾ ಪ್ರೌಢಿಮೆಗೆ ಕುಂದನ್ನುಂಟು ಮಾಡಬಹುದೆಂಬ ಶಂಕೆಗೆ ಆಸ್ಪದವನ್ನು ಕೊಡುವ ಯಾವುದೊಂದು ಸಲಹೆಗೂ ಈಗ ಎಲ್ಲೆಲ್ಲಿಯೂ ಭಾರತೀಯರು ಪ್ರತಿಕೂಲರಾಗಿ ನಿಲ್ಲುತ್ತಿರುವುದಕ್ಕೆ ಇದೇ ಕಾರಣವು.

ಹಾಗಾದರೆ, ನಾವು ಈಗ ಯಾವ ಮಾರ್ಗವನ್ನು ಅನುಸರಿಸಬೇಕು? ಈಗಲಾಗಲಿ ಬಹು ಕಾಲಾನಂತರದಲ್ಲಾಗಲೀ, ಹಿಂದೂ ದೇಶಕ್ಕೆಲ್ಲಾ ಒಂದೇ ಸಾಮಾನ್ಯ ಭಾಷೆಯೇರ್ಪಡುವ ಸಂಭವವು ಸ್ವಪ್ನೇಪಿ ಉಂಟಾಗತಕ್ಕದ್ದಲ್ಲವೆಂದು ಹೇಳಬಹುದು. ಇಂಗ್ಲಿಷ್ ಭಾಷೆಯೂ ಸಂಸ್ಕೃತ ಭಾಷೆಯೂ ದೇಶದಲ್ಲೆಲ್ಲ ವಿದ್ಯಾವಂತರಿಗೆ ಮಾತ್ರ ಇದ್ದ ಮಟ್ಟಿಗೆ ಸಾಮಾನ್ಯ ಭಾಷೆಗಳಾಗಿವೆ. ಆದರೆ, ಜನಸಮುದಾಯವನ್ನು ತೆಗೆದುಕೊಂಡರೆ, ಇಂಗ್ಲಿಷ್ ಎಂದಿಗೂ ಸಾಮಾನ್ಯ ಭಾಷೆಯಾಗಲಾರದು. ಈ ರೀತಿಯಲ್ಲಿ ಅನ್ಯಭಾಷೆಗೆ ಸರ್ವಜನ ಸೇವ್ಯವಾದ ದೇಶಭಾಷೆಗಳು ತಮಗಿರುವ ತ್ರಾಣದಿಂದ ಅವಕಾಶವನ್ನು ಕೊಡದೆ ಇರುವಾಗ ಅವುಗಳನ್ನೇ ಅಭಿವೃದ್ಧಿಪಡಿಸಿ, ಈ ಕಾಲದ ಅಭಿಪ್ರಾಯಗಳಿಗೆ ತಕ್ಕಂತೆ ಉದಾರವಾದ ದೇಶಾಭಿಮಾನವು ಹುಟ್ಟಿ ವೃದ್ಧಿ ಹೊಂದುವುದಕ್ಕೆ ಬೇಕಾದ ನಾನಾ ವಿಷಯ ಜ್ಞಾನಾರ್ಜನೆಗೆ ಸಾಧಕವಾಗುವಷ್ಟು ಯೋಗ್ಯವಾಗಿ ಮಾಡುವುದು ಅವಶ್ಯಕವಲ್ಲವೇ? ಅತ್ಯುತ್ಕೃಷ್ಟ ದೆಶೆಯಲ್ಲರಿವ ದೇಶೀಯರ ಮನಸ್ಸುಗಳನ್ನು ಕಲಕಿ ಪ್ರಚಲಿತವಾಗಿ ಮಾಡುತ್ತಿರುವ ವಿಷಯುಗಳನ್ನೆಲ್ಲಾ ಬಹಳ ಮಟ್ಟಿಗೆ ನಾವು ತಿಳಿದುಕೊಳ್ಳುವುದಕ್ಕೂ, ಈ ಕಾಲದಲ್ಲಿ ಎಲ್ಲೆಲ್ಲಿಯೂ ಮಹತ್ತರವಾಗಿ ನಡೆಯುತ್ತಿರುವ ಅರ್ಥಸಾಧಕ ವ್ಯಾಪಾರ ವಿಷಯಕವಾದ ಹೋರಾಟದಲ್ಲಿ ನಮ್ಮ ಯೋಗಕ್ಷೇಮವನ್ನು ಕಾಪಾಡಿಕೊಳ್ಳುವಷ್ಟು ಯೋಗ್ಯತೆಯನ್ನು ಪಡೆದುಕೊಳ್ಳುವುದಕ್ಕೂ ಒಂದು ಅನ್ಯ ದೇಶಭಾಷೆಯನ್ನು ನಾವು ಕಲಿಯಲೇಬೇಕಾಗಿರುವುದರಿಂದ ಇಂಗ್ಲಿಷ್ ಭಾಷೆಯಲ್ಲಿ ಪ್ರವೀಣತೆಯನ್ನು ಪಡೆಯಬಲ್ಲ ಎಲ್ಲಿಯೋ ಕೆಲವರ ಪ್ರಯತ್ನಗಳಿಂದ ವಿಶೇಷ ಫಲವನ್ನು ಪಡೆಯಲಾಗುವುದೆಂದು ಎಣಿಸುವುದು ವ್ಯರ್ಥ. ಯಾವ ದೇಶದಲ್ಲಿಯೇ ಆಗಲಿ ಪಾಂಡಿತ್ಯದ ವಿಷಯದಲ್ಲಿಯೂ ಶಾಸ್ತ್ರೀಯ ಪರಿಶೋಧನಗಳ ವಿಷಯುದಲ್ಲಿಯೂ ಪಾರಂಗತರೆನಿಸಕೊಳ್ಳುವವರು ಯಾವಾಗಲೂ ಬಹಳ ಸ್ವಲ್ಪ ಮಂದಿಯೇ ಇರುವರು; ಇಂತಹ ಪಂಡಿತೋತ್ತಮರ ಪಾಂಡಿತ್ಯದ ಫಲವನ್ನು ಕಾಲಾನುಕಾಲದಲ್ಲಿ ನಾಗರಿಕ ಪ್ರಪಂಚವೆಲ್ಲಾ ಅನುಭವಿಸುವುದು. ಯಾವ ದೇಶದಲ್ಲಾಗಲಿ, ಅತಿ ದರಿದ್ರರೂ ಅಷ್ಟೈಶ್ವರ್ಯ ಸಂಪನ್ನರೂ ಸಲ್ಲದೆ ಮಧ್ಯಸ್ಥಿತಿಯಲ್ಲಿದ್ದುಕೊಂಡು ದೇಶ ಸೇವೆಯಲ್ಲಿ ಬದ್ಧಕಂಕಣರಾದ ಜನರ ಸಂಖ್ಯೆ ಹೆಚ್ಚಿದಷ್ಟೂ ಆ ದೇಶವು ಉನ್ನತ ಸ್ಥಿತಿಯನ್ನು ಪಡೆಯುವುದು. ಆದುದರಿಂದ, ಈ ಮಧ್ಯ ಸ್ಥಿತಿಯಲ್ಲಿರುವ ಜನರಿಗೆಲ್ಲಾ ಸಾಮಾನ್ಯವಾಗಿ, ಅತಿದೃಢವಾದ ವಿದ್ಯಾಭ್ಯಾಸವನ್ನು ಮಾಡಿಸದೆ ಹೋದರೂ ತಕ್ಕಮಟ್ಟಿಗೆ ಪ್ರೌಢವೂ ಸರ್ವತೋಮುಖವೂ ಆದ ವಿದ್ಯಾಭ್ಯಾಸವನ್ನಾದರೂ ಮಾಡಿಸುವುದಕ್ಕೆ ಯತ್ನಿಸುವುದು ಪರಮಾವಶ್ಯಕ; ಇಂತಹ ವಿದ್ಯಾಭ್ಯಾಸವಂತೂ ದೇಶಭಾಷೆಯ ಮೂಲಕವೇ ನಡೆಯಬೇಕು. ★

# ಇಂಗ್ಲಿಷ್ (ಮಾಧ್ಯಮದ) ಕಲ್ಲುಚಪ್ಪಡಿ

## (೧೯೫೭ರಲ್ಲಿ ೩೯ನೆಯ ಸಮ್ಮೇಳನದ ಅಧ್ಯಕ್ಷರಾದ ಕುವೆಂಪು ಅವರ ಭಾಷಣದ ಆಯ್ದ ಭಾಗ)

**–ಕೆ.ವಿ. ಪುಟ್ಟಪ್ಪ**

"ಈ ಇಂಗ್ಲಿಷ್ ಚಪ್ಪಡಿಯ ಭಾರಾಘಾತದಿಂದ ಜನ ಸಾಮಾನ್ಯರ ಬಹುಸಂಖ್ಯಾತ ಮಕ್ಕಳನ್ನು ಪಾರುಮಾಡಿ ರಕ್ಷಿಸದಿದ್ದರೆ ನಾವು ವಿದ್ಯಾಭ್ಯಾಸಕ್ಕಾಗಿ ವ್ಯಯ ಮಾಡುತ್ತಿರುವ ಕೋಟ್ಯಂತರ ರೂಪಾಯಿ ನೀರಿನಲ್ಲಿ ವಾಡಿದ ಹೋಮವಾಗುತ್ತದೆ". ಸ್ವಾತಂತ್ರ್ಯ ಪೂರ್ವಕಾಲದಲ್ಲಿಯೇ ಗಾಂಧೀಜಿ ಹೀಗೆ ಹೇಳಿದ್ದರು.

"ಪರಭಾಷೆಯ ಮೂಲಕ ಶಿಕ್ಷಣ ನಮ್ಮ ಮಕ್ಕಳ ಬುದ್ಧಿಶಕ್ತಿಯನ್ನು ಬೆಂಡುಮಾಡಿದೆ; ಅವರ ನರಗಳನ್ನು ದುರ್ಬಲಗೊಳಿಸಿದೆ. ಅವರನ್ನು ಬಾಯಿಪಾಠ ಮಾಡುವ ಗಿಳಿಗಳನ್ನಾಗಿ ಮಾಡಿದೆ; ನಾನಿಂದು ಸರ್ವಾಧಿಕಾರಿಯಾಗಿದ್ದರೆ ಈ ಕೂಡಲೇ ಪರಭಾಷೆಯ ಮೂಲಕದ ವಿದ್ಯಾಭ್ಯಾಸವನ್ನು ನಿಲ್ಲಿಸುತ್ತಿದ್ದೆ. ಹೊಸ ಸುಧಾರಣೆಗಳನ್ನು ಜಾರಿಗೆ ತರುವಂತೆ ಆಜ್ಞೆ ಮಾಡುತ್ತಿದ್ದೆ. ಇಷ್ಟವಿಲ್ಲದವರು ಕೆಲಸ ಕಳೆದು ಕೊಳ್ಳುತ್ತಿದ್ದರು. ಪಠ್ಯಪುಸ್ತಕಗಳಿಗಾಗಿ ಕಾಯಬೇಕಾಗಿಲ್ಲ. ಅವು ಅನಂತರ ತಾವಾಗಿಯೆ ಬೆಳಕಿಗೆ ಬರುತ್ತವೆ. ... ... ಅಂತರ ರಾಷ್ಟ್ರೀಯ ರಾಜಕೀಯ ಮತ್ತು ವಾಣಿಜ್ಯ ವ್ಯವಹಾರಗಳಿಗೆ ಆಂಗ್ಲಭಾಷೆ ಅತ್ಯಾವಶ್ಯಕ ಎಂದು ನನಗೆ ಗೊತ್ತು. ಆದ್ದರಿಂದ ಅದನ್ನು ಕೆಲವರು ಕಲಿತರೆ ಸಾಕು. ಅದು ಉತ್ತಮ ಆಲೋಚನೆಗಳ ಮತ್ತು ಉತ್ತಮ ಸಾಹಿತ್ಯದ ಅಕ್ಷಯ ನಿಧಿಯೂ ನಿಜ. ಹೆಚ್ಚು ಬಾಷೆಗಳನ್ನು ಕಲಿಯಲು ಸಾಮರ್ಥ್ಯ ಮತ್ತು ಅವಕಾಶ ಇರುವವರು ಅದನ್ನು ಕಲಿತು, ಅದರಲ್ಲಿರುವ ಸಾರಸರ್ವಸ್ವವನ್ನು ದೇಶಭಾಷೆಗಳಿಗೆ ಇಳಿಸಲಿ.. .. .. ಪರಭಾಷೆಯ ಮೂಲಕದ ಶಿಕ್ಷಣದಿಂದ ರಾಷ್ಟ್ರಕ್ಕೆ ಆಗುತ್ತಿರುವ ಜ್ಞಾನಹಾನಿ ಮತ್ತು ನೈತಿಕ ನಷ್ಟ ಅಷ್ಟಿಷ್ಟಲ್ಲ. ಆ ನಷ್ಟವೆಷ್ಟು ಎಂಬುದನ್ನು ಬಹುಶಃ ನಮಗಿಂತ ಮುಂದಿನ ಪೀಳಿಗೆಯವರು ಅರಿಯಬಲ್ಲರು.. .. ನಾವು ಅನೇಕ ಆಂಗ್ಲ ಭಾಷೆಯ ಗದ್ಯದ ಮತ್ತು ಪದ್ಯದ ಅನೇಕ ಪುಸ್ತಕಗಳನ್ನು ಓದಬೇಕಾಗಿತ್ತು.. .. ಆ ಏಳು ವರ್ಷಗಳ ಕಾಲ ಗುಜರಾತಿಯನ್ನೂ, ಗುಜರಾತಿಯ ಮೂಲಕ ಇತರ ವಿಷಯಗಳನ್ನೂ ಕಲಿತಿದ್ದರೆ ನನ್ನ ನೆರೆಯವರಿಗೂ ಆ ತಿಳಿವನ್ನು ಸುಲಭವಾಗಿ ಹಂಚ ಬಹುದಾಗಿತ್ತು; ಗುಜರಾತಿ ಸಾಹಿತ್ಯವನ್ನು ಬೆಳೆಸಬಹುದಾಗಿತ್ತು. ಜನತೆಗೆ ಇನ್ನೂ ಹೆಚ್ಚಿನ ಸೇವೆ ಸಲ್ಲುತ್ತಿತ್ತು. ಪರಿಸ್ಥಿತಿ ಏನೇ ಇರಲಿ, ಈ ಕೂಡಲೆ ಶಿಕ್ಷಣ ಮಾಧ್ಯಮ ಬದಲಾವಣೆ ಹೊಂದಬೇಕು. ದೇಶಭಾಷೆಗಳಿಗೆ ಯೋಗ್ಯವಾದ ಸ್ಥಾನ ಲಭಿಸಬೇಕು. ಈ ಮಾರ್ಪಾಡಿನಿಂದ ಅಲ್ಪಸ್ವಲ್ಪ ಗೊಂದಲ ಕಳವಳ ತಲೆದೋರಿದರೂ ಅವೆಲ್ಲ ತಾತ್ಕಾಲಿಕವಾದುವು. ಆದರೆ, ದಿನದಿನವೂ ಆಗುತ್ತಿರುವ ಒಟ್ಟು ನಷ್ಟ ಒಟ್ಟುಗೂಡಿ ಕೊನೆಗೆ ಸರ್ವನಾಶ ಸಂಭವಿಸುವುದಕ್ಕಿಂತ ಸ್ವಲ್ಪ ಕಾಲ ಗೊಂದಲದ ಪರಿಸ್ಥಿತಿ ಸಂಭವಿಸಿದರೂ ಚಿಂತೆಯಿಲ್ಲ. ಈ ಶಿಕ್ಷಣ ಮಾಧ್ಯಮದ ಪ್ರಶ್ನೆಯನ್ನು ವಿದ್ಯಾಪ್ರವೀಣರು ಎಂದರೆ ಅಕಾಡೆಮಿಷಿಯನ್ಸ್ ಎನ್ನಿಸಿಕೊಳ್ಳುವವರ ತೀರ್ಮಾನಕ್ಕೆ ಬಿಡುವುದು ಸರಿಯಲ್ಲವೆಂದೇ ನನ್ನ ಅಭಿಪ್ರಾಯ. ಹುಡುಗರಿಗೆ ಯಾವ ಭಾಷೆಯ ಮೂಲಕ ಪಾಠ ಹೇಳಿಕೊಡಬೇಕೆಂದನ್ನು ಅವರು ಹೇಗೆ ನಿರ್ಣಯಿಸಿಯಾರು? ಪ್ರತಿಯೊಂದು ಸ್ವತಂತ್ರ ದೇಶದಲ್ಲಿಯೂ ಈ ಪ್ರಶ್ನೆ ಆದಿಯಲ್ಲಿಯೇ ನಿರ್ಧಾರವಾಗುತ್ತದೆ. ಹೀಗೆಯೇ, ಯಾವ ವಿಷಯವನ್ನು ಕಲಿಸಬೇಕೆಂಬುದನ್ನೂ ಅವರು ನಿರ್ಧರಿಸಲಾರರು. ಆಯಾ ದೇಶದ ಅರಕೆ ಅವಶ್ಯಕತೆಗಳಿಗನು ಗುಣವಾಗಿ ಅದನ್ನು ಗೊತ್ತುಪಡಿಸಬೇಕಾಗಿದೆ. ರಾಷ್ಟ್ರದ ಇಚ್ಛೆಯನ್ನು ಸರಿಯಾದ ರೀತಿಯಲ್ಲಿ ಕಾರ್ಯರೂಪಕ್ಕೆ ತಿರುಗಿಸುವುದಷ್ಟೆ ಅವರ ಕರ್ತವ್ಯ. ಈ ದೇಶ ಸರ್ವತಂತ್ರವಾದ ಕೂಡಲೇ ಶಿಕ್ಷಣ ಮಾಧ್ಯಮದ ಪ್ರಶ್ನೆ ಪ್ರಶ್ನೆಯಾಗು ಳಿಯುವುದಿಲ್ಲ.

ಅಯ್ಯೋ ಪಾಪ, ಅವರು ಎಂತಹ ಅತಿ ಆಶಾವಾದಿ! ದೇಶ ಸ್ವತಂತ್ರವಾದ ಕೂಡಲೆ ಈ ಪ್ರಶ್ನೆ ಪ್ರಶ್ನೆಯಾಗುಳಿ ಯುವುದಿಲ್ಲ ಎಂದರು, ಸುಮಾರು ಇಪ್ಪತ್ತು ವರ್ಷಗಳ ಹಿಂದೆಯೇ! ದೇಶ ಸ್ವತಂತ್ರವಾಗಿ ಹತ್ತಾರು ವರ್ಷ ಕಳೆದಾಗಿದೆ. ಅವರ ಭಾಷಾನುಗುಣ ಪ್ರಾಂತ ರಚನೆಯ ಬುದ್ಧಿವಾದವನ್ನೆ ತಲಕೆಳಗು ಮಾಡಲೆಳಸಿ ಚಿತ್ರ ವಿಚಿತ್ರವಾಗಿ ವಾದಿಸಿದೆವು ನಾವು. ಆದರೆ ಅವರ ಆಶೀರ್ವಾದದಿಂದ ಅವರು ಹೇಳಿದಂತೆಯೆ ಕಡೆಗೂ ಆಗಿ, ರಾಷ್ಟ್ರಕ್ಷೇಮ ಭದ್ರವಾಯಿತು. ಹಾಗೆಯೇ 'ದೇಶಭಾಷೆಗೆ ಪ್ರಥಮ ಸ್ಥಾನ ದೊರೆಯಬೇಕು; ದೇಶಭಾಷೆಯೇ ಶಿಕ್ಷಣ ಮಾಧ್ಯಮ ವಾಗಬೇಕು' ಎಂದ ಅವರ ಹಿತಬೋಧೆಯನ್ನು ನಮ್ಮಲ್ಲಿ ಕೆಲವರು ಇಂದು ಪ್ರಶ್ನಿಸಿ, ಅಲಕ್ಷಿಸಿ, ಅವರು ಮಹತ್ವರಾದರು ವಿದ್ಯಾಭ್ಯಾಸ ಶಾಸ್ತ್ರಜ್ಞರಲ್ಲದ ಅವರ ಅಭಿಪ್ರಾಯ ಬರಿಯ ಭಾವೋಲ್ಲಾಸವೇ ಹೊರತು ಅನುಕರಣ ಯೋಗ್ಯವಾಗಲಾರದೆಂದು ವಾದಿಸುತ್ತಿದ್ದಾರೆ. ಭಾಷಾ ಪ್ರಾಂತ ರಚನೆಯ ವಿಷಯದಲ್ಲಿ ಅದರಂತೆಯೇ ಈ ವಿಷಯದಲ್ಲಿಯೂ ಕೊನೆಗೂ ಅವರು ಹಾಕಿರುವ ಗೆರೆಯ ಮೇಲೆಯೇ ನಾವು ನಡೆಯಬೇಕಾಗುತ್ತದೆ, ನಡೆದೂ ನಡೆಯುತ್ತೇವೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ. ★

# ಕನ್ನಡ ಸಾಹಿತ್ಯ ಪರಿಷತ್ತಿನ ಅಡಿಪಾಯ ಭದ್ರಪಡಿಸಿದ ಪ್ರೊ. ಜಿ. ವೆಂಕಟಸುಬ್ಬಯ್ಯ

**– ನಾಡೋಜ ಡಾ. ಮಹೇಶ ಜೋಶಿ ಬಣ್ಣನೆ**



ಕಟ್ಟಡ ಭವ್ಯವಾಗಿ ನಿಂತ ನಂತರ ಕೆಳಗಡೆ ಇರುವ ಭದ್ರ ಅಡಿಪಾಯ ಮರೆಯಾಗಿರುತ್ತದೆ. ಅಂದರೆ, ಕಟ್ಟಡ ಸುಭದ್ರವಾಗಿ ನಿಲ್ಲಲು ಅಡಿಪಾಯವೇ ಮುಖ್ಯವೆನ್ನುವುದನ್ನು ನಾವು ಮರೆಯ ಬಾರದು. ಅದೇ ರೀತಿಯಲ್ಲಿ ಪ್ರೊ.ಜಿ. ವೆಂಕಟಸುಬ್ಬಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನ ಅಡಿಪಾಯವನ್ನು ಭದ್ರಗೊಳಿಸಿದವರು. ಹೀಗಾಗಿ ಅವರ ಸ್ಮರಣೆಗೆ ವಿಶೇಷ ಮಹತ್ವವಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ಹೇಳಿದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಪ್ರೊ.ಜಿ.ವೆಂಕಟ ಸುಬ್ಬಯ್ಯನವರ ೧೧೨ನೆಯ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜೊತೆಗಿನ ವೆಂಕಟಸುಬ್ಬಯ್ಯನವರ ಒಡನಾಟಕ್ಕೆ ಸುದೀರ್ಘ ಪರಂಪರೆ ಇದೆ. ೧೯೫೪ರಲ್ಲಿ ಮೊದಲು ಕಾರ್ಯದರ್ಶಿಯಾದ ನಂತರದಲ್ಲಿ ೧೯೬೪ರಲ್ಲಿ ಅಧ್ಯಕ್ಷರಾದ ಸಂದರ್ಭದಲ್ಲಿ, ನಲವತ್ತು ಸಾವಿರ ರೂಪಾಯಿಗಳ ಸಾಲ ವಿದ್ದಿತಾದ್ದರಿಂದ ಪರಿಷತ್ತಿನ ಆರ್ಥಿಕ ಪರಿಸ್ಥಿತಿ ಸಂಕಷ್ಟದಲ್ಲಿ ಇತ್ತು. ಸದಸ್ಯರ ಸಂಖ್ಯೆ ಕೂಡ ಬಹಳ ಕಡಿಮೆ ಇತ್ತು. ಸರ್ಕಾರದ ಬಳಿ ಅನುದಾನ ಕೇಳಿದರೆ ಮೊದಲು ಸಾಲ ತೀರಿಸಿ ಎನ್ನುವ ಉತ್ತರ ಬಂದಿತು. ಅದರಿಂದ ವಿಮುಖರಾಗದ ಪ್ರೊ.ಜಿ.ವಿಯವರು, ಅದನ್ನು ಸವಾಲಾಗಿ ಸ್ವೀಕರಿಸಿ, ಎಲ್ಲೆಡೆ ಸುತ್ತಾಡಿ ಅನೇಕ ಹಿರಿಯರಿಂದ ಹಾಗೂ ಕನ್ನಡ ಪ್ರೇಮಿಗಳಿಂದ ಅನುದಾನ ತಂದರು. ಸರಸ್ವತಿ ಮಂದಿರದಲ್ಲಿ ನಿರಂತರ ಕಾರ್ಯಕ್ರಮಗಳನ್ನು ಮಾಡಿ ತೋರಿಸುವುದರ ಜೊತೆಗೆ ಪ್ರಕಟಣೆಗಳನ್ನೂ ಮಾಡಿದರೆಂದು ಹೇಳುತ್ತಾ, ಪ್ರೊ.ಜಿ. ವೆಂಕಟಸುಬ್ಬಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿಗೆ ನೀಡಿದ ಕೊಡುಗೆಗಳನ್ನು, ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ವರ್ಣಿಸಿದರು.

ಮೈಸೂರು ಪ್ರಾಂತ್ಯಕ್ಕೆ ಹೆಚ್ಚು ಸೀಮಿತವಾಗಿದ್ದ ಪರಿಷತ್ತನ್ನು, ಅಖಿಲ ಕರ್ನಾಟಕಕ್ಕೆಲ್ಲಾ ವಿಸ್ತರಿಸಿ, ವಿಶೇಷ ಸ್ವರೂಪ ನೀಡಿದ್ದೂ ಕೂಡ ಜಿ.ವಿಯವರ ಹೆಗ್ಗಳಿಕೆಯಾಗಿದೆ. ಕಾರ್ಯಕಾರಿ ಸಮಿತಿಯ ವ್ಯಾಪ್ತಿಯನ್ನು ರಾಜ್ಯಾದ್ಯಂತ ವಿಸ್ತರಿಸಿ, ಅದನ್ನು ಸದೃಢ ಮತ್ತು ಸಕ್ರಿಯಗೊಳಿಸಿದರು. ಅದಕ್ಕಾಗಿ ನಿರಂತರ ಪ್ರವಾಸಗಳನ್ನೂ ಕೂಡ ಕೈಗೊಂಡರು. ಆದರೆ, ಅವರಿಗೆ ದೊರೆಯಬೇಕಾದ ಗೌರವಗಳು ಸಿಗುವಲ್ಲಿ ಬಹಳ ತಡವಾಯಿತೆಂಬುದನ್ನು ನಾಡೋಜ ಡಾ.ಮಹೇಶ ಜೋಶಿಯವರು ಸ್ಮರಿಸಿದರು. ಅವರಿಗೆ ನಾಡೋಜ ಗೌರವ ಸಂದಾಗ ೯೨ ವರ್ಷ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದಾಗ ೯೮ ವರ್ಷ, ಪಂಪ ಪ್ರಶಸ್ತಿ ಬಂದಾಗ ೧೦೧ ವರ್ಷ, ಪದ್ಮಶ್ರೀ ಬಂದಾಗ ೧೦೪ ವರ್ಷ, ಕೇಂದ್ರ ಸರ್ಕಾರದ ಭಾಷಾ ಸಮ್ಮಾನ ಗೌರವ ಬಂದಾಗ ೧೦೫ ವರ್ಷಗಳಾಗಿದ್ದಿತು. ಪ್ರೊ.ಜಿ.ವಿಯವರು ಈ ಕುರಿತು ಎಂದಿಗೂ ಆಕ್ಷೇಪ ವ್ಯಕ್ತಪಡಿಸದಿದ್ದರೂ, ನಮ್ಮ ವ್ಯವಸ್ಥೆ ಇಂತಹ ವಿಷಯಗಳ ಕುರಿತು ಆಲೋಚಿಸಬೇಕು ಎಂದು ಹೇಳಿದರು.

ಕನ್ನಡದಲ್ಲಿ ನಿಘಂಟು ಎನ್ನುವ ಪದ ಕೇಳಿದ ಕೂಡಲೇ ನೆನಪಾಗುವುದೇ ವೆಂಕಟಸುಬ್ಬಯ್ಯನವರ ಹೆಸರು ಎಂದು ಹೇಳಿದ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕರಾದ ಎನ್.ಎಸ್.ಶ್ರೀಧರ ಮೂರ್ತಿಯವರು, ೧೯೪೩ರಲ್ಲಿಯೇ ಡಿ.ಎಲ್.ನರಸಿಂಹಾಚಾರ್ಯರು ಪದ ಸಂಗ್ರಹದ ತರಬೇತಿಯನ್ನು ನೀಡಿ, ಅವರನ್ನು ಈ ಕ್ಷೇತ್ರಕ್ಕೆ ಕರೆ ತಂದರು. ಅವರ ಗುರುಗಳಾದ ಎ.ಆರ್.ಕೃಷ್ಣಶಾಸ್ತ್ರಿಗಳು 'ಇದು ನೀನೇ ಮಾಡಬೇಕಾದ ಕೆಲಸ' ಎಂದು ಸೂಚಿಸಿದರು. ಸ್ವತಃ ಪ್ರೊ.ಜಿ.ವಿಯವರೇ ರೂಪಿಸಿದ ಹದಿನಾಲ್ಕು ನಿಘಂಟುಗಳು ಇರುವಂತೆ, ನಿಘಂಟು ಶಾಸ್ತ್ರದ ಪರಿಚಯ ನೀಡುವ ಎರಡು ಮುಖ್ಯ ಕೃತಿಗಳನ್ನೂ ಅವರು ರಚಿಸಿದ್ದಾರೆ. ೧೯೫೩ರಲ್ಲಿ ಅವರು 'ಕನ್ನಡ ನಿಘಂಟು ಶಾಸ್ತ್ರದ ಪರಿಚಯ' ಕೃತಿ ರಚಿಸುವುದಕ್ಕೆ ಮೊದಲು ಆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೃತಿಗಳೇ ಇರಲಿಲ್ಲ. ಅಲ್ಲಿಂದ ಮುಂದೆ, ಅದು ಆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆಲ್ಲರಿಗೂ ಅದು ಆಚಾರ್ಯ ಕೃತಿಯಾಯಿತು. 'ಕನ್ನಡ ನಿಘಂಟು ಪರಿವಾರ' ನಿಘಂಟು ರಚನೆಯ ಹಿಂದಿನ ತಾತ್ವಿಕತೆಯನ್ನು ವಿವರಿಸುವಂತಹ ಕೃತಿಯಾಗಿದೆ. ಕೃತಿಯಲ್ಲಿರುವ ೧೯ ಲೇಖನಗಳೂ ಕೂಡ ನಿಘಂಟು ರಚನೆಯ ಹಿಂದಿನ ಕುಶಲತೆಯನ್ನು ದಕ್ಷವಾಗಿ ವಿವರಿಸುತ್ತವೆ ಎಂದು ಹೇಳಿ ಅವರ ಜೊತೆ ಕೆಲಸ ಮಾಡಿದ ಅನುಭವಗಳನ್ನು ಹಂಚಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಡಾ.ಪದ್ಮಿನಿ ನಾಗರಾಜು ಮತ್ತು ನೇ.ಭ.ರಾಮಲಿಂಗ ಶೆಟ್ಟಿ, ಗೌರವ ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ್ ಪಾಂಡು, ದುಬೈ ಕನ್ನಡ ಸಂಘದ ಶಶಿಧರ್ ನಾಗರಾಜಪ್ಪ, ಪರಿಷತ್ತಿನ ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ★

# ಕನ್ನಡ ಸಾಹಿತ್ಯಕ್ಕೆ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಮತ್ತು ಎಂ.ವಿ.ಸೀ ಅವರ ಕೊಡುಗೆ ಅಪಾರ

**- ನಾಡೋಜ ಡಾ ಮಹೇಶ ಜೋಶಿ**



ಕನ್ನಡ ಸಾಹಿತ್ಯಕ್ಕೆ ಎಂ.ವಿ.ಸೀ. ಭದ್ರ ಬುನಾದಿ ಹಾಕಿದರೆ, ತೇಜಸ್ವಿ ಘನತೆಯನ್ನು ನೀಡಿದರು ಎಂದು ನಾಡೋಜ ಡಾ. ಮಹೇಶ ಜೋಶಿಯವರು ತಿಳಿಸಿದರು. ಅವರು ಇಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಎಂ.ವಿ.ಸೀತಾರಾಮಯ್ಯ(ರಾಘವ) ಮತ್ತು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಹುಟ್ಟು ಹಬ್ಬದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ತೇಜಸ್ವಿಯವರು ಕಥೆಗಾರರಾಗಿ ಪಡೆದ ಪ್ರಸಿದ್ಧಿಯ ಜೊತೆಗೆ, ಕೃಷಿ ಕ್ಷೇತ್ರದಲ್ಲಿ ಕಾಲಿಟ್ಟು ಪರಿಸರ ಜ್ಞಾನದ ಬಗ್ಗೆ ಅನನ್ಯ ಕಾಳಜಿ ತೋರಿದವರು. ಕನ್ನಡದಲ್ಲಿ ಬಿ.ಎ. (ಆನರ್ಸ್) ಮತ್ತು ಎಂ.ಎ ಪದವಿಗಳನ್ನು ಪಡೆದ ನಂತರ ಸ್ವತಂತ್ರ ಪ್ರವೃತ್ತಿಯ ಅವರು ಅಧ್ಯಾಪಕರಾಗಲು ಇಚ್ಛಿಸದೆ, ಚಿಕ್ಕಮಗಳೂರಿನ ಮೂಡಿಗೆರೆಯ ಪರಿಸರದ ಕೃಷಿಯಲ್ಲಿ ಆಸಕ್ತಿ ತಳೆದು ನೆಲೆಸಿದರು. 'ಸ್ವಗತ ಲಹರಿ ಮತ್ತು ಇತರ ಕವನಗಳು' ಕವಿತೆಗಳ ಸಂಗ್ರಹವಾದರೆ, 'ಹುಲಿಯೂರಿನ ಸರಹದ್ದು', 'ಅಬಚೂರಿನ ಪೋಸ್ಟಾಫೀಸು', 'ಕಿರಗೂರಿನ ಗಯ್ಯಾಳಿಗಳು', 'ಏರೋಪ್ಲೇನ್ ಚಿಟ್ಟೆ', 'ಮಿಸ್ಸಿಂಗ್ ಲಿಂಕ್', 'ಮಿಲೇನಿಯಂ ಸರಣಿ', 'ಪರಿಸರದ ಕತೆ' 'ಯಮಳ ಪ್ರಶ್ನೆ' ಏಕಾಂಕ ನಾಟಕ. 'ವ್ಯಕ್ತಿ ವಿಶಿಷ್ಟ ಸಿದ್ಧಾಂತ', 'ಸ್ವರೂಪ', 'ನಿಗೂಢ ಮನುಷ್ಯರು', 'ಕರ್ವಾಲೋ', 'ಚಿದಂಬರ ರಹಸ್ಯ', 'ಕಾಡು ಮತ್ತು ಕ್ರೌರ್ಯ', 'ಜುಗಾರಿ ಕ್ರಾಸ್' ಮುಂತಾದ ಕಥೆ, ಕಾದಂಬರಿ, ನಾಟಕ ಪ್ರಕಾರಗಳನ್ನು ರಚಿಸಿದ್ದಾರೆ. 'ಅಲೆಮಾರಿ ಅಂಡಮಾನ್ ಹಾಗೂ ಮಹಾನದಿ ನೈಲ್' ಪ್ರವಾಸ ಕಥನದ ಜೊತೆಗೆ ಒಂದು ನದಿಯ ಇತಿಹಾಸವನ್ನು ತೋರುತ್ತವೆ. 'ಅಣ್ಣನ ನೆನಪು' ತಂದೆ ಕುವೆಂಪು ಅವರ ಬಗೆಗಿನ ನೆನಪು ಮತ್ತು ಹಲವು ಚಿಂತನೆಗಳನ್ನು ಒಳಗೊಂಡಿದೆ. ಸಹಜ ಕೃಷಿಯಂತಹ ಸಣ್ಣ ಪುಸ್ತಕದಲ್ಲಿ, ಫ್ಯುಕೋಕನ ಸಹಜ ಕೃಷಿ ಪದ್ಧತಿಯ ಬಗ್ಗೆ ಬರೆದಿರುವ ಅವರ ಕಥನ, ಕೃಷಿಯ ಬಗ್ಗೆ ಯಾವುದೇ ಜ್ಞಾನ ಇಲ್ಲದವನಿಗೂ ಇಡೀ ಬದುಕಿನ ಬಗೆಗೆ ಹೊಸ ವ್ಯಾಖ್ಯಾನ ಓದಿದ ಅನುಭವ ನೀಡುತ್ತದೆ. ಅಂಕಣಕಾರರಾಗಿಯೂ ಅವರು ಕನ್ನಡಿಗರ ಹೃನ್ಮನಗಳನ್ನು ಸೆಳೆದವರು ಎಂದು ನಾಡೋಜ ಡಾ.ಮಹೇಶ ಜೋಶಿಯವರು ತೇಜಸ್ವಿಯವರ ಕೊಡುಗೆಗಳನ್ನು ಸ್ಮರಿಸಿಕೊಂಡರು.

ಪ್ರೊ. ಎಂ. ವಿ. ಸೀತಾರಾಮಯ್ಯನವರು ತಮ್ಮ ವಿದ್ವತ್ತು ಮತ್ತು ಸಂಶೋಧನೆಗಳಿಗಾಗಿ ಅಪಾರವಾಗಿ ಗೌರವಿಸಲ್ಪಟ್ಟಿದ್ದಾರೆ. ವ್ಯಾಕರಣ ಕ್ಷೇತ್ರದಲ್ಲಿ ಅವರ ಕೊಡುಗೆ ಅಪಾರವಾದದ್ದು ಎಂಬುದು ವಿದ್ವಾಂಸರ ಅಭಿಮತ. ಪ್ರಾರಂಭಿಕ ಕನ್ನಡ ವ್ಯಾಕರಣದ ಕುರಿತಾದ ಅವರ ಕೃತಿಯು ಅಪಾರ ಜನಪ್ರಿಯತೆ ಹೊಂದಿದ್ದು ಇತರ ಭಾಷೆಗಳಿಗೆ ಸಹಾ ಅನುವಾದಗೊಂಡಿವೆ. ಹಳಗನ್ನಡದ ಶಬ್ದಮಣಿ ದರ್ಪಣದ ಬಗೆಗೆ ಸುದೀರ್ಘವಾದ ಅಧ್ಯಯನ ಕೈಗೊಂಡ ಎಂ.ವಿ.ಸಿ. ಅವರು, ಅದರ ಕುರಿತಾದ ಒಂದು ಪರಿಷ್ಕೃತ ಕೃತಿಯನ್ನೂ ಪ್ರಕಟಿಸಿದರು. ಪ್ರೊ.ಎಂ.ವಿ.ಸೀ. ಅವರು ಶ್ರೀ ವಿಜಯನ 'ಕವಿರಾಜಮಾರ್ಗ'ವನ್ನು ಕುರಿತು ಕೂಲಂಕುಷ ಅಧ್ಯಯನ ನಡೆಸಿ ಅದರ ಕರ್ತೃತ್ವದ ಕುರಿತಾದ ಚರ್ಚೆಗೆ ಅಮೂಲ್ಯವಾದ ಮಾಹಿತಿ ಒದಗಿಸಿದ್ದಾರೆ. ಹಲವು ದಶಕಗಳಿಂದ ಉನ್ನತ ಅಧ್ಯಯನ ಮತ್ತು ಸಂಶೋಧನಾ ಕಾರ್ಯಗಳಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಿರುವ ಬಿ.ಎಂ.ಶ್ರೀ ಪ್ರತಿಷ್ಠಾನದ ಬೆಳವಣಿಗೆಯಲ್ಲಿ ಪ್ರೊ. ಎಂ.ವಿ. ಸೀತಾರಾಮಯ್ಯನವರ ಕೊಡುಗೆ ಮಹತ್ವಪೂರ್ಣವಾದುದು ಎಂದು ನಾಡೋಜ ಡಾ.ಮಹೇಶ ಜೋಶಿಯವರು ಅವರು ವಿವರಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗಶೆಟ್ಟಿ, ಡಾ.ಪದ್ಮಿನಿ ನಾಗರಾಜು, ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂಚಾಲಕರಾದ ಶ್ರೀಮತಿ ಮೀರಾಶಿವಲಿಂಗಯ್ಯ, ಮಂಡ್ಯ ಜಿಲ್ಲಾ ಕ.ಸಾ.ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ಕೃಷ್ಣೇಗೌಡ ಹೊಸ್ಸೂರು, ಕ.ಸಾ.ಪ ಅಂತರಾಷ್ಟ್ರೀಯ ಸಮನ್ವಯಾಧಿಕಾರಿ ಶ್ರೀಮತಿ ನಿವೇದಿತಾ ಹೊನ್ನತ್ತಿಯವರು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

# ವಿಶ್ವೇಶ್ವರಯ್ಯನವರು ಕನ್ನಡ ನಾಡು ಕಂಡ ದಾರ್ಶನಿಕ

## – ನಾಡೋಜ ಡಾ. ಮಹೇಶ ಜೋಶಿ



ಇಂದು ನಮ್ಮ ಕನ್ನಡದ ನೆಲ, ವಿಜ್ಞಾನ, ತಂತ್ರಜ್ಞಾನಗಳ ತವರೂರಾಗಿದೆ. ಇದರ ಬುನಾದಿಯಲ್ಲಿ ವಿಶ್ವೇಶ್ವರಯ್ಯನವರ ಅಗಾಧ ಪರಿಶ್ರಮ ದೂರದೃಷ್ಟಿ, ಸಮಾಜಮುಖಿ ಯೋಜನೆಗಳಿವೆ. ಅವರ ಪ್ರತಿಭೆಯನ್ನು ಮನಗಂಡು ಅವರೊಡನೆ ಸಹಕರಿಸಿದ, ಅವರ ಯೋಜನೆಗಳನ್ನು ಬೆಂಬಲಿಸಿದ ಮೈಸೂರು ಮಹಾರಾಜರು, ದಿವಾನರುಗಳ ಸಹಯೋಗವೂ ಇದೆ. ನಿಜವಾದ ಅರ್ಥದಲ್ಲಿ ವಿಶ್ವೇಶ್ವರಯ್ಯ ಮೈಸೂರು ಸಂಸ್ಥಾನದ ಭಾಗ್ಯವಿಧಾತ, ಆಧುನಿಕ ಕರ್ನಾಟಕದ ನಿರ್ಮಾಣಕ್ಕೆ ಕಾರಣರಾದವರು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ಹೇಳಿದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಏರ್ಪಡಿಸಿದ್ದ ಸರ್.ಎಂ.ವಿಶ್ವೇಶ್ವರಯ್ಯನವರ ೧೬೪ನೆಯ ಜನ್ಮದಿನ ಮತ್ತು ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡುತ್ತಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಆಧಾರ ಸ್ತಂಬಗಳಲ್ಲೊಬ್ಬರಾದ ಸರ್.ಎಂ.ವಿಶ್ವೇಶ್ವರಯ್ಯನವರು ಇಡೀ ದೇಶದ ಬೆಳವಣಿಗೆಗೆ ನೀಲಿನಕ್ಷೆಯನ್ನು ಹಾಕಿದವರು. ಬೆಂಗಳೂರಿನಲ್ಲಿ ನಾವು ನೀರು ಕುಡಿಯುವ ಮುನ್ನ ಅವರನ್ನು ಸ್ಮರಿಸಿಕೊಳ್ಳಬೇಕು. ಬಾಲ್ಯದ ಒಂದು ಘಟನೆ ಅವರನ್ನು ಈ ನಾಡಿನ ದಾಹ ತಣಿಸುವ ಕಾರ್ಯಕ್ಕೆ ಪ್ರೇರೇಪಿಸಿತು ಎಂದು ಹೇಳಿದ ನಾಡೋಜ ಡಾ.ಮಹೇಶ ಜೋಶಿಯವರು, ಸೆಪ್ಟೆಂಬರ್ ತಿಂಗಳಲ್ಲಿ ಗುರುಗಳ ದಿನಾಚರಣೆ ಬರುತ್ತದೆ ಹಾಗೆ ಗುರಿ ತೋರಿದ ಸರ್.ಎಂ.ವಿ. ಯವರ ಜನ್ಮದಿನಾಚರಣೆ ಕೂಡ ಬರುವುದು ವಿಶೇಷವಾಗಿದೆ. ಮಾನವೀಯತೆಯ ಸ್ಪರ್ಶವನ್ನು ಆಡಳಿತಕ್ಕೆ ನೀಡಿದ ಅವರಿಗೆ ಬಡತನದ ಬೇಗೆ ಬದುಕನ್ನು ಅನುಭವಿಸಿದರೂ, ಪ್ರಾಮಾಣಿಕತೆಗೆ ಒಂದು ರೂಪಕದಂತಿದ್ದ ಅವರು ತಮ್ಮ ಜೀವಿತ ಕಾಲದಲ್ಲಿಯೇ ದಂತಕತೆಯಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಅವರನ್ನು ಶ್ರದ್ಧೆಯಿಂದ ಸ್ಮರಿಸಿಕೊಳ್ಳುತ್ತಾ ಅವರು ಹಾಕಿ ಕೊಟ್ಟ ದಾರಿಯಲ್ಲಿ ಮುಂದೆ ಸಾಗಲಿದೆ ಎಂದು ಹೇಳಿದರು.

ಸರ್.ಎಂ.ವಿಶ್ವೇಶ್ವರಯ್ಯನವರ ಜೀವನ ಮತ್ತು ಸಾಧನೆಗಳ ಬಗ್ಗೆ ವಿಶೇಷ ಉಪನ್ಯಾಸವನ್ನು ನೀಡಿದ ಸಂಶೋಧಕ ಮತ್ತು ಕಾದಂಬರಿಕಾರ ಡಾ.ಗಜಾನನ ಶರ್ಮ, ಸರ್.ಎಂ.ವಿಯವರು ನೀಡಿದ ಕೊಡುಗೆಗಳಿಗಾಗಿ ದೇಶದ ಬೇರೆ ಬೇರೆ ಪ್ರಾಂತ್ಯದವರು ಹೆಮ್ಮೆಯಿಂದ ತಮ್ಮವರು ಎಂದು ಹೇಳಿಕೊಳ್ಳುತ್ತಾರೆ. ಕನ್ನಡಿಗರು ಅವರು ನೀಡಿದ ಅಸದಳ ಕೊಡುಗೆಗಳಿಗಾಗಿ ಹೆಮ್ಮೆಯಿಂದ ಬೀಗಬೇಕು ಎಂದರು. ಅಭಿವೃದ್ಧಿ ಎನ್ನುವುದು ಅರ್ಬುದ ರೋಗವಲ್ಲ ಎಂದು ಗುರುತಿಸಿದ್ದ ಸರ್.ಎಂ.ವಿ. ಅದು ಹೇಗೆ ಯೋಜಿತವಾಗಿ ನಾಡಿಗೆ ಬರಬೇಕು ಎಂದು ಗುರುತಿಸಿದ್ದರು. ಅವರ ೯೬ನೆಯ ವಯಸ್ಸಿನಲ್ಲಿ ಭೇಟಿ ಮಾಡಿದ್ದ ರಾಮ ಮನೋಹರ್ ಲೋಹಿಯಾ ಅವರು, ಗಾಂಧೀಜಿಯ ನಂತರ ದೇಶ ಕಂಡ ಬಹುದೊಡ್ಡ ಧೀಶಕ್ತಿ ಸರ್ ಎಂ.ವಿ ಎಂದಿದ್ದನ್ನು ನೆನಪು ಮಾಡಿಕೊಂಡು ಕೇವಲ ಕನಸಾಗಿದ್ದ ಎಷ್ಟೋ ಸಂಗತಿಗಳನ್ನು ಸರ್.ಎಂ.ವಿ. ಕನ್ನಡಿಗರಿಗೆ ನನಸಾಗಿಸಿದರು ಎಂದು ವಿಶ್ಲೇಷಿಷಿದರು.

ಮುಖ್ಯ ಅತಿಥಿಗಳಾಗಿದ್ದ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆಯ ಅಧ್ಯಕ್ಷರಾದ ರಮೇಶಚಂದ್ರ ಲಹೋಟಿಯವರು ಸರ್.ಎಂ.ವಿಯವರು ಕೈಗಾರಿಕೆಯನ್ನು ಬೆಳೆಸಿದ ಹಾಗೆ ಕಲೆಯನ್ನೂ ಬೆಳೆಸಿದ ಕ್ರಮವನ್ನು ಶ್ಲಾಘಿಸಿ ನಾಡೋಜ ಡಾ.ಮಹೇಶ ಜೋಶಿಯವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ತಂದಿರುವ ಮಹತ್ತರ ಬದಲಾವಣೆಗಳನ್ನು ಪ್ರಶಂಶಿಸಿ ವೈಯಕ್ತಿಕವಾಗಿ ಯುವ ಬರಹಗಾರರನ್ನು ಪ್ರೋತ್ಸಾಹಿಸುವ ಪುರಸ್ಕಾರವನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆರಂಭಿಸುವ ವಾಗ್ದಾನವನ್ನು ಮಾಡಿದರು. ಇದೇ ಸಂದರ್ಭದಲ್ಲಿ ೨೦೨೪ನೆಯ ಸಾಲಿನ 'ಗೌರಮ್ಮ ಗಂಗಾಧರಯ್ಯ ಮಕ್ಕಳ ಸಿಬ್ಬಂದಿ ಸೇವಾ ದತ್ತಿ ಪ್ರಶಸ್ತಿ'ಯನ್ನು ಎಂ.ಎನ್. ಸತೀಶ್ ಕುಮಾರ್ ಅವರಿಗೆ ಹಾಗೂ ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿಯನ್ನು ದಯಾನಂದಮೂರ್ತಿ ಅವರಿಗೆ ಪ್ರದಾನ ಮಾಡಲಾಯಿತು. ದತ್ತಿ ದಾನಿಗಳ ಪರವಾಗಿ ಎಂ.ಜಿ.ನಾಗರಾಜ್, ಪ್ರಶಸ್ತಿ ಪುರಸ್ಕೃತರ ಪರವಾಗಿ ಎಂ.ಎನ್. ಸತೀಶ್ ಕುಮಾರ್ ಮಾತನಾಡಿದರು. ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಚಾಲಕರಾದ ಡಾ.ಮೀರಾ ಶಿವಲಿಂಗಯ್ಯನವರು ಮಂಡ್ಯದ ಜೊತೆಗಿನ ಸರ್.ಎಂ.ವಿಯುವರ ಒಡನಾಟವನ್ನು ಸ್ಮರಿಸಿಕೊಂಡರು. ಇದೇ ಸಂದರ್ಭದಲ್ಲಿ ಬೆಂಗಳೂರು ನಗರದ ಹತ್ತು ಜಿಲ್ಲಾ ಘಟಕಗಳ ಅಧ್ಯಕ್ಷರ ಪದಗ್ರಹಣವೂ ನಡೆಯಿತು.



ಕಾರ್ಯಕ್ರಮಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗ ಶೆಟ್ಟರು ಸ್ವಾಗತ ಕೋರಿದರೆ, ಇನ್ನೊಬ್ಬ ಗೌರವ ಕಾರ್ಯದರ್ಶಿ ಡಾ. ಪದ್ಮಿನಿ ನಾಗರಾಜು ವಂದನಾರ್ಪಣೆಯನ್ನು ಮಾಡಿದರು. ಗೌರವ ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ ಪಾಂಡು ಕಾರ್ಯಕ್ರಮವನ್ನು ನಿರ್ವಹಿಸಿದರು. ದೊಡ್ಡ ಸಂಖ್ಯೆಯಲ್ಲಿ ಸರ್.ಎಂ.ವಿ. ಯವರ ಅಭಿಮಾನಿಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗ ವಹಿಸಿದ್ದರು. ★

# ಕನ್ನಡ ಸಾಹಿತ್ಯಕ್ಕೆ ಸಾಮಾಜಿಕ ಕಳಕಳಿಯನ್ನು ನೀಡಿದ ದಿನಕರ ದೇಸಾಯಿ

## – ನಾಡೋಜ ಡಾ ಮಹೇಶ ಜೋಶಿ

'ಚುಟುಕ ಬ್ರಹ್ಮ' ಎಂದೇ ಪ್ರಖ್ಯಾತರಾದ ದಿನಕರ ದೇಸಾಯಿ ಅವರು ಮಹತ್ವದ ಸಾಹಿತಿ ಮಾತ್ರವಲ್ಲದೆ, ಡಾ. ಶಿವರಾಮ ಕಾರಂತರು ಗುರುತಿಸಿರುವಂತೆ ಏಕವ್ಯಕ್ತಿ ಸೈನ್ಯವಾಗಿ ಉತ್ತರ ಕರ್ನಾಟಕದ ಜನರ ಏಳಿಗೆಗಾಗಿ ದುಡಿದ ಮಹಾನ್ ಧೀಮಂತ ನಾಯಕ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ಮಾತನಾಡುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಏರ್ಪಾಟಾಗಿದ್ದ ದಿನಕರ ದೇಸಾಯಿಯವರ ೧೧೫ನೆಯ ಹುಟ್ಟು ಹಬ್ಬದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

'ಟಿಕ್ ಟಿಕ್ ಗೆಳೆಯ ಟಿಕ್' ಕವಿತೆಯನ್ನು ತಾವು ಶಾಲಾದಿನಗಳಲ್ಲಿ ಓದಿದ್ದನ್ನು ನೆನಪು ಮಾಡಿಕೊಂಡ ಅವರು, ಸರಳವಾಗಿ ಕಂಡರೂ ಗಹನವಾದ ಜೀವನ ದರ್ಶನವನ್ನು ನೀಡುವುದು ಅವರ ಚುಟುಕಗಳ ವಿಶೇಷ. ಶಾಲಾ ಶಿಕ್ಷಕನ ಮಗನಾಗಿ ಜನಿಸಿದ ದೇಸಾಯಿ ಮುಂದೆ ಬಡವರ ಪಾಲಿಗೆ ಬಂಧುವಾದರು. ಮನೆ, ಮಠ ಇಲ್ಲದೆ ತುತ್ತು ಕೂಳಿಗೂ ಕಷ್ಟಪಡುತ್ತಿದ್ದ ಜನರಿಗೆ ಆಸರೆಯಾದರಲ್ಲದೆ ಪಸಿದ್ಧ ಬರಹಗಾರರೂ ಆಗಿದ್ದಾರೆ. ಕಾರ್ಮಿಕ ಸಂಘಟನೆಗಳಲ್ಲಿ ಅಪಾರವಾಗಿ ದುಡಿದು ಕಾರ್ಮಿಕರ ಹಿತರಕ್ಷಣೆ ಮಾಡಲು ಮತ್ತು ಬಡಜನರ ಉದ್ಧಾರಕ್ಕಾಗಿ ಅಹರ್ನಿಶಿ ದುಡಿದರು. ಉತ್ತರ ಕನ್ನಡ ಜಿಲ್ಲೆಯಲ್ಲಿನ ಸಾಕ್ಷರತಾ ಸಾಧನೆಯಲ್ಲಿ ಅವರ ಕೊಡುಗೆ ಅವಿಸ್ಮರಣೀಯವಾದುದು. ಲೋಕಸಭಾ ಸದಸ್ಯರಾಗಿ ಕೂಡಾ ಅವರು ನೀಡಿದ ಕೊಡುಗೆ ಪ್ರಶಂಸನೀಯವಾದುದು.

ದಿನಕರರು ೧೯೩೮ರಲ್ಲಿ ಮುಂಬೈನ ಹಡಗು ಕಾರ್ಮಿಕರ ಸಂಘಟನೆಯ ನೇತ್ರತ್ವ ವಹಿಸಿದರು. ೧೯೫೩ರಲ್ಲಿ ಕೆನರಾ ವೆಲ್‌ಫೇರ್ ಟ್ರಸ್ಟ್ ಸ್ಥಾಪಿಸಿದರು. ಅವರು ಅಂಕೋಲದಲ್ಲಿ 'ಜನಸೇವಕ' ಎಂಬ ಪತ್ರಿಕೆಯನ್ನೂ ನಡೆಸುತ್ತಿದ್ದರು. ಪ್ರಸಿದ್ಧ ಬರಹಗಾರರಾದ ಗೌರೀಶ್ ಕಾಯ್ಕಿಣಿ ಅವರು ಬಹಳವರ್ಷ ಈ



ಪತ್ರಿಕೆಯಲ್ಲಿ ಬರೆಯುತ್ತಿದ್ದರು. ಇಂದು ಅವರು ಹುಟ್ಟು ಹಾಕಿದ ಕೆನರಾ ವೆಲ್‌ಫೇರ್ ಟ್ರಸ್ಟ್ ಶಿಕ್ಷಣ ಕ್ಷೇತ್ರದಲ್ಲಿ ಹೆಮ್ಮರವಾಗಿ ಬೆಳೆದು ನಿಂತಿದೆ ಎಂದು ನಾಡೋಜ ಡಾ.ಮಹೇಶ ಜೋಶಿಯವರು ವಿಶ್ಲೇಷಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕರಾದ ಎನ್.ಎಸ್.ಶ್ರೀಧರ ಮೂರ್ತಿಯವರು ಮಾತನಾಡಿ ದಿನಕರ ದೇಸಾಯಿಯವರು ಜನಪ್ರತಿನಿಧಿಯಾಗಿ ಆಯ್ಕೆಯಾದ ಮೊದಲ ಬರಹಗಾರರು. ಬರಹದ ಸಾಮಾಜಿಕ ಮುಖವನ್ನು ಎತ್ತಿ ಹಿಡಿದ ಅವರು ಬರಹದಲ್ಲಿ ತೋರಿದ ಪ್ರಾಮಾಣಿಕತೆಯನ್ನೇ ಸಂಸತ್ ಸದಸ್ಯರಾಗಿಯೂ ತೋರಿ ಆ ಸ್ಥಾನದ ಘನತೆ ಗೌರವಗಳನ್ನು ಎತ್ತಿ ಹಿಡಿದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗಶೆಟ್ಟಿ, ಡಾ.ಪದ್ಮಿನಿ ನಾಗರಾಜು, ಗೌರವ ಕೋಶಾಧ್ಯಕ್ಷರಾದ ಡಾ.ಬಿ.ಎಂ.ಪಟೇಲ ಪಾಂಡು, ಕ.ಸಾ.ಪ ಅಂತರಾಷ್ಟ್ರೀಯ ಸಮನ್ವಯಾಧಿಕಾರಿ ಶ್ರೀಮತಿ ನಿವೇದಿತಾ ಉನ್ನತಿಯವರು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಸಿಬ್ಬಂದಿ ವರ್ಗದರು ಭಾಗವಹಿಸಿದ್ದರು. ★

# ಹಿರಿಯ ಕಥೆಗಾರ ಡಾ.ರಾಜಶೇಖರ ನೀರಮಾನ್ವಿಯವರ ನಿಧನ

## - ನಾಡೋಜ ಡಾ.ಮಹೇಶ ಜೋಶಿ ತೀವ್ರ ಸಂತಾಪ



ಹಿರಿಯ ಕಥೆಗಾರ ಡಾ.ರಾಜಶೇಖರ ನೀರಮಾನ್ವಿಯವರು ತಮ್ಮ ೮೩ನೆಯ ವಯಸ್ಸಿನಲ್ಲಿ ನಮ್ಮನ್ನು ಅಗಲಿರುವುದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ. ನೀರಮಾನ್ವಿಯವರು ಬರೆದಿದ್ದು ಕಡಿಮೆಯಾದರೂ, ಗುಣಮಟ್ಟದಲ್ಲಿ ಉನ್ನತವಾದುದು. ಅವರು ಬರೆದಿರುವ 'ಹಂಗಿನರಮನೆಯೊಳಗೆ' ಮತ್ತು ಕರ್ಪೂರದ ಕಾಯಕದಲ್ಲಿ' ಕಥಾ ಸಂಕಲನದ ಕಥೆಗಳನ್ನು ಕನ್ನಡಿಗರು ಸದಾ ಸ್ಮರಿಸುತ್ತಾರೆ ಎಂದಿರುವ ನಾಡೋಜ ಡಾ.ಮಹೇಶ ಜೋಶಿಯವರು, ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ನೀರಮಾನ್ವಿಯವರು ಇಟ್ಟುಕೊಂಡಿದ್ದ ಸಂಬಂಧವನ್ನು ನೆನಪು ಮಾಡಿಕೊಂಡು, ೯ನೆಯ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿನ ಅರ್ಥಪೂರ್ಣ ಮಾತುಗಳನ್ನು ನೆನಪು ಮಾಡಿಕೊಂಡಿದ್ದಾರೆ.

ರಾಯಚೂರು ಜಿಲ್ಲೆಯ ನೀರಮಾನ್ವಿಯಲ್ಲಿ ಜನಿಸಿದ ರಾಜಶೇಖರ ನೀರಮಾನ್ವಿಯವರು, ಮೂಲತಃ ಭೂವಿಜ್ಞಾನದ ವಿದ್ಯಾರ್ಥಿಯಾಗಿದ್ದರು. ಆದರೆ, ಕನ್ನಡ ಭಾಷೆ ಮತ್ತು ಸಾಹಿತ್ಯದ ಆಸಕ್ತಿಯಿಂದಾಗಿ, ಕತೆಗಳನ್ನು ಬರೆದಿರುವ ಅವರ ಸಾಧನೆ ಮಹತ್ವದ್ದಾಗಿದೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಭೂ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡ ನಂತರದಲ್ಲಿ, 'ಆರ್ಥಿಕ ಭೂವಿಜ್ಞಾನ' ವಿಷಯದಲ್ಲಿ ಡಾಕ್ಟೊರೇಟ್ ಪಡೆದುಕೊಂಡು ನೀರಮಾನ್ವಿಯವರು ಬಳ್ಳಾರಿಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. 'ಪ್ರತೀಕ' ಎಂಬ ಸಾಹಿತ್ಯ ಪತ್ರಿಕೆಯನ್ನೂ ಕೂಡ ಹೊರ ತಂದಿದ್ದ ಅವರು, ಉತ್ತರ ಕರ್ನಾಟಕದ ಅದರಲ್ಲಿಯೂ ಮುಖ್ಯವಾಗಿ ರಾಯಚೂರು ಜಿಲ್ಲೆಯ ಬರಹಗಾರರನ್ನು ಪ್ರೋತ್ಸಾಹಿಸಿದರು ಎಂದು, ಅವರು ನೀಡಿರುವ ಕೊಡುಗೆಗಳನ್ನು ನಾಡೋಜ ಡಾ.ಮಹೇಶ ಜೋಶಿಯವರು ಸ್ಮರಿಸಿಕೊಂಡು, ಅವರ ಅಗಲಿಕೆಯ ದುಃಖವನ್ನು ಸಹಿಸಿಕೊಳ್ಳುವ ಶಕ್ತಿ ಅವರ ಕುಟುಂಬ ವರ್ಗದವರಿಗೆ ದೇವರು ನೀಡಲಿ ಎಂದು ನುಡಿದರು. ★

# ನವಕರ್ನಾಟಕದ ಆರ್. ಎಸ್. ರಾಜಾರಾಮ್ ನಿಧನ

## - ನಾಡೋಜ ಡಾ.ಮಹೇಶ ಜೋಶಿ ತೀವ್ರ ಸಂತಾಪ



ನವಕರ್ನಾಟಕ ಪ್ರಕಾಶನ ಸಂಸ್ಥೆಯ ಮೂಲಕ ಅಕ್ಷರ ಕ್ರಾಂತಿಯನ್ನು ಮಾಡಿದ್ದ ಆರ್.ಎಸ್. ರಾಜಾರಾಮ್ ಅವರ ನಿಧನಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿ ತೀವ್ರ ಸಂತಾಪವನ್ನು ಸೂಚಿಸಿದ್ದಾರೆ. ನವಕರ್ನಾಟಕ ಪ್ರಕಾಶನವು ಇಲ್ಲಿಯವರೆಗೆ ಸುಮಾರು ೬೦೦೦ ಕನ್ನಡದ ವಿಶಿಷ್ಟ ಕೃತಿಗಳನ್ನು ಪ್ರಕಟಿಸಿದೆ. ಈ ಬೃಹತ್ ಸಾಧನೆಯ ಹಿಂದೆ ಸುಮಾರು ಐದು ದಶಕಗಳಿಗೂ ಹೆಚ್ಚಿನ ಕಾಲ ಆರ್.ಎಸ್.ರಾಜಾರಾಮ್ ಅವರು ಶ್ರಮ ವಹಿಸಿದ್ದರು. 'ಪುಸ್ತಕಗಳ ಮೂಲಕ ಮನುಕುಲದ ಸೇವೆ' ಎಂಬ ನವಕರ್ನಾಟಕದ ಘೋಷವಾಕ್ಯದ ಮೂಲಕ ಕನ್ನಡಿಗರಿಗೆ ಉತ್ತಮ ಪುಸ್ತಕಗಳು ದೊರಕುವಂತೆ ಮಾಡಿದವರು ರಾಜಾರಾಮ್ ಎಂದು ಅವರು ಎಂದು ಅಭಿಪ್ರಾಯಪಟ್ಟಿದ್ದಾರೆ.

ನವಕರ್ನಾಟಕ ಸಂಸ್ಥೆಯನ್ನು ಸ್ವತಂತ್ರ ಪ್ರಕಾಶನ ಸಂಸ್ಥೆಯಾಗಿ ಬೆಳೆಸಲೇಬೇಕೆಂಬ ಆಕಾಂಕ್ಷೆಯಿಂದ ರಾಜಾರಾಮ್ ರೂಪಿಸಿದ 'ವಿಶ್ವ ಕಥಾಕೋಶ' ೮೭ ದೇಶಗಳ ೩೧೭ ಕಥೆಗಳ ಸಂಗ್ರಹ. ಅವುಗಳನ್ನು ಅನುವಾದ ಮಾಡಲು ಲೇಖಕರ ಪಡೆಯೇ ಮೂಡಿತು. ಅನೇಕ ರಾಯಭಾರ ಕಛೇರಿಗಳಿಗೆ ಪತ್ರ ಬರೆದು ಒಪ್ಪಿಗೆ ಪಡೆದರು. ನಿರಂಜನ ಅವರನ್ನು ಸಂಪಾದಕರಾಗಲು ಒಪ್ಪಿಸಿದರು. ಇದು ಕನ್ನಡ ಸಾರಸ್ವತ ಲೋಕದಲ್ಲಿ ಮೈಲುಗಲ್ಲಾಗಿದೆ ಎಂದಿರುವ ನಾಡೋಜ ಡಾ.ಮಹೇಶ ಜೋಶಿ 'ಕರ್ನಾಟಕದ ಏಕೀಕರಣ ಇತಿಹಾಸ' (ಸಂ: ಡಾ.ಎಚ್.ಎಸ್.ಗೋಪಾಲರಾವ್), 'ಪ್ರಜಾವಾಣಿ' ಪತ್ರಿಕೆಯ ಜನಪ್ರಿಯ ಅಂಕಣವಾಗಿದ್ದ ಪ್ರೊ.ಜಿ.ವೆಂಕಟಸುಬ್ಬಯ್ಯನವರ 'ಇಗೋ ಕನ್ನಡ'ದ ಗ್ರಂಥರೂಪ, ಪ್ರೊ.ಜಿ.ರಾಮಕೃಷ್ಣ ಅವರ ಸಂಪಾದಕತ್ವದಲ್ಲಿ ಹೊರಬಂದ 'ಸ್ವಾತಂತ್ರ್ಯೋತ್ತರ ಭಾರತ ಅವಲೋಕನ', ಹಾ.ಮಾ.ನಾಯಕ್ ಮತ್ತು ಅನಂತರ ಡಾ. ಪ್ರಧಾನ ಗುರುದತ್ ಅವರ ಸಂಪಾದಕತ್ವದಲ್ಲಿ ಹೊರಬಂದ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕನ್ನಡ ಲೇಖಕರನ್ನು ಕುರಿತು 'ನವಕರ್ನಾಟಕ ಸಾಹಿತ್ಯ ಸಂಪದ', ಜಗತ್ತಿನ ಅನೇಕ ಮಹನೀಯರನ್ನು ಕುರಿತು ಅನೇಕ ಲೇಖಕರ ಬರಹ ಒಳಗೊಂಡ ಡಾ.ನಾ.ಸೋಮೇಶ್ವರ ಅವರ ಸಂಪಾದನಾ ನೇತೃತ್ವದ 'ವಿಶ್ವಮಾನ್ಯರು' ಮಾಲಿಕೆ, ವಿಜ್ಞಾನ ಪ್ರಸರಣ ಉದ್ದೇಶದ 'ಜ್ಞಾನ ವಿಜ್ಞಾನ ಕೋಶ' ಇಂತಹ ಹತ್ತಾರು ಕೃತಿಗಳ ಮೂಲಕ ರಾಜಾರಾಮ್ ಕನ್ನಡ ಪುಸ್ತಕ ಲೋಕಕ್ಕೆ ಗೌರವ ಘನತೆ ತಂದರು. 'ನೆಮ್ಮದಿಯ ನಾಳೆ ನಮ್ಮದು' ಎಂದು ಅವರ ನೀಡಿದ ಘೋಷವಾಕ್ಯ, ಅಕ್ಷರ ಲೋಕದ ಬಗ್ಗೆ ಅವರಿಗೆ ಇದ್ದ ನಂಬಿಕೆಗೆ ನಿದರ್ಶನವಾಗಿತ್ತು. ಅವರು ರೂಪಿಸಿದ 'ಹೊಸತು' ಪತ್ರಿಕೆ ಕನ್ನಡ ಪತ್ರಿಕೋದ್ಯಮಕ್ಕೆ ಹೊಸತನ್ನೇ ನೀಡಿತು. ರಾಜಾರಾಮ್ ಅವರ ಕೊಡುಗೆಗಳು ನಮಗೆಲ್ಲರಿಗೂ ಮಾದರಿ, ಅವರ ಸ್ಮರಣೆ ಉಳಿಯುವಂತಹ ಕೆಲಸಗಳಾಗಲಿ ಎಂದು ನಾಡೋಜ ಡಾ.ಮಹೇಶ ಜೋಶಿ ಆಶಿಸಿದ್ದಾರೆ. ★



ಸರ್ ಎಂ.ವಿ. ಜನ್ಮದಿನಾಚರಣೆಯ ಸಂದರ್ಭದಲ್ಲಿ ಪರಿಷತ್ತಿನ ಸಿಬ್ಬಂದಿಗಳಿಗೆ ಪ್ರಶಸ್ತಿ ಪ್ರದಾನ

## 'ಕನ್ನಡ ನುಡಿ'ಯ ಮಾಲೀಕತ್ವ ಇತರ ವಿವರಗಳಿಗೆ ಸಂಬಂಧಪಟ್ಟ ತಃಖ್ತೆ

### ಫಾರಂ–೪

| | | |
|---|---|---|
| ೧. ಪ್ರಕಟಣೆಯ ಸ್ಥಳ | : | ಬೆಂಗಳೂರು |
| ೨. ಪ್ರಕಟವಾಗುವ ಅವಧಿ | : | ತ್ರೈಮಾಸಿಕ |
| ೩. ಮುದ್ರಕರ ಹೆಸರು | : | ಬಿ.ಎಂ. ಶ್ರೀಕಂಠಯ್ಯ ಅಚ್ಚುಕೂಟ ಆಫ್‌ಸೆಟ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು |
| ರಾಷ್ಟ್ರೀಯತೆ/ವಿಳಾಸ | : | ಭಾರತೀಯ/ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮ |
| ೪. ಪ್ರಕಾಶಕರ ಹೆಸರು | : | ಕನ್ನಡ ಸಾಹಿತ್ಯ ಪರಿಷತ್ತು |
| ರಾಷ್ಟ್ರೀಯತೆ/ವಿಳಾಸ | : | ಸಾಹಿತ್ಯಿಕ ಸಾಂಸ್ಕೃತಿಕ ಸಂಸ್ಥೆ (ಭಾರತೀಯ ಸಂಸ್ಥೆ) ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮ |
| ೫. ಸಂಪಾದಕರ ಹೆಸರು | : | ಡಾ. ಡಿ.ಕೆ. ನಟರಾಜ್ |
| ರಾಷ್ಟ್ರೀಯತೆ/ವಿಳಾಸ | : | ಭಾರತೀಯ/ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,ಬೆಂಗಳೂರು–೧೮ |
| ೬. ನೋಂದಣಿ ಸಂಖ್ಯೆ | : | Reg. No. RNP/KA/BGS/90/2012-2014 RNI No.KARKAN/13252/1967 Licence No. WPP No.(10)-7 |
| ೭. ಪತ್ರಿಕೆಯ ಮಾಲೀಕರು | : | ಕನ್ನಡ ಸಾಹಿತ್ಯ ಪರಿಷತ್ತು |

ನಾನು ನಾಡೋಜ ಡಾ. ಮಹೇಶ ಜೋಶಿ ಮೇಲಿನ ಅಂಶಗಳೆಲ್ಲ ಸತ್ಯ ಎಂದು ನನ್ನ ಜ್ಞಾನ ಮತ್ತು ನಂಬಿಕೆಗಳಿಂದ ದೃಢಪಡಿಸುತ್ತೇನೆ.

**ಬೆಂಗಳೂರು**
ಿ
**೩೦ನೇ ಸೆಪ್ಟಂಬರ್ ೨೦೨೪**

**ಅಧ್ಯಕ್ಷರು**
ಕನ್ನಡ ಸಾಹಿತ್ಯ ಪರಿಷತ್ತು

## 'KANNADA NUDI' MAGZINE OWNERSHIP DETAILS

### FORM - 4

| | | |
|---|---|---|
| 1. Printing Place | : | **Bengaluru** |
| 2. Type of Publication | : | **Quaterly Magzine** |
| 3. Printers Name | : | **B.M. Srikantaiah offset Printers,** Kannada Sahitya Parishattu |
| Nationality | : | **Institution** |
| Address | : | **Kannada Sahitya Parishattu,** Chamarajpete Bengaluru- 560 018 |
| 4. Publisher Name | : | **Kannada Sahitya Parishattu** |
| Nationality | : | **Institution** |
| Address | : | **Kannada Sahitya Parishattu,** Pampa Mahakavi Road, Chamarajapete, Bengaluru - 560 018. |
| 5. Editor's Name | : | **Dr. D.K. Nataraja** |
| Nationality | : | **Indian** |
| Address | : | **Kannada Sahitya Parishattu,** Pampa Mahakavi Road, Chamarajapete, Bengaluru- 560 018 |
| ೬. Registration No. | : | Reg. No. RNP/KA/BGS/90/ 2012-2014 RNI No.KARKAN 13252/1967 Licence No. WPP No.(10)-7 |
| ೭. Magzine Ownership: | | **Kannada Sahitya Parishattu,** Bengaluru |

I, **Nadoja Dr. Mahesh Joshi,** President, kannada Sahitya Parishattu, here by declare that particulars given above are true to the best of my knowledge and belief.

**Bengaluru**
**30th September 2024**

**President**
Kannada Sahitya Parishattu

**KANNADA NUDI:** May 2023 - April 2024, "Registered with the registrar of Newspaper of in India under serial No: KARKAN/13252/1967"




ಸಂಪಾದಕರು : ಡಾ. ಡಿ.ಕೆ. ನಟರಾಜ, ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮ ದೂರವಾಣಿ: ೦೮೦-೨೬೬೧೨೯೯೧, ೨೬೬೨೩೫೮೪, ೨೨೪೨೩೮೬೭, ೨೬೬೧೨೯೯೨